1927 ಗ್ರಂಥಾಲಯ

ಶಿವಾನುಭವ ಗ್ರಂಥಮಾಲಾ ನಂ|| ೧೧೭

SHRI SIDDHESHWAR LIBRARY BIJAPUR
140

# ಲಿಂಗ ಮತ್ತು ಪರಮಾತ್ಮ.

Q234:31
33H41
6343

ಸಂಪಾದಕರು

**ರಾ|| ಸಾ|| ಫ. ಗು. ಹಳಕಟ್ಟಿ**

**ಬಿ. ಎ. ಎಲ್ ಎಲ್. ಬಿ. ವಕೀಲ**

The Vijay College
LIBRARY.
VIJAY COLLEGE,
BIJAPUR.

ವಿಜಾಪುರ.

೧೯೩೭

ಬೆಲೆ ೦೨ ಆಣೆ.

140

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು ಮತ್ತು
ಅವರು ವಿಜಾಪುರದಲ್ಲಿ ಉಪಲೀಬುರಜದ ಹತ್ತಿರ ತಮ್ಮ
೧೬೨೦ (ಅ) ನೇ ಮನೆಯಲ್ಲಿ ಪ್ರಕಟಿಸಿದರು.

(ಈ ಗ್ರಂಥದ ಸ್ವಾಮಿತ್ವವು ಗ್ರಂಥಕರ್ತರಿಂದ ಕಾದಿಡಲ್ಪಟ್ಟಿದೆ.)

# ಪ್ರಸ್ತಾವನೆ.

ಈ ಪುಸ್ತಕದಲ್ಲಿ ವೀರಶೈವರಲ್ಲಿ ಪರಮಾತ್ಮ, ಲಿಂಗ ಮತ್ತು
ಮೋಕ್ಷ ಇವುಗಳ ಬಗ್ಗೆ ಇರುವ ವಿಚಾರಗಳನ್ನು ಶಿವಶರಣರ ಉಕ್ತಿ
ಗಳ ಮೂಲಕ ವಿವರಿಸಲು ಯತ್ನಿಸಿದ್ದೇನೆ. ಈ ಮೂರು ವಿಷಯ
ಗಳಿಗನುಸಾರವಾಗಿ ಈ ಪುಸ್ತಕದಲ್ಲಿ ಮೂರು ಭಾಗಗಳು ಮಾಡಲ್ಪ
ಟ್ಟಿವೆ. ಈ ವಚನಗಳಲ್ಲಿ ವಿವರಿಸಿದ ವಿಚಾರಗಳು ಎಷ್ಟು ಘನತರ
ವಾದವುಗಳೂ ಸುಂದರವೂ ಇರುತ್ತವೆಂಬದು ಇವುಗಳನ್ನು ಓದಿದ
ಕೂಡಲೆ ವಾಚಕರ ನಿದರ್ಶನಕ್ಕೆ ಬರದೆ ಇರಲಾರದು. ಈ ಕಾಲಕ್ಕೆ
ವೀರಶೈವರಲ್ಲಿ ಈ ಮಹತ್ವದ ವಿಷಯಗಳ ಬಗ್ಗೆ ನಾನಾವಿಧ ವಿಚಾ
ರಗಳು ವಾಡಿಕೆಯಲ್ಲಿವೆ. ಇವುಗಳು ಎಷ್ಟು ಅಕ್ರಮವಾದವುಗಳೆಂಬದು
ಈ ಉಕ್ತಿಗಳಿಂದ ವಾಚಕರಿಗೆ ಕೂಡಲೆ ತಿಳಿದು ಬರುವಂತೆ ಇದೆ.
ಒಂದು ಧರ್ಮದ ಶುದ್ಧ ಸ್ವರೂಪವು ಆ ಧರ್ಮದಲ್ಲಿ ಪರಮಾತ್ಮಮತ್ತು
ಮೋಕ್ಷ ಇವುಗಳ ಬಗ್ಗೆ ಪ್ರಚಲಿತವಿರುವ ವಿಚಾರಗಳ ಮೇಲೆ ಬಹಳ
ಅವಲಂಬಿಸಿರುತ್ತದೆ. ಆದ್ದರಿಂದ ಈ ವಿಷಯಗಳ ಮರ್ಮವನ್ನು ವೀರ
ಶೈವರು ಅರಿಯುವದು ಅವಶ್ಯವೆಂದು ನಾನು ಈ ಗ್ರಂಥವನ್ನು ಪ್ರಕ
ಟಿಸಿದ್ದೇನೆ. ಇದರಲ್ಲಿ ಕಾಣಿಸಿದ ವಚನಗಳು ನಾನು ಈ ಮೊದಲಿಗೇ
ರಚಿಸಿರುವ "ವಚನಶಾಸ್ತ್ರಸಾರ" ಗ್ರಂಥದೊಳಗಿಂದ ಬಹುತರವಾಗಿ
ತೆಗೆದುಕೊಳ್ಳಲ್ಪಟ್ಟಿವೆ.

ತಾ॥ ೧೪-೪-೨೭
ವಿಜಾಪುರ

ಫ. ಗು. ಹಳಕಟ್ಟಿ

# ಪರಮಾತ್ಮನ ಸ್ವರೂಪು.

## ಪರಮಾತ್ಮನ ಮೂಲಸ್ವರೂಪು.

೧. ಅಯ್ಯಾ, ನಿರವಯ ಶೂನ್ಯಲಿಂಗ ಮೂರ್ತಿಯ ನಿಲುಕಡೆ ಎಂತೆಂದೊಡೆ, ಸಾಕಾರನಲ್ಲ ನಿರಾಕಾರನಲ್ಲ ನೋಡಾ. ನಿರವಯ ಶೂನ್ಯಲಿಂಗ ಮೂರ್ತಿ ಆದಿಯಲ್ಲ, ಅನಾದಿಯಲ್ಲ, ಇಹಪರದವನಲ್ಲ, ಸುಖದವನಲ್ಲ, ದುಃಖದವನಲ್ಲ. ನಿರವಯ ಶೂನ್ಯಲಿಂಗ ಮೂರ್ತಿ ಪುಣ್ಯಪಾಪದವನಲ್ಲ, ಕರ್ತೃಭೃತ್ಯನಲ್ಲ, ಕಾರಣಕಾರ್ಯನಲ್ಲ, ಧರ್ಮಿಕರ್ಮಿಯಲ್ಲ, ಪೂಜ್ಯ ಪೂಜಕನಲ್ಲ. ಇಂತು ಉಭಯವಳಿದು ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು.

೨. ಅಯ್ಯಾ ನಾಟಕನಲ್ಲ, ಬೂಟಕನಲ್ಲ, ಶೀಲಿಗನಲ್ಲ, ಕಪಟ ನಾಟಕನಲ್ಲ, ರುಂಡಮಾಲಿಗ ಪುಲಿಚರ್ಮ ಗಜಚರ್ಮನಲ್ಲ, ದಕ್ಷಧ್ವಂಸನಲ್ಲ, ತ್ರಿಪುರಾರಿಯಲ್ಲ, ನಂದಿವಾಹನನಲ್ಲ, ಸರ್ಪಧರ ಚಂದ್ರಶೇಖರನಲ್ಲ, ಗಂಗಾಧರ ಗೌರೀವರನಲ್ಲ, ಗಿರಿಜಾವಲ್ಲಭ ಪಾರ್ವತೀಪ್ರಿಯನಲ್ಲ, ಯೋಗಿ ಜೋಗಿಯಲ್ಲ, ಶ್ರವಣಸನ್ಯಾಸಿಯಲ್ಲ, ಕಾಳಾಮುಖಿಯಲ್ಲ, ಪಾಶುಪತಿಯಲ್ಲ, ನೋಡಾ ನಿರವಯ ಶೂನ್ಯಲಿಂಗ ಮೂರ್ತಿ ಗುಹೇಶ್ವರಲಿಂಗವು.

೩. ಧರೆಯಾಕಾಶವಿಲ್ಲದಂದು, ತ್ರೈಮಂಡಲ ನೆಲೆಗೊಳ್ಳದಂದು, ಹೋಮ, ನೇಮ, ಜಪ, ತಪವಿಲ್ಲದಂದು ನಿಮ್ಮನ್ನಾರು ಬಲ್ಲರು? ಹರಿಬ್ರಹ್ಮರಿಗೆ ಅಗೋಚರ, ನಿರ್ಲೇಪ, ನಿರಂಜನನಾಗಿ, ವೇದಂಗಳರಿಯವು. ಶಾಸ್ತ್ರ, ಶೃತಿ, ಸ್ಮೃತಿಗಳು ನಿಮ್ಮನರಿಯವು. ಗಗನಕಮಳ

ಕುಸುಮ ಪರಿಮಳದಿಂದತ್ತಲು. ಗುಹೇಶ್ವರಾ ನಿಮ್ಮ ನಿಲವನಾರು ಬಲ್ಲರು ?

೪. ಆದಿ ಅನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡವಿಲ್ಲದಂದು ತಾನೆ. ನಾದಬಿಂದು ಕಳಾತೀತನು ಜನಪರಮರಿಲ್ಲದಂದು ತಾನೆ. ನಾಮರೂಪು ಕ್ರಿಯಾತೀತನು ಸಚರಾಚರಂಗಳೆಲ್ಲ ರಚನೆಗೆ ಬಾರದಂದು ತಾನೆ. ಅಖಂಡ ಪರಿಪೂರ್ಣನು, ಅಪ್ರಮಾಣ, ಅಗಮ್ಯ, ಅಗೋಚರದತ್ತಲಾದ ಮಹಾಘನ ಚೈತನ್ಯಲಿಂಗ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೫. ದ್ವೀಪಾದ್ವೀಪವಿಲ್ಲದಲಿಂದತ್ತತ್ತ, ಕಾಲಕರ್ಮವಿಲ್ಲದಲಿಂದತ್ತತ್ತ, ಮಾಯಾ ಮೋಹವಿಲ್ಲದಲಿಂದತ್ತತ್ತ, ಏನೂ ಏನೂ ಇಲ್ಲದಲಿಂದತ್ತತ್ತ. ಆದಿ ಮೂವರಿಲ್ಲದಲಿಂದತ್ತತ್ತ, ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವಿಲ್ಲದಲಿಂದತ್ತತ್ತ.

೬. ಅಂಡಜ ಒಡೆಯದುದರಿಂದ ಮುನ್ನ, ದ್ವೀಪಾದ್ವೀಪವಿಲ್ಲದರಿಂದ ಮುನ್ನ, ಅನಲಪವನವಿಲ್ಲದರಿಂದ ಮುನ್ನ, ರವಿಶಶಿಗಳಿಲ್ಲದರಿಂದ ಮುನ್ನ, ಇಂತೀ ಚತುರ್ವಿಧ ಒಂದಾಗದ ಮುನ್ನ, ಗುಹೇಶ್ವರಲಿಂಗವಿಲ್ಲದರಿಂದ ಮುನ್ನ.

೭. ಶೂನ್ಯಹೃದಯ ನಿಶ್ಶೂನ್ಯವಿಲ್ಲದಂದು, ಬ್ರಹ್ಮ, ವಿಷ್ಣು, ಮಹೇಶ್ವರರಿಲ್ಲದಂದು, ಹದಿನಾಲ್ಕು ಭುವನದಿಗ್ವಳಯವಿಲ್ಲದಂದು, ಕೂಡಲಚನ್ನಸಂಗನೆಂಬ ಹೆಸರು ಮುನ್ನಿಲ್ಲದಂದು.

## ಸೃಷ್ಟಿಯ ರಚನೆ.

೧. ಮಹಾ ಕರ್ತನು ತನ್ನ ಶಕ್ತಿಯ ವಿನೋದಕ್ಕೆ ಜಗವ ನಿರ್ಮಿಸಿದ. ಅನಂತ ಲೋಕಂಗಳನ್ನು, ಚಂದ್ರ ಸೂರ್ಯ ನಕ್ಷತ್ರ ಸಿಡಿಲು



ಮಿಂಚುಗಳನ್ನು, ಕಾಲಕರ್ಮ ಪ್ರಳಯಂಗಳನ್ನು, ಹೆಣ್ಣು ಗಂಡು ಜಾತಿ ವಿಜಾತಿಗಳಾದ ನರಸುರತಿರ್ಯಗ್ಜಾತಿ ಸ್ಥಲ ಭೋಗ ಆಯುಷ್ಯ ನಿದ್ರೆ ಮೊದಲಾದ ಸಮಸ್ತ ಪ್ರಪಂಚಗಳನ್ನು, ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳನ್ನು ಹುಟ್ಟಿಸಿದ ತನ್ನ ವಿನೋದಕ್ಕೆ. ಯಂತ್ರವಾಹಕನು ಮಾಡಿದ ಕಟ್ಟಣೆಯನಾರಿಗೂ ತಿಳಿಯಬಾರದು ನೋಡಾ. ಸರ್ವಜ್ಞರು ಮಲಪಾಶದಿಂದ ಬಂಧಿಸಿಕೊಂಬ ಪಶುಗಳಾದರು, ತಾ ಪಶುಪತಿಯಾದ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೨. ಮರದೊಳಗಣ ಪತ್ರ ಫಲಂಗಳು ಮರಕಾಲವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಛೆಗೆ ತೋರುವವು. ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರಾ.

೩. ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚನು. ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಂಗಳಲ್ಲಿ. ಇಂತೆನ್ನ, ಚನ್ನಮಲ್ಲಿಕಾರ್ಜುನನೆಂಬ ಪರಶಿವನು ಜಗದ್ವಿಲಾಸ ಸಾಕಾದಡೆ, ಮತ್ತೆ ಪರಿವನಾ ಮಾಯಾ ಪಾಶವನು.

೪. ಹೊದ್ದು ಹೊದ್ದೆಂಬುದು ಇಲ್ಲದ ದೇವಾ, ನಿಮ್ಮಿಂದ ನೀವೇ ಶೂನ್ಯದಲ್ಲಿ ನಿಂದು, ಸ್ವಯಂಭುವಾದಿರಲ್ಲಾ! ಬೀಜವೃಕ್ಷದಂತೆ ಸಾಕಾರ ನಿರಾಕಾರವು ನೀವೇಯಾದಿರಲ್ಲಾ! ಮಹಾ ಕರ್ತನು ತನ್ನ ಶಕ್ತಿಯ ವಿನೋದಕ್ಕೆ ಜಗವ ನಿರ್ಮಿಸಿದ ಸ್ವತಂತ್ರ ಸಿದ್ಧಲಿಂಗೇಶ್ವರಾ.

೫. ಘನಗಂಭೀರ ಮಹಾ ವಾರುಧಿಯಲ್ಲಿ ಫೇನತರಂಗಬುದ್ಬುದಗಳುದಯವಲ್ಲದೆ, ಬೇರಾಗಬಲ್ಲವೇ? ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡ ಕೋಟಿಗಳಾದವಲ್ಲದೆ ಬೇರಾಗಬಲ್ಲವೇ? ಇದು ಬೇರೆಂಬ ಅರಿಮರುಳುಗಳ ನೇನೆಂಬೆ? ವಿಶ್ವವನರಿದು ನೋಡಲು, ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗವು ಬೇರಿಲ್ಲ.

## ಪರಮಾತ್ಮನ ನಿಜವನ್ನರಿಯುವದು ಕಷ್ಟವು.

೧. ಅರಿದೆವೆಂದಡೆ ಅರಿಯಬಾರದು ನೋಡಾ. ಘನಕ್ಕೆ ಘನ ತಾನೇ ನೋಡಾ. ಚನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಪೋದೆನು.

೨. ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು, ಶತಕೋಟಿ ಸೂರ್ಯರು ಮೂಡಿದಂತೆ ಇದ್ದುದಯ್ಯಾ. ಮಿಂಚಿನ ಬಳ್ಳಿಯ ಸಂಚವ ಕಂಡಡೆ ಎನಗಿದು ಸೋಜಿಗವಾಯಿತ್ತು. ಗುಹೇಶ್ವರಾ, ನೀನು ಜ್ಯೋತಿರ್ಲಿಂಗವಾದಡೆ, ಉಪಮಿಸಿ ನೋಡಬಲ್ಲವರಿಲ್ಲವಯ್ಯಾ.

೩. ಕಾಲಕಲ್ಪಿತಂಗಳಿಲ್ಲದೆ ನಿನ್ನಿಂದ ನೀನೇಯಾಗಿರ್ದೆಯಲ್ಲ. ನಿಮ್ಮ ಪರಮಾನಂದದ ಪ್ರಭಾವದ ಪರಿಣಾಮದಲ್ಲಿ ಅನಂತಕಾಲವಿದ್ದಿರಲ್ಲ. ನಿಮ್ಮ ಆದ್ಯಂತವನೀವೇ ಅರಿವುತಿದ್ದಿರಲ್ಲ. ನಿಮ್ಮ ನಿಜಭಾವವ ನೀವೇ ಬಲ್ಲಿರಿ ಕೂಡಲಚನ್ನಸಂಗಮದೇವಾ.

೪. ಅಸುರರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ, ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ, ಋಷಿಯ ಮಗಳೊಡನಿರ್ದಾತನಲ್ಲ. ಎಸಗುವ ಸಂಸಾರದ ಕುರುಹಿಲ್ಲದಾತಂಗೆ ಹೆಸರಾವುದೆಂದ ನಂಬಿಗ ಚೌಡಯ್ಯಾ?

೫. ತರುಗಳ ಮುರಿದು ಗಗನಕ್ಕೀಡಾಡುವ ಅನಿಲ ರೂಪೋ ನಿರೂಪೋ ಬಲ್ಲರೆ, ನೀವು ಹೇಳಿ ಭೋ. ಗಜಸಿಂಹ ಶಾರ್ದೂಲವೆಂಬ ಅಧಿಕ ಮೃಗಂಗಳ ಮುರಿದೊತ್ತಿ ಕೆಡಹುತ್ತಿಪ್ಪ ವ್ಯಾಧ ರೂಪೋ ನಿರೂಪೋ, ಬಲ್ಲರೆ ನೀವು ಹೇಳಿಭೋ. ಕಾಣಲೀಯದೆ ಕೇಳಲೀಯದೆ ಅವಿಧಾನಂಗಳ ಕೆಡಿಸುತ್ತಿಪ್ಪ ನಿದ್ರೆ ರೂಪೋ ನಿರೂಪೋ, ಬಲ್ಲರೆ ನೀವು ಹೇಳಿಭೋ. ಇಂತಾಳಿವಾಳಿನ ಕೀಳಾಳಿನ ಅಂತಸ್ಥವನಾರಿಗೂ ಅರಿಯಬಾರದು. ಅನಾದಿ ಮೂಲದೊಡೆಯನ ಬಲ್ಲೆನೆಂಬ ಪರಿ ಇನ್ನೆಂತೋ? ರೂಪೆಂದಡೆ ಶಬ್ದ ನಿರೂಪೆಂದಡೆ ಶೂನ್ಯ. ಈ ಎರಡರ ಆದಿ



ಮಲ್ಲಿಕಾರ್ಜುನ

ಯಿಂದತ್ತತ್ತ ಕಾಣಾ. ನಮ್ಮ ತಂದೆ ಕಪಿಲ ಸಿದ್ಧ ಲಿಂಗವು ಗುರುಕರುಣವುಳ್ಳವರಿಗಲ್ಲದೆ ಅರಿಯಬಾರದು.

೬. ಸನಕ ಸನಂದ ಮುನಿಜನಾದಿಗಳು ಅರಿಯರಯ್ಯ ನಿಮ್ಮ ಅಂತುವನು. ಒಂದರಲ್ಲಿ ಹಲವಾಗಿ, ಹಲವರಲ್ಲಿ ಒಂದಾಗಿ, ಸಾಕಾರ ನಿರಾಕಾರವಾಗಿಪ್ಪಲ್ಲಿ ಏಕವಾಗಿಪ್ಪ ಕಪಿಲಸಿದ್ಧ ಮಲ್ಲಿನಾಥ ನೀವೇಯಾಗಿ.

೭. ವೇದಾತೀತ, ಷಡ್ವರ್ಣರಹಿತ, ಅಷ್ಟತ್ರಿಂಶತ್ ಕಳಾತೀತ, ವ್ಯೋಮಾತೀತ, ಅಗಮ್ಯ, ಅಗೋಚರ ಕೂಡಲಸಂಗಮದೇವಾ.

೮. ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಪರಮೇಶ್ವರ ವೆಂಬ ಸಂದಣಿ ತಲೆದೋರದ ಮುನ್ನ, ಅಲ್ಲಿಂದತ್ತತ್ತ ಬಯಲೇ ಸ್ವರೂಪವಾಯಿತ್ತು. ಆ ಸ್ವರೂಪಿನ ಘನತೆಯನುಪಮಿಸಬಾರದು. ನೋಡ ಬಾರದ ಬೆಳಗು, ಕೂಡಬಾರದ ಮೂರ್ತಿ ಅಖಂಡ ಅಪ್ರತಿಮ ಗುಹೇಶ್ವರಲಿಂಗದ ಬೆಳಗಿನ ಮೂಲವ ಲಿಂಗ ಸಂಗಿಗಳಲ್ಲದ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರು?

೯. ತೋರುವನಯ್ಯಾ ಶಿವನು, ಅಡಗುವನಗಲುವನಯ್ಯಾ ಶಿವನು. ಕಂಗಳ ಮುಂದೆ ಕಾಯಗೊಂಡು, ಮನದ ಮುಂದೆ ಕಸವಾಗಿ ಕಾಡುವನಯ್ಯ ಶಿವನು. ಒಲ್ಲದಡೆ ಅಲ್ಲೇ ಇದ್ದು, ಹಲವೆಡೆಯಲ್ಲಿ ತೋರುವನು. ಹಲವೆಡೆಯಲ್ಲೈದಿ ಒಂದೇರೂಪಾಗಿರ್ಪನು. ಕೂಡಲ ಸಂಗಮದೇವನು ಚಿನ್ಮಯನಾಗಿ ಎನಗೆ ಅಸಾಧ್ಯನಾದನು.

---

## ಪರಮಾತ್ಮನು ವಿಶ್ವವ್ಯಾಪಿಯು.

೧. ವಿಶ್ವದೊಳಗೆಲ್ಲ ನೀನೇ ದೇವಾ. ವಿಶ್ವಭರಿತನು ನೀನೇ ದೇವಾ. ವಿಶ್ವರೂಪನು ನೀನೇ ದೇವಾ. ವಿಶ್ವಪತಿ ನೀನೇ ದೇವಾ. ವಿಶ್ವಾತೀತನು ನೀನೇ ದೇವಾ ಅಖಂಡೇಶ್ವರಾ.

೨. ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ. ಸಕಲ ವಿಸ್ತಾರವ ರೂಹು ನೀನೇ ದೇವಾ. ವಿಶ್ವತೋಚಕ್ಷು ನೀನೇ ದೇವಾ. ವಿಶ್ವತೋಮುಖ ನೀನೇ ದೇವಾ. ವಿಶ್ವತೋಬಾಹು ನೀನೇ ದೇವಾ. ವಿಶ್ವತೋಪಾದ ನೀನೇ ದೇವಾ ಕೂಡಲ ಸಂಗಮದೇವಾ.

೩. ಕುರುಹುಂಟೇ ಮರಳಿ ಲಿಂಗಕ್ಕೆ? ತೆರಹುಂಟೇ ಮರಳಿ ಲಿಂಗಕ್ಕೆ? ಎಲ್ಲೆಡೆಯೊಳು ಪರಿಪೂರ್ಣವಾದ ಪರಾತ್ಪರ ಲಿಂಗದ ನಿಲವನರಿಯದೆ, ಹುಸಿಯ ಕಲ್ಪಿಸಿ, ಹುಸಿಯನೇ ಪೂಜಿಸಿ, ಹುಸಿಯ ಫಲಪದವನುಂಡು, ಹುಸಿಯಾಗಿ ಹೋದವರ ಕಂಡು ನಗುತಿರ್ದನಯ್ಯ ನಮ್ಮ ಅಖಂಡೇಶ್ವರಾ.

೪. ಗಿರಿಗಳ ಗುಹೆಗಳ ಕಂದರದಲ್ಲಿ ನೆಲಹೊಲದಲ್ಲಿ ಇಪ್ಪೆ ದೇವಾ ಎಲ್ಲಿ ನೋಡಿದಡಲ್ಲಿ ಇಪ್ಪೆ ದೇವಾ. ಮನಕ್ಕಗಮ್ಯ ಅಗೋಚರವಾಗಿ, ಅಲ್ಲಲ್ಲಿ ಎಲ್ಲಿಯೂ ನೀನೇ ಇಪ್ಪೆಯಯ್ಯಾ. ಗುಹೇಶ್ವರಾ ನಿಮ್ಮ ನಗಲಕ್ಕೆ ಹರಿವರಿದು ಕಂಡೆ ನಾನು.

೫. ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ. ಪಿಂಡಾಂಡಂಗಳೊಳಗೆಲ್ಲ ನೀನೇ ದೇವಾ. ಮಹದಾಕಾಶರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ. ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ. ಸ್ವಾನುಭೂತಿ ಸ್ವರೂಪ ಶರಣ ಜನಮನೋವಲ್ಲಭ ನೀನೇ ದೇವಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೬. ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾಗಿ, ಎಣಿಸಬಾರದ ಬಹುಳ ಬ್ರಹ್ಮಕ್ಕೆ ಎಣೆಯಾವುದು ಹೇಳಾ? ಅಗಣಿತ ನಕ್ಷಯ, ಸರ್ವಜೀವ ಮನಃ ಪ್ರೇರಕ ಸರ್ವಜ್ಞ, ಏಕೋದೇವ ಸಂವಿತ್ ಪ್ರಕಾಶ ಪರಮೇಶ್ವರನು ಮನವೆಂಬ ದರ್ಪಣದೊಳಗೆ ಬಿಂದ್ವಾಕಾಶ ರೂಪವಾಗಿ ಬೆಳಗಿ ತೋರುವ ಶಿವನ ಅಂದವ ತಿಳಿದು ನೋಡಿ ಕೂಡ ಬಲ್ಲಾತನೇ ಪರಶಿವಯೋಗಿ. ಆತ ಜನನ ಮರಣವಿರಹಿತ, ಆತನೇ ಸರ್ವಜ್ಞನು. ಆತನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ.



೭. ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ, ಬ್ರಹ್ಮಾಂಡವೇ ಮಕುಟ, ಗಗನವೇ ಮುಖ, ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕುಗಳು ಬಾಹುಗಳು, ಮಹದಾಕಾಶವೇ ಶರೀರ, ತರುಗಳೇ ತನೂರುಹ, ಶೂನ್ಯವೇ ಕರಸ್ಥಲದ ಲಿಂಗ, ನಕ್ಷತ್ರಗಳೇ ಪುಷ್ಪ, ನಿತ್ಯವೇ ಪೂಜೆ, ಮೇಘವೇ ಜಡೆ, ಬೆಳದಿಂಗಳೇ ವಿಭೂತಿ, ಪರ್ವತಗಳೇ ರುದ್ರಾಕ್ಷಿ, ಪಂಚಬ್ರಹ್ಮವೇ ಪಂಚಾಕ್ಷರ, ತತ್ವಂಗಳೇ ಜಪಮಾಲೆ, ಮೇರುವೇ ದಂಡ, ಜಗವೇ ಕಂಥಾ, ಅನಂತನೇ ಕೌಪೀನ, ತ್ರಿಗುಣ ಒಂದಾದುದೇ ಕರ್ಪೂರ, ಚತುರ್ಯುಗಂಗಳೇ ಗಮನ, ಮಿಂಚೇ ಅಂಗರುಚಿ, ಸಿಡಿಲವೇ ಧ್ವನಿ, ವೇದಾಗಮವೇ ವಾಕ್ಯ. ಜ್ಞಾನಮುದ್ರೆಯೇ ಉಪದೇಶ, ಪೃಥ್ವಿಯೇ ಸಿಂಹಾಸನ ದಿವಾರಾತ್ರಿಯೇ ಅರಮನೆ, ಶಿವಜ್ಞಾನವೇ ಐಶ್ವರ್ಯ, ನಿರಾಳವೇ ತೃಪ್ತಿ ಇಂಥ ಚೈತನ್ಯಜಂಗಮಕ್ಕೆ ನಾನು ನಮೋ ನಮೋ ಎನುತಿರ್ದೆನಯ್ಯ ಸೌರಾಷ್ಟ್ರ ಸೋಮೇಶ್ವರಾ.

೮. ವನವೆಲ್ಲ ನೀವೇ. ವನದೊಳಗಣ ದೇವತರುವೆಲ್ಲ ನೀವೇ. ತರುವಿನೊಳಗಾಡುವ ಮೃಗವೆಲ್ಲ ನೀವೇ. ಚನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

೯. ಇಳೆ ನಿಮ್ಮದಾನ, ಬೆಳೆ ನಿಮ್ಮದಾನ, ಸುಳಿದು ಬೀಸುವ ವಾಯು ನಿಮ್ಮದಾನ, ನಿಮ್ಮದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ?

೧೦. ಕಾಯ ನಿಮ್ಮದಾನ, ಜೀವ ನಿಮ್ಮದಾನ, ಕಾಯ ಜೀವವುಳ್ಳಲ್ಲಿಯೇ ಪೂಜಿಸದ ಅನ್ಯಾಯಿಗಳನೇನೆಂಬೆ ಹೇಳಾ ರಾಮನಾಥಾ?

೧೧. ಎತ್ತು ನಿಮ್ಮದಾನ, ಬಿತ್ತು ನಿಮ್ಮದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮದಾನ, ನಿಮ್ಮದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥಾ?

೧೨. ಇಂತೆಂದ ಭೂಮಿಯ, ಇಂತೆಂದ ಗಗನವ, ಇಂತೆಂದ ಸಪ್ತ ಸಾಗರವ ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಚಿಂತ್ಯನನಾರು ಬಲ್ಲರೈ ರಾಮನಾಥಾ?

೧೩. ಸಹಸ್ರ ಶೀರ್ಷನಾದಿ ಪುರುಷನು, ತ್ರಿಪಾದೂರ್ಧ್ವ ಪುರುಷನೊಬ್ಬ ಪುರುಷನು, ಉದನ್ಮುಖನೊಬ್ಬ ಪುರುಷನು, ಉದಯಪುರುಷನೊಬ್ಬ ಪುರುಷನು, ವಿರಾಟ್ ಪುರುಷನೊಬ್ಬ ಪುರುಷನು, ಆದಿಪುರುಷನೊಬ್ಬ ಪುರುಷನು, ತದ್ವಿಯತ್ಪುರುಷ ಪುರುಷರಿಲ್ಲದ ಪ್ರಭೆಯ ನೋಡಿರೇ. ವೇದನಾದಾತೀತ, ತುರಿಯ ಪರಮಾನಂದ ನಿರವಯ, ಷಟ್ತ್ರಿಂಶತ್ ಪ್ರಭಾಪಟಲದ ಬೆಳಗಿದೆ ನೋಡಿರೋ. ಬೆಳಗಿನೊಳಗಿನ ಮಹಾ ಬೆಳಗಿನ ಬೆಳಗು ನಮ್ಮ ಕೂಡಲ ಸಂಗಮದೇವಯ್ಯ.

೧೪. ಶೃತಿತತಿ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನನೇನೆಂಬೆನಯ್ಯ. ಘನಕ್ಕೆ ಘನ ಮಹಿಮನ, ಮನಕ್ಕಗೋಚರನ, ಅಣೋರಣೀಯಾನ್, ಮಹತೋ ಮಹೀಯಾನ್ ಮಹಾದಾನಿ ಕೂಡಲ ಸಂಗಮದೇವಾ.

೧೫. ಸಕಲ ನಿಷ್ಕಲವ ಕೂಡಿಕೊಂಡಿಪ್ಪೆಯಾಗಿ, ಸಕಲ ನೀನೇ ನಿಷ್ಕಳ ನೀನೇ ಕಂಡಯ್ಯ. ವಿಶ್ವತೋಚಕ್ಷು ನೀನೇ ದೇವಾ, ವಿಶ್ವತೋಮುಖ ನೀನೇ ದೇವಾ ಕೂಡಲ ಸಂಗಮದೇವಾ.

೧೬. ನೆಲ ದೀಪದೊಡೆಯನು, ಜಲತಂಪಿನೊಡೆಯನು, ಹಿರಿಯ ಪೆಂಪಿನೊಡೆಯನು, ಅಗ್ನಿ ಉಷ್ಣದೊಡೆಯನು, ಚಂದ್ರಕಾಂತದೊಡೆಯನು, ಸೂರ್ಯಕಾಂತದೊಡೆಯನು, ಸಕಲ ದೈವಂಗಳಿಗೆ ಆಯುಷ್ಯ ಭಾಷೆಯಕೊಟ್ಟ ಭೋಗದೊಡೆಯನು ಜಗತ್ಪ್ರಭು ಸೊಡ್ಡಳಾ.

---

## ಪರಮಾತ್ಮನು ಜಗತ್ತಿಗೆಲ್ಲ ಆಧಾರಭೂತನಾಗಿದ್ದಾನೆ.

೧. ತನ್ನಲ್ಲಿ ಅನಂತಕೋಟಿ ಬ್ರಹ್ಮರುತ್ಪತ್ತಿ ಸ್ಥಿತಿ ಲಯ ನೋಡಾ. ತನ್ನಲ್ಲಿ ಅನಂತಕೋಟಿ ವಿಷ್ಣ್ವಾದಿಗಳುತ್ಪತ್ತಿ, ಸ್ಥಿತಿ, ಲಯ ನೋಡಾ.



ತನ್ನಲ್ಲಿ ಅನಂತಕೋಟಿ ದೇವತೆಗಳುತ್ಪತ್ತಿ, ಸ್ಥಿತಿ, ಲಯ ನೋಡಾ. ತಾನೇ ಅಖಂಡಿತ, ಅಪ್ರಮೇಯ, ಅಗಣಿತ, ಅಗಮ್ಯ, ಅಗೋಚರ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೨. ರುದ್ರಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯನ ಜನನವು. ನೊಸಲಲ್ಲಿ ಅಗ್ನಿಯು, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷ ಜನನವು. ಶಿರದಲುದಯ ಮೂವತ್ತುಮೂರು ಕೋಟಿ ದೇವರ್ಕಳು. ಪಾದ ತಳದಲ್ಲಿ ಭೂಮಿಯ ಜನನವು. ಶ್ರೋತ್ರದಲ್ಲಿ ದಶದಿಕ್ಕು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು, ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಮದೇವಾ.

೩. ನಿಮ್ಮ ನಿಜದಂತ್ಯವನಾರು ಬಲ್ಲರಯ್ಯಾ? ಚತುರ್ದಶ ಭುವನಂಗಳೆಲ್ಲ ನಿಮ್ಮಾಧೀನವಯ್ಯ. ನಿಮಗೆಣೆಯಪ್ಪ ದೇವರುಂಟೇ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪. ಸರ್ಪನೂ, ಕೂರ್ಮನೂ, ದಿಕ್ಕರಿಗಳೆಂಟೂ, ಭೂಮಿಯ ಹೊತ್ತಿರ್ದಹರೆಂದು, ಅಹರ್ನಿಶ ಹೊತ್ತಿರ್ಪವರಿಗೆ ಅತ್ತಲಾಧಾರ, ಇತ್ತಲಾಧಾರ. ಉತ್ತರ ಕೊಡುವವರಿಗೆ ಇಕ್ಕುವೆ ಮುಂಡಿಗೆಯ. ಎತ್ತುವರುಳ್ಳೊಡೆ, ತೋರಿರೈ, ರಾಮನಾಥಾ?

೫. ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ಮೃಡನೇ ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ?

೬. ಕಲಿವೀರ ಕಡಿವಲ್ಲಿ, ಬಲು ವಿಷವು ಸುಡುವಲ್ಲಿ ನೆಲೆಗೆಟ್ಟು ನೊರಿಯೋ ಎಂಬಲ್ಲಿ, ನಿಮ್ಮ ತಲೆಗಾದು ರಕ್ಷಿಸಿದ ಸುಲಭನನರಿಯಿರೇ, ಹೊಲೆಯರಿರಾ. ಸಲೆನಂಬಿ ಬದುಕಿರೊ ರಾಮನಾಥನಾ.

೭. ಸ್ವರ್ಗಲೋಕ ತಾನಿರ್ದಲ್ಲಿ, ಜ್ಯೋತಿರ್ಮಯ ಲೋಕತಾನಿರ್ದಲ್ಲಿ, ಸಚರಾಚರಂಗಳೆಲ್ಲ ತಾನಿರ್ದಲ್ಲಿ. ತನ್ನಿಂದಧಿಕವಪ್ಪ ದೈವ ಒಂದಿಲ್ಲವಾಗಿ, ಇವೆಲ್ಲ ತನ್ನಾಧೀನವಲ್ಲದೆ, ಅವರಾಧೀನ ತಾನಲ್ಲ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೮. ಬ್ರಹ್ಮವಿಷ್ಣ್ವಾದಿಗಳು ತಾನಿರ್ದಲ್ಲಿ, ರುದ್ರ ಈಶ್ವರರು ತಾನಿರ್ದಲ್ಲಿ, ಪಂಚಮುಖದಶ ಭುಜವನುಳ್ಳ ಸದಾಶಿವರು ತಾನಿರ್ದಲ್ಲಿ, ನಾಲ್ವತ್ತೆಂಟು ಸಾವಿರ ಮುನಿಗಳು ತಾನಿರ್ದಲ್ಲಿ, ಮೂವತ್ತು ಮೂರು ಕೋಟಿ ದೇವತೆಗಳು ತಾನಿರ್ದಲ್ಲಿ. ತಾನೇ ಅಖಂಡ ಪರಿಪೂರ್ಣನಾಗಿ ಮಹಾಘನವಲ್ಲದೆ, ತನ್ನಿಂದಧಿಕವಪ್ಪ ಘನವಿಲ್ಲ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೯. ಸಪ್ತಕೋಟಿ ಮಹಾ ಮಂತ್ರಂಗಳು, ತಾನಿರ್ದಲ್ಲಿ. ತೊಂಭತ್ತುನಾಲ್ಕು ವ್ಯೋಮವ್ಯಾಪಿಸಿದ ಪದಂಗಳು ತಾನಿರ್ದಲ್ಲಿ. ಅಕಾರಾದಿಕ್ಷಕಾರಾಂತ್ಯವಾದ ಐವತ್ತೆರಡಕ್ಷರಗಳು ತಾನಿರ್ದಲ್ಲಿ. ಮೂವತ್ತಾರು ತತ್ವಂಗಳು ತಾನಿರ್ದಲ್ಲಿ. ಷಟ್ಕಳೆ, ದ್ವಾದಶಕಳೆ, ಷೋಡಶ ಕಲೆಗಳು ತಾನಿರ್ದಲ್ಲಿ. ಅರವತ್ತುನಾಲ್ಕು ಕಳೆ ಜ್ಞಾನಂಗಳು ತಾನಿರ್ದಲ್ಲಿ. ಇವೆಲ್ಲವು ತನ್ನಲ್ಲಿ ಉತ್ಪತ್ತಿ ಸ್ಥಿತಿಲಯವಾದಕಾರಣ, ತನ್ನಿಂದಧಿಕವಪ್ಪ ಘನ ಒಂದಿಲ್ಲವಾಗಿ, ತಾನೇ ಪರಬ್ರಹ್ಮ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

೧೦. ಎತ್ತನೇರಿದ ಕರ್ತನೊಬ್ಬನೇ ಜಗಕ್ಕೆಲ್ಲ. ಎತ್ತು ಬೆಳೆವ ಧಾನ್ಯವನುಂಬ ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ರಾಮನಾಥಾ.

೧೧. ಜಗವೆಲ್ಲ ಗೋವಿನಹಂಗು. ನರಸುರಾದಿಗಳೆಲ್ಲರು ಗೋವಿನ ಹಂಗು. ಸಕಲ ಜೀವಾಧಾರ, ಗೋಮಯ, ಗೋಕುಲಕ್ಕೊಡೆಯ ಗೋಪ್ರಣವ ಸ್ವರೂಪ ನಾರಾಯಣ ಪ್ರಿಯ ರಾಮನಾಥಾ.



## ಪರಮಾತ್ಮನಿಗೆ ಹುಟ್ಟು ಸಾವೆಂಬುವಿಲ್ಲ. ಆತನು ನಿತ್ಯನು.

೧. ಹುಟ್ಟು ಹೊಟ್ಟೆಂಬುದು ನಿಮ್ಮಲ್ಲಿಲ್ಲ. ನಿಮ್ಮಿಂದ ನೀವೇ ಸ್ವಯಂಭುವಯ್ಯಾ. ಇಂತಾದಿರಯ್ಯಾ, ಇಂತಾದಿರಯ್ಯಾ, ನೀವಿಂತಾದಿರಯ್ಯಾ. ನಿಮ್ಮ ಮಹಾತ್ಮೆಯ ನೀವೇ ಬಲ್ಲಿರಿ, ನಿಜಗುರು ಕಪಿಲಸಿದ್ಧ ಮಲ್ಲಿನಾಥಯ್ಯಾ.

೨. ಅಮೃತವತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ. ಸತ್ಯ ಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ ವಸುದೇವದೇವಕಿಗೆ ಹುಟ್ಟಿದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತ ಅರುಹ. ಇವರೆಲ್ಲರು ಯೋನಿಜರೆಂಬುದು ಜಗವೆಲ್ಲ ಬಲ್ಲುದು. ಉತ್ಪತ್ತಿ, ಸ್ಥಿತಿ ಪ್ರಳಯಕ್ಕೆ ಹೊರಗಾದ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತೃಗಳುಂಟೇ ಹೇಳಿರೇ?

೩. ಅಮೌಲ್ಯನು, ಅಪ್ರಮಾಣನು, ಅಗೋಚರಲಿಂಗವು, ಆದಿಮಧ್ಯಾಂತವಿಲ್ಲದಲಿಂಗವು, ಸ್ವತಂತ್ರಲಿಂಗವು, ನಿತ್ಯನಿರ್ಮಲಲಿಂಗವು, ಅಯೋನಿ ಸಂಭವನಯ್ಯ ನಮ್ಮ ಕೂಡಲಸಂಗಮದೇವಾ.

೪. ಅಜಹರಿಸುರರೆಲ್ಲರೂ ಅಳಿಯದೆ ಉಳಿದವರಿಲ್ಲ. ಶಿವನೇ ನಿತ್ಯನೆಂದು ಹೊಡೆವಡುತ್ತಿವೆ ವೇದಶೃತಿಃ–“ ಉತ, ಇದಂ, ವಿಶ್ವಭೂತಾನಿ, ಸದೃಷ್ಟೇ ಮೃಡೋಯಾತಿ. ನಮಸ್ತು ನೀಲಗ್ರೀವಾಯ, ಸಹಸ್ರಾಕ್ಷಾಯ, ಈಡುಷೆ. ” ಬಸವಪ್ರಿಯ ಕೂಡಲಚನ್ನಸಂಗಯ್ಯನೊಬ್ಬನೇನಿತ್ಯನೆಂದು ಹೊಗಳುತ್ತಿದೆ ವೇದ.

೫. ಅಳಿಯ, ಬೆಳೆಯ, ಸುಳಿವನಲ್ಲ, ಪ್ರಳಯವಿಲ್ಲದ ನಿಜಯನು. ಕಳಾಕುಳದ ಆತ್ಮನ ಅಂಗಸಂಗಿಯಲ್ಲ. ಸುಳುಹಿನೊಳಗಣ ಸೂಕ್ಷ್ಮವತಿಳಿದು ನೋಡಿರೇ. ಅಣಿಮಾದಿ ಗುಣರಹಿತನ ಅಕಲ್ಪಿತನನೇನೆಂಬೆ? ಕಳವಳದ ಬಳಿಯ ಭಾವರೂಪಲ್ಲ. ಬೆಳಗಿನೊಳಗಣ ಬೆಳಗು ಗುಹೇಶ್ವರಲಿಂಗವು.

೬. ತಾಯಿತಂದೆ ಇಲ್ಲದ ಕಂದಾ, ನಿನಗೆ ನೀನೇ ಹುಟ್ಟಿ ಬೆಳೆದೆಯಲ್ಲಾ! ನಿನ್ನ ಪರಿಣಾಮವೇ ನಿನಗೆ ಪ್ರಾಣತೃಪ್ತಿಯಾಗಿ ಇದ್ದೆಯಲ್ಲಾ! ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೇ ಬೆಳಗುತ್ತಿರ್ದೆಯಲ್ಲಾ! ನಿನ್ನ ಚಾರಿತ್ರ ನಿನಗೆ ಸಹಜ ಗುಹೇಶ್ವರಾ.

## ಪರಮಾತ್ಮನ ವ್ಯಾಪಕತೆಯ ಸ್ಥಿತಿ.

೧. ಮರೀಚಿಯೊಳಗಣ ಬಿಸಿಲಿನಂತೆ ಇದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಿಕನೊಳಡಗಿದ ಚಿತ್ರದಂತೆ ಇದ್ದಿತ್ತು. ಆಲಿಯೊಳಗಡಗಿದ ತೇಜದಂತೆ ಇದ್ದಿತ್ತು. ನುಡಿಯೊಳಡಗಿದ ಅರ್ಥದಂತಿದ್ದಿತ್ತು ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

೨. ವಸ್ತುವೆಂದರೆ ಹ್ಯಾಗಾಯಿತ್ತಯ್ಯ ಹೇಳುವೆ ಕೇಳಯ್ಯ ಮಗನೇ. ಕಾಷ್ಠದಲ್ಲಿ ಅಗ್ನಿ ಹ್ಯಾಗೆ ಹಾಗಿಪ್ಪದು. ಕ್ಷೀರದೊಳಗೆ ಘೃತ ಹ್ಯಾಗೆ ಹಾಗಿಪ್ಪದು. ಸರ್ವತ್ರ ಎಲ್ಲ ಠಾವಿನಲ್ಲಿಯೂ ವಸ್ತುವಿನ ಕಳೆ ಪರಿಪೂರ್ಣವಾಗಿರ್ಪುದೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೩. ಅಡಗನೊಳಗಣ ಹಾಲು ಅಡಗಿಪ್ಪ ಭೇದದಂತೆ ಬೆಡಗಪ್ಪ ತುಪ್ಪದಕಂಪಿನ ಪರಿಯಂತೆ, ಎಲೆ ಮೃಡನೇ ನೀನು ಪ್ರಾಣ ಪ್ರಕೃತಿಗಳೊಳಗೆ ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

೪. ಅಕ್ಷರದಲಭ್ಯಾಸವಮಾಡಿ, ಬರವ ತೊಡೆದ ಪರಿ ಎಂತೋ? ಸ್ವರೂಪೆಂಬುದಾವುದು, ನಿರೂಪೆಂಬುದಾವುದು, ಎಂದರಿಯರಾಗಿ, ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವ ನಿರಾಳ ಗುಹೇಶ್ವರಾ.

೫. ಅಂಬುವಿನಸಾರ ಒಡಗೂಡಿ ಆ ಮಣ್ಣಿಂಗೆ ಕುಂಭವೆಂಬುದಕ್ಕೆ ಕುರುಹುಗೊಟ್ಟು ಘನ ಕಿರಿದಲ್ಲದೆ, ಕುಂಭದಲ್ಲಿಯೇ ಲೀಯ್ಯವಾದಂತೆ, ನಿಷ್ಕಳಂಕ ಮಲ್ಲಿಕಾರ್ಜುನ ಅಂಗದಲ್ಲಿಯೇ ಲೀಯ್ಯ.



೬. ಕಲ್ಲೊಳಗಣ ಕಿಚ್ಚು ಉರಿಯ ಬಲ್ಲುದೇ? ಬೀಜದೊಳಗಣ ವೃಕ್ಷ ಉಲಿಯ ಬಲ್ಲುದೇ? ತೋರಲಿಲ್ಲಾಗಿ, ಬೀರಲಿಲ್ಲಾಗಿ ಗುಹೇಶ್ವರಾ ನಿಮ್ಮ ನಿಲವ ಅನುಭವಸುಖಿ ಬಲ್ಲ.

೭. ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚಿನಂತೆ, ಕಂಗಳ ಮರೆಯಲಡಗಿರ್ದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.

೮. ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು, ಹಿಡಿಯಬಾರದ ಬಯಲು, ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ ಈ ಲೋಕದ ಜಡರೆತ್ತಬಲ್ಲರೈ ರಾಮನಾಥಾ?

೯. ಪಿಂಡದೊಳಗೆ ಪಿಂಡರೂಪಾಗಿ, ಈ ಪರಿಯಲ್ಲಿ ಗೌಪ್ಯವಾಗಿರ್ದು ಎನ್ನಲ್ಲಿ ಕಾಣಿಸಿಕೊಳ್ಳದಿರ್ದಿರಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೧೦. ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನ ಕಾಣದಂತಿರಿಸಿದೆ. ನೀ ಬೆರಸುವ ಭೇದಕ್ಕೆ ಬೆರಗಾದೆನೈ ರಾಮನಾಥಾ.

೧೧. ಧರಣಿಯ ಪಸರಿಸಿ, ಉರಗನ ಆಡಿ ಇಟ್ಟು, ಶರಧಿ ಏಳಕ್ಕೆ ಎರೆದನು ಒಕ್ಕುಡಿತೆ ಉದಕವ. ಹರಿಯಜ ಸುರರಿಗೆ ಪರಿ ಪರಿಯ ಲೋಕವ ಕೊಟ್ಟು ಅರಿಯದಂತಿರ್ದ ಕಾಣಾ ರಾಮನಾಥಾ.

೧೨. ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲವಿಲ್ಲದ ರೂಪ ಕಳೆಯಲ್ಲಿ ವೇಧಿಸುವನ ಪರಿ ರಾಮನಾಥಾ.

೧೩. ಒಡಲೊಳಗಣ ಕಿಚ್ಚು ಒಡಲಸುಡದ ಭೇದವ, ಕುಡಿದ ಉದಕವಲ್ಲಿ ಆ ಕಿಚ್ಚು ನಂದದ ಭೇದವ, ಮೃಡ ನೀ ಪ್ರಾಣ ಪ್ರಕೃತಿಯೊಳಗಡಗಿದ ಭೇದವ, ಲೋಕವ ಜಡರೆತ್ತ ಬಲ್ಲರೈ ರಾಮನಾಥಾ?

ಅರ್ಥ:- ದೇಹದಲ್ಲಿ ಉದರಾಗ್ನಿಯು ಆ ದೇಹದಹನವ ಮಾಡದಿಪ್ಪ ವಿಚಾರದ ಹಾಗೆ, ಪಾನವಮಾಡಿದ ಜಲದಲ್ಲಿ ಆ ಉದರಾಗ್ನಿಯು ನಾಶವಾಗದೆ ಇಪ್ಪ ವಿಚಾರದ ಹಾಗೆ, ಎಲೇ ಶಿವನೇ ನೀನು ಪ್ರಕೃತಿರೂಪವಾಗಿ ಪ್ರಾಣದಲ್ಲಿ ಅಡಗಿರ್ದು, ಆ ಪ್ರಾಣನ ವರ್ತನೆಯಲ್ಲಿ ಬೆರೆಯದೆ ರಹಸ್ಯವಾಗಿರ್ಪ ವಿಚಾರ ಎಂಬಲ್ಲಿ ಆ ಬ್ರಹ್ಮವನೆ ಇಷ್ಟಲಿಂಗವಾಗಿ ಪಡೆದುಕೊಂಡು ಆಚರಿಸುವದನು ಲೋಕದ ಜೀವರರಿಯರೆಂಬುದರ್ಥ.

೧೪. ಎಣ್ಣೆ ಇದ್ದು ಎಳ್ಳು ನೆನೆಯದ ಭೇದವ, ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ, ಕಾಮವಿದ್ದು ಕನ್ನೆಯನನುಭವಿಸದ ಭೇದವ, ಪರವಿದ್ದು ಪ್ರಾಣನ ಪ್ರಕೃತಿಯು ಹರಿಯದ ಭೇದವ ನರರೆತ್ತ ಬಲ್ಲರೈ ರಾಮನಾಥಾ?

೧೫. ಮಣಿಗಳ ಸೂತ್ರದಂತೆ, ತ್ರಿನಯನ ನೀನಿಪ್ಪೆಯಯ್ಯಾ. ಎಣಿಸುವಡೆ, ತನು ಭಿನ್ನ, ಆತ್ಮನೊಬ್ಬನೇ. ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿರ್ಪೆನಯ್ಯಾ ರಾಮನಾಥಾ.

## ಪರಮಾತ್ಮನು ವಿಶ್ವಮಯನಾದರೂ ವಿಶ್ವದ ಗುಣಗಳನ್ನು ಹೊದ್ದನು.

೧. ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿ ಸ್ಥಿತಿಲಯಕ್ಕೊಳಗಾದನೇ? ಇಲ್ಲ. ಅದೇನು ಕಾರಣವೆಂದಡೆ, ಅಜಾತನಾಗಿ, ಉತ್ಪತ್ತಿ ಇಲ್ಲ. ಕರ್ಮ ರಹಿತನಾಗಿ, ಸ್ಥಿತಿಗೊಳಗಲ್ಲ. ಮರಣ ರಹಿತನಾಗಿ ಲಯಕ್ಕೊಳಗಲ್ಲ.



ಇಂತೀಗುಣತ್ರಯಂಗಳ ಹೊದ್ದಲರಿಯ. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ, ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ. ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗವಿರಲೂ ಬಲ್ಲನಯ್ಯಾ.

೨. ಜಲದೊಳಗಣ ಸೂರ್ಯನಂತಿರ್ಪನಯ್ಯಾ ಶಿವನು. ಲೋಕಾದಿ ಲೋಕಂಗಳೊಳಗಿರ್ದಡೇನು, ಜಗದ ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ ಮೋಕ್ಷಕ್ಕೊಳಗಾದಾತನೇ? ಅಲ್ಲ. ಅದೆಂತೆಂದೊಡೆ, ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ, ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವನಿಗಿಲ್ಲವಾಗಿ, ಅನಂತಕೋಟಿ ಬ್ರಹ್ಮಾಂಡಂಗಳು ತನ್ನ ಒಡಲೊಳಗೆ ಅಡಗಿದವೆಂದಡೆ, ತಾ ಹೊರಗಾಗಿ ಅಡಗಲೆಡೆ ಏನುಂಟು? ಇದು ಕಾರಣ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ, ವಿಶ್ವಾಧಿಪತಿಯಾಗಲೂ ಬಲ್ಲ.

೩. ಹಲವು ತೃಣಕಾಷ್ಠಗಳಲ್ಲಿ ಅಗ್ನಿ ಬೆರೆದಿರ್ಪಂತೆ, ಹಲವು ಘಟ ಜಲದಲ್ಲಿ ಸೂರ್ಯ ಬಿಂಬಿಸುತ್ತಿರ್ಪಂತೆ, ಇದ್ದನಯ್ಯಾ ಶಿವನು ಸಕಲ ಜೀವರ ಹೃದಯದಲ್ಲಿ ಬೆರಸಿಯೂ ಬೆರಸದಂತಿಪ್ಪನಯ್ಯಾ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೪. ಜಲದೊಳಗಣ ಕಿಚ್ಚು ಜಲವ ಸುಡದೆ ಜಲವು ತಾನಾಗಿಯೇ ಇದ್ದಿತ್ತು ನೋಡಾ. ನೆಲೆಯನರಿದು ನೋಡಿಹೆವೆಂದಡೆ, ಅದು ಜಲವು ತಾನಲ್ಲ. ಕುಲದೊಳಗಿರ್ದು, ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರುಬಲ್ಲರು? ಹೊರಗೊಳಗೆ ತಾನಾಗಿರ್ದು ಮತ್ತೆ ತಲೆದೋರದಿಪ್ಪುದು ಗ.ಹೇಶ್ವರಾ ನಿಮ್ಮನಿಲವು ನೋಡಾ.

ಅರ್ಥ:—ಶುಕ್ರಶೋಣಿತಾತ್ಮ ಸಂಗದಿಂದಾದ ಜಲಬುದ್ಬುದ ಪಿಂಡದೊಳಗೆ ಅಡಗಿಪ್ಪ ಪರಶಿವಜ್ಞಾನಾಗ್ನಿ ಜಡ ಪಿಂಡವ ದಗ್ಧವ

ಮಾಡಲರಿಯದೆ ಅಲ್ಲಿಯೇ ಗತವಾಗಿ ತದ್ರೂಪವಾಗಿತ್ತೆಂಬುದೀಗ, ಜಲದೊಳಗಿರ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತ್ತೆಂಬ ಶಬ್ದಕ್ಕರ್ಥ. ವಿವೇಕದಿಂತಿಳಿದು ನೋಡಿದಡೆ, ಆ ಶಿವಜ್ಞಾನ ಜಡ ಪಿಂಡರೂಪಲ್ಲವೆಂಬುದೀಗ ನೆಲೆಯನರಿಯಬಲ್ಲಡೆ, ಅದು ಜಲವು ತಾನಲ್ಲವೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು, ಜಾತಿವರ್ಣಾಶ್ರಮ ಕುಲಗೋತ್ರ ನಾಮಂಗಳೊಳಗೆ ವೇಧಿಸಿಕೊಂಡಿರ್ದು, ಹೊದ್ದಿಯೂ ಹೊದ್ದದೆ ಸರ್ವತೋಧಿಕವಾಗಿದ್ದಿತ್ತೆಂಬುದೀಗ, ಕುಲದೊಳಗಿರ್ದು ಕುಲವ ಬೆರಸದೆ ನೆರೆಗೆಟ್ಟು ನಿಂದುದ ನಾರುಬಲ್ಲರು ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅಂತರಂಗ ಬಹಿರಂಗದೊಳಗೆ ಪರಿಪೂರ್ಣವಾಗಿರ್ದು ಅನ್ಯವಾಗಿ ತೋರಿಸಿಕೊಳಲರಿಯದೆ ಗೌಪ್ಯವಾಗಿಪ್ಪುದೆಂಬುದೀಗ ಒಳಹೊರಗೆ ತಾನಾಗಿ ಮತ್ತೆ ತಲೆದೋರದಿಪ್ಪುದೆಂಬ ಶಬ್ದಕ್ಕರ್ಥ.

೫. ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ ಬಣ್ಣ ಮೂಜಗಕ್ಕೆ ಮುಕ್ಕಣ್ಣ ತಾನು ಬಣ್ಣಕರು ಬಣ್ಣದೊಳಗಾಳುವದನೆ ಕಂಡು ಅಣ್ಣ ನಗುತಿರ್ದನೈ ಯೋಗಿನಾಥಾ.

ಅರ್ಥ:- ಮಹಾಲಿಂಗದ ಚಿತ್ ಪ್ರಭಾಂಗವೆಂಬುದೀಗ ಬಣ್ಣವೆಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗಕ್ಕೆ ಲೀಲಾ ವಿಲಾಸ ತೋರಿದಲ್ಲಿ ಚಿತ್ ಪ್ರಭಾಕಾಶವೇ ಸ್ಫುರಿಸಿ ನಾನಾತ್ವವನೈದಿ ಪರಿಚ್ಛಿನ್ನಾತ್ಮರಾದರೆಂಬುದೀಗ ಬಣ್ಣ ಹಲವಪ್ಪಲ್ಲಿ ಎಂಬ ಶಬ್ದಕ್ಕರ್ಥ. ಅಂತು ಹಲವಾತ್ಮರಾದ ಚೈತನ್ಯ ಒಂದೇ ಎಂಬುದೀಗ ಬಣ್ಣ ತಾನೊಂದಾಗಿ ಎಂಬ ಶಬ್ದಕ್ಕರ್ಥ. ಅಂತು ಲಿಂಗದ ಚಿತ್ ಪ್ರಕಾಶವೇ ಮೂಜಗವಾಯಿತ್ತೆಂಬುದೀಗ ಬಣ್ಣ ಮೂಜಗಕ್ಕೆ ಮುಕ್ಕಣ್ಣ ತಾನು ಎಂಬ ಶಬ್ದಕ್ಕರ್ಥ. ಅಂತು ಚಿದಂಶಿಕರಾದ ಆತ್ಮರು ದೇಹೇಂದ್ರಿಯ ಕುಲಗೋತ್ರಂಗಳು ಮೊದಲಾದ ನಾನಾ ಪ್ರಪಂಚಿನ ಬಣ್ಣದ ಸಂಸಾರಸಾಗರದೊಳಗೆ ಮುಳುಗಿ ಆಳುತ್ತಿಪ್ಪ ಜೀವರ ನೋಡಿ ವಿನೋದಿಸುತ್ತ ತಾ ಹೊರಗಾಗಿರ್ದಾತನೆಂಬುದೀಗ ಬಣ್ಣಕರು ಬಣ್ಣದೊಳಗಾಳುವದನೆ ಕಂಡು ಅಣ್ಣ ನಗುತಿರ್ದನೈ ಯೋಗಿನಾಥಾ ಎಂಬ ಶಬ್ದಕ್ಕರ್ಥ.



---

## ವಿಶ್ವವು ಪರಮಾತ್ಮನಲ್ಲ.

೧. ಸರ್ವವೂ ಶಿವನಿಂದ ಉದ್ಭವಿಸಿದವೆಂದೊಡೆ, ಆ ಉದ್ಭವಿಸಿದವೆಲ್ಲ ಶಿವನೇ? ಸಕಲ ಬೀಜವ ಬಿತ್ತುವನು ಒಕ್ಕಲಿಗನೆಂದೊಡೆ, ಬೆಳೆ ತಾನೊಕ್ಕಲಿಗನೇ? ಮಡಕೆಯ ಕುಂಬರ ಮಾಡುವನೆಂದೊಡೆ, ಆ ಮಡಿಕೆ ತಾ ಕುಂಬರನೇ? ಕಬ್ಬುನವ ಕಮ್ಮರ ಮಾಡುವನೆಂದೊಡೆ, ಆ ಕಬ್ಬುನ ತಾ ಕಮ್ಮರನೇ? ಈ ಪರಿಯಲ್ಲಿ ಸಕಲಜಗತ್ತು ಸಚರಾಚರವನು ಶಿವನು ಮಾಡುವನೆಂದೊಡೆ, ಆ ಸಚರಾಚರವೆಲ್ಲವೂ ಶಿವನೇ? ಹಾಗಾದೊಡೆ ಅಷ್ಟಾದಶ ವರ್ಣಂಗಳೇಕಾದವು? ಎಂಭತ್ತೆಂಟುಲಕ್ಷ ಜೀವರಾಶಿಗಳೇಕಾದವು? ಸುಖ, ದುಃಖ, ಸ್ವರ್ಗ, ನರಕಂಗಳೇಕಾದವು? ಆಚಾರ ಅನಾಚಾರಗಳೇಕಾದವು? ಪುಣ್ಯ, ಪಾಪ, ಭವಿಭಕ್ತರೆಂದೇಕಾದವು? ಇದುಕಾರಣ ಸದ್ಭಕ್ತ ಸದಾಚಾರದಲ್ಲಿರ್ಪನು. ಅಂತಲ್ಲದೆ ಸರ್ವವೂ ಶಿವನೆಂದೊಡೆ ಘೋರನಾಯಕನರಕ ಕೂಡಲಚನ್ನಸಂಗಯ್ಯ.

೨. ಶಿವನು ಸರ್ವಗತನಾಗಿಯೂ ಇಹನೆಂದೊಡೆ ಎಲ್ಲವೂ ಶಿವನೇ? ಅಲ್ಲ. ಮತ್ತೆಲ್ಲಿಹನೆಂದೊಡೆ, ನಿರ್ಮಲಚಿತ್ತರಾದ ದೇಹಿಗಳಲ್ಲಿ, ಸಂತೋಷಿಗಳಾದ ನಿರಾಶಾಭರಿತರಲ್ಲಿ, ನಿರ್ಮಲ ಪರಮ ಮಾಹೇಶ್ವರರ ಹೃದಯದಲ್ಲಿ ಅತಿ ಪ್ರೇಮದಿಂದಿಹನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೩. ಸ ... ರ್ದಿ
ಜನಂಗಳನೆ

ಯುಂಗಳೇಕಾದವು? ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳೇಕಾದವು? ಸೂತ್ರಧಾರ ನರರಿಗಾಗಿ ಯಂತ್ರವನಾಡಿಸುವಲ್ಲಿ, ಹೊರಗಿರ್ದಾಡಿಸುವನಲ್ಲದೆ, ತಾನೊಳಗಿರ್ದಾಡಿಸುವನೇ? ಆ ಹಾಗೆ ಶಿವನು ತನ್ನಾಧೀನವಾಗಿರ್ದ ತ್ರಿಜಗದ ಸಚರಾಚರಂಗಳೆಂಬ ಯಂತ್ರವನು ಯಂತ್ರವಾಹಕನಾಗಿ ಆಡಿಸುವನಲ್ಲದೆ, ತಾನಾಡುವನೇ? ಇದುಕಾರಣ ಸರ್ವವೂ ಶಿವನೆನಲಾಗದು. ಮತ್ತೆಲ್ಲಿಹನೆಂದೊಡೆ ಸದಾಚಾರ ಸದ್ಭಕ್ತಿ ಸನ್ನಿಹಿತ ಲಿಂಗಜಂಗಮದೊಳಗಿರ್ಪ ಮತ್ತೆಲ್ಲಿಯೂ ಇಲ್ಲ ಕೂಡಲಚನ್ನ ಸಂಗಯ್ಯ.

೫. ಪರುಷದ ಪುತ್ಥಳಿಗೆ ಕಬ್ಬುನದಾಭರಣ ಉಂಟೇ ಅಯ್ಯ? ಲೋಕದೊಳಗೆ ಲಿಂಗ, ಲಿಂಗದೊಳಗೆ ಲೋಕವಾದೊಡೆ, ಹಿಂದಣ ಪ್ರಳಯಂಗಳೇಕಾದವು? ಇನ್ನು ಮುನ್ನಿನ ಪ್ರಳಯಂಗಳಿಗೆಂತೋ? ಲೋಕಲೋಕದಂತೆ, ಲಿಂಗವು ಲಿಂಗದಂತೆ! ಈ ಉಭಯದ ಭೇದವ ಗುಹೇಶ್ವರಾ ನಿಮ್ಮ ಶರಣನೇ ಬಲ್ಲ.

೬. ಸರ್ವಗತ ಶಿವನೆಂದು ಕೇಳುವ ಮರುಳು ಮಾನವರ ಮಾತು ಕೇಳಲಾಗದು. ಅದೆಂತೆಂದೊಡೆ, ಸರ್ವ ಜೀವರುಗಳಂತೆ ವನಿತಾದಿ ವಿಷಯ ಪ್ರಪಂಚದಲ್ಲಿ ಮಗ್ನನಾಗಿ ಇರುವನೇ? ಶಿವನು ಸರ್ವ ಜೀವರುಗಳಂತೆ, ಪುಣ್ಯ, ಪಾಪ, ಸುಖ, ದುಃಖ, ಸ್ವರ್ಗ, ನರಕಗಳೆಂಬ ದ್ವಂದ್ವ ಕರ್ಮಂಗಳಲ್ಲಿ ಹೊಂದಿರ್ಪನೇ? ಶಿವನು ಸರ್ವ ಜೀವರುಗಳಂತೆ ಉತ್ಪತ್ತಿ, ಸ್ಥಿತಿ, ಪ್ರಳಯ, ಬಂಧನಗಳೆಂಬ ಕಷ್ಟಕ್ಕೆ ಸಿಲ್ಕಿ ಪುದುಕುಳಿಗೊಂಬನೇ ಶಿವನು? ಇಂತೀ ಭೇದವನರಿಯದೆ, ಸರ್ವಗತ ಶಿವನೆಂದು ನುಡಿವ ಕಡುಪಾತಕರ ಜಡಜೀವಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ.



ವಾಯು, ಪ್ರಾಣಾಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯವೆಂಬ ದಶವಾಯುಗಳು ತಾನಿರ್ದಲ್ಲಿ, ಅಗ್ನಿಮಂಡಲ, ಆದಿತ್ಯಮಂಡಲ, ಚಂದ್ರಮಂಡಲವೆಂಬ ಮಂಡಲ ತ್ರಯಂಗಳು ತಾನಿರ್ದಲ್ಲಿ. ತಾನೇ ಯಂತ್ರವಾಹಕನಾಗಿ, ಇವೆಲ್ಲವು ತನ್ನ ಲೀಲಾ ಮಾತ್ರದಲ್ಲಿ ಆಡಿಸುತ್ತಿಹನಲ್ಲದೆ ತಾನಾಡನು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

೭. ಶಿವನು ಜಗದ್ಭರಿತನೆಂದವರ ಬಾಯಲ್ಲಿ ಇಕ್ಕಿರೋ ಹನ್ನೆರಡು ವರ್ಷದ ಹಳೆಯ ಪಾದರಕ್ಷೆಯನು. ಅದೇನು ಕಾರಣವೆಂದಡೆ, ಶಿವನು ಜಗದ್ಭರಿತನೇ? ಅಲ್ಲ. ಶಿವನು ಜಗದ್ಭರಿತನಾದೊಡೆ, ಜೀವಕ್ಕೆ ಜೀವ ಭಕ್ಷಿಸಲೇತಕೋ? ಶಿವನು ಜಗದ್ಭರಿತನೆಂದರಿದೊಡೆ, ಪ್ರಾಣಕ್ಕೆ ಪ್ರಾಣ ವಿರೋಧಿಸಲೇತಕೋ? ಶಿವನು ಜಗದ್ಭರಿತನೆಂದರಿದೊಡೆ, ತಾನೇ ಗುರು, ತಾನೇ ಲಿಂಗ, ತಾನೇ ಜಂಗಮ, ತಾನೇ ಪಾದೋದಕ ಪ್ರಸಾದ ಕಾಣಾ ನಿಃಸಂಗ ನಿರಾಳ ಪ್ರಭುವೇ.

೮. ಅದ್ವೈತವ ಸಾಧಿಸಿ ಸರ್ವವೂ ಶಿವನೆಂಬರು. ಎನಲಾಗದು. ಸರ್ವಕ್ಕೂ ಲಯ ಗಮನ ಉಂಟು, ಶಿವಂಗಿಲ್ಲವಾಗಿ. ಯಂತ್ರವಾಹಕನೆಲ್ಲಿಯೂ ಪರಿಪೂರ್ಣನಾಗಿಹನೆಂದಡೆ, ಎಲ್ಲವೂ ಶಿವನಾಗಬಲ್ಲವೇ? ಅಗಲರಿಯವು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ಪದ್ಮಪತ್ರ ಜಲದಂತೆ ಹೊದ್ದಿಯೂ ಹೊದ್ದದಂತಿಹನು.

# ದೇವರು ಒಬ್ಬನೇ ಇದ್ದಾನೆ.

## ಭಾಗ ೧

೧. ಸ್ವಾಮಿ ನೀನು ಶಾಶ್ವತನು ನೀನು. ಎತ್ತಿದೆ ಬಿರಿದು ಜಗವೆಲ್ಲರಿಯಲು. ಮಹಾದೇವ ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೆ ಏಕೋದೇವ. ಸ್ವರ್ಗ, ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ಕೂಡಲಸಂಗಮದೇವ.

೨. ಶ್ರುತಿ ಅಗಮ್ಯ. ದ್ವಾದಶಾದಿತ್ಯನಪ್ರತಿಮತತ್ವನ ಪ್ರತಿಮ ಮಹಿಮಂಗೆ ಪ್ರತಿಯುಂಟೇ? "ಸೋಮಃ ಪವತೆ" ಎಂಬ ಶ್ರುತಿಯನರಿದು, "ಶಿವಮೇಕೋದೇವ, ರುದ್ರನ ದ್ವಿತೀಯ" ನೆಂಬುವದು ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದು ಜಗವೆಲ್ಲರಿಯಲು.

೩. ವೇದ ಸ್ವಯಂಭುವೆಂಬ ವಾದಿ ಕೇಳೆಲವೋ. ಏಕೋರುದ್ರನ ದ್ವಿತೀಯನೆಂದು ನಂಬುವದು ಕಾಣಿರಣ್ಣಾ. ಓಂ ದೇವಾ ಭೂಮಿ ಜನಯಂ ದೇವಾ, ಏಕೋದೇವ ರುದ್ರನ ದ್ವಿತೀಯನೆಂಬುದು ಕಾಣಿರಣ್ಣಾ. ಚಕಿತಮಭಿಧತ್ತೆ ಎಂದು ಶ್ರುತಿ ಸಾರುತ್ತಿದ್ದಾವೆ. ಜಗದ ಕರ್ತ ಕೂಡಲಸಂಗಮದೇವನೊಬ್ಬನೇ ಕಾಣಿರಣ್ಣಾ.

೪. ಕುಂಭ ಸಹಸ್ರ ಉದಕದೊಳಗೆ ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ, ಮತ್ತೆ ಹಲಬರುಂಟೇನಯ್ಯ? ಸಕಲದೇಹಗಳೊಳಗೆ ಭ್ರಮಿಸಿ ತುಂಬಿಪ್ಪ ಪರವಸ್ತು ನೀನೊಬ್ಬನಲ್ಲದೆ ಮತ್ತಾರನೂ ಕಾಣೆನಯ್ಯ ಅಖಂಡೇಶ್ವರಾ.

೫. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ. ದೇವನೊಬ್ಬನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ ಕೂಡಲ ಸಂಗಮದೇವನೊಬ್ಬನೇ ಅಲ್ಲದೆ ಇಬ್ಬರಿಲ್ಲವೆಂದಿತ್ತು ದಾ ವೇದವು.



೬. ಇಬ್ಬರು ಮೂವರು ದೇವರೆಂದು ತಬ್ಬಿಬ್ಬಿಗೊಂಡು ನುಡಿಯಬೇಡ. ಒಬ್ಬನೇ ದೇವ ಕಾಣಿರಣ್ಣಾ. ಶಿವ ಏಕೋ ದೇವನೆಂದು ಸಾರುತ್ತಿವೆ ಶ್ರುತಿ ಪುರಾಣಂಗಳು. ಇದು ಕಾರಣ ಶಿವನಲ್ಲದೆ ದೈವವಿಲ್ಲವೆಂದರಿದ ಮಹೇಶ್ವರನ ಹೃದಯವಾಸವಾಗಿಪ್ಪ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೭. ಶಿವಲೋಕಕ್ಕೆ ಬೇರೆ ಲೋಕವಿಲ್ಲ. ಶಿವಮಂತ್ರವಲ್ಲದೆ ಬೇರೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ ಕೂಡಲಸಂಗಮದೇವನೊಬ್ಬನೆ ದೈವವೆಂದು.

೮. ಶಿವನಲ್ಲದೆ ದೇವನಿಲ್ಲ ನೋಡಾ ಎನಗೆ. ಶಿವಮಂತ್ರವಲ್ಲದೆ ಬೇರೆ ಮಂತ್ರವಿಲ್ಲ ನೋಡಾ ಎನಗೆ. ಇದುಕಾರಣ ಓಂ ನಮಃಶ್ಶಿವಾಯ ಓಂ ನಮಃಶ್ಶಿವಾಯ ಎಂಬ ಷಡಕ್ಷರ ಮಂತ್ರವನೆ ಜಪಿಸುತ್ತಿರ್ದೆನು, ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

೯. ಶಿವನೇ ಜಗತ್ರಯಕ್ಕೊಡೆಯನೆಂದುದು ವೇದ. ಉತ್ಪತ್ತಿ, ಸ್ಥಿತಿ, ಲಯ, ಕಾರಣವೆಂದುದು ವೇದ. "ಈಶ್ವರಸ್ಸರ್ವ ಜಗತ್ ಪ್ರಭುಃ ಪ್ರೇರಕೋ ವಿಶ್ವಭುಕ್" ಎಂಬ ಶ್ರುತಿ. ಇದುಕಾರಣ, ಕೂಡಲಸಂಗಮದೇವನೊಬ್ಬನೇ ದೇವನು.

೧೦. ಯುಗಜುಗ ಪ್ರಳಯವನಂದೂ ಕಾಣೆ ಇಂದೂ ಕಾಣೆ. ಧಿಗಿಲು ಭುಗಿಲೆಂದುರಿ ಅಂದೂ ಕಾಣೆ ಇಂದೂ ಕಾಣೆ. ಕೂಡಲಸಂಗಮದೇವನಲ್ಲದೆ ತಲೆದೋರುವ ದೈವಂಗಳನಂದೂ ಕಾಣೆ.

೧೧. ಆ ಪರಮನೆಂಬುದು ನಿಮ್ಮ ಭೇರಿ. ಬೇಡಿದ್ದ ನೀವನೆಂಬುದು ನಿಮ್ಮ ತಂಬಟೆ. ಜಗವಂದಿತ ಲೋಕವೊಡೆಯನೆಂಬುದು ನಿಮ್ಮ ಶಂಖ. ಶಿವನಲ್ಲದೆ ಪರದೈವವಿಲ್ಲೆಂಬುದು ನಿಮ್ಮ ಡಮರುಗ. ಶಿವಕೊಡನೆಂಬವರ ಬಾಯ ತ್ರಿಶೂಲದಲ್ಲಿರಿವ.

## ತ್ರಿಮೂರ್ತಿಗಳು ದೇವರಲ್ಲ.

೧. ಹುಟ್ಟಿಸುವಾತ ಬ್ರಹ್ಮನಾದೊಡೆ, ಅರ್ಚಿಸಲೇಕೋ ನಿಮ್ಮುವ? ರಕ್ಷಿಸುವಾತ ವಿಷ್ಣುವಾದೊಡೆ ಅರ್ಪಿಸಲೇಕೋ ನಿಮಗೊಂದುವ? ಹೊಂದಿಸುವಾತ ರುದ್ರನಾದೊಡೆ ಮಹತ್ವವ ನುಡಿಯಲೇಕೋ ನಿಮ್ಮುವ? ಇಂತೀ ಲೀಲೆಗೆ ಆರಾದಡೂ ಆಗಲಿ. ನಾನಾ ಲೀಲೆಯುವನಲ್ಲ. ಇದರ ಹೊಳಹು ನೀನೇ ನಿಃಕಳಂಕ ಚನ್ನಮಲ್ಲಿಕಾರ್ಜುನಯ್ಯ.

೨. ರುದ್ರನೇ ದೇವರೆಂದು ಆರಾಧಿಸಿ, ಸಿಲೆಯೊಳಗೆ ಹೊರಟಿಗೊಂಡು ಕೆಟ್ಟರಲ್ಲ ಭಕ್ತ ಜನಂಗಳು. ವಿಷ್ಣುವೇ ದೇವರೆಂದು ಆರಾಧಿಸಿ, ಮನನ ಸುತ್ತಿ ಕೆಟ್ಟರಲ್ಲ ಭೂಸುರಾದಿಗಳು. ಬ್ರಹ್ಮನೇ ದೇವರೆಂದಾರಾಧಿಸಿ ಬೆಂಕಿಯೊಳಗೆ ಬೆಂದರಲ್ಲ ಮರ್ತ್ಯಲೋಕದ ಮಹಾಜನಂಗಳು. ಧಾರುಣಿಯೊಳಗೆ ಹೇರಿನಕ್ಕಿ, ಲಳಿಗೆ ಎಣ್ಣೆ, ಹೂವು, ಕಾಯಿ, ಹಣ್ಣು ಮೊದಲಾದವನು ಶಪ್ಪಸಾಧಿಸಿ, ತರಿಸಿಕೊಂಡುಂಬ ಇವ್ರಗಳಿಗೆಲ್ಲಿಯದೋ ನೆಟ್ಟನೆ ದೇವತ್ವ? ಎನ್ನ ದೇವಂಗೆ ಇಂಥವರಂದ ಒಂದೂ ಇಲ್ಲ ಕಾಲದೊಳಗಾದ ಪ್ರಳಯವಿರಹಿತ, ವಿರಹಿತ ಕರ್ಮದೊಳಗಾದ ಚತುರ್ವಿಧ ಪದರಹಿತ, ಗಂಗೆವಾಳುಕ ಸಮರುದ್ರರೊಳಗಾದ ಬಂಧನ ವಿರಹಿತ, ಲೀಲೆಗೆ ಹೊರಗಾದ ಸ್ವಯಂಭುವಯ್ಯ ಎನ್ನ ದೇವ, ಇಂತಿವರೆಲ್ಲರೂ ಪ್ರತಿಷ್ಠೆಯನಾರಾಧಿಸಿ ಪ್ರಸನ್ನರಾದರಯ್ಯ. ಇಂತೀ ಪುಣ್ಯದ ಫಲ ಎನಗೊಂದೂ ಬೇಡ. ಇವರೆಲ್ಲ ಒಳಗಿರಲಿ ನಾ ಹೊರಗಯ್ಯ. ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಆಲಸಿದೆನಲಸಿದೆ. ನಿಮ್ಮ ಕಪ್ಪದ ಸೇವೆ ಏನಯ್ಯ? ಎನ್ನ ಹೊರಗಿರಿಸು. ನಿಮ್ಮೊಳಗಾದೆನಯ್ಯ ನಿಃಕಳಂಕ ಮಲ್ಲಿಕಾರ್ಜುನಯ್ಯ.

೩. ಹುಟ್ಟಿಸುವಾತ ಬ್ರಹ್ಮನೆಂಬರು. ರಕ್ಷಿಸುವಾತ ವಿಷ್ಣುವೆಂಬರು. ಬ್ರಹ್ಮನು ತನ್ನ ಶಿರವನೇಕೆ ಹುಟ್ಟಿಸಿಕೊಳ್ಳಲಾರದೆ ಹೋದ? ವಿಷ್ಣು ತನ್ನ ಮಗನನೇಕೆ, ರಕ್ಷಿಸಿಕೊಳ್ಳಲಾರದಾದ? ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲಸಂಗಮದೇವಯ್ಯ.



೪. ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ, ಲಿಂಗವೇ? ಒಬ್ಬರಿಗೊಬ್ಬರು ಘನವೆಂಬರದೆಂತಯ್ಯ? ಒಬ್ಬರಿಗೊಬ್ಬರು ಹಿರಿಯರೆಂದೆಂಬರು. ಅದೆಂತಯ್ಯ? ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು, ನಮ್ಮ ಕೂಡಲಸಂಗಮದೇವಂಗೆ ಇಲ್ಲ.

## ಅಷ್ಟತನು ಮೂರ್ತಿಗಳು ದೇವರಲ್ಲ.

೧. ಅಷ್ಟತನು ಮೂರ್ತಿಗಳು ದೇವರೆಂಬ ಭ್ರಷ್ಟಭವಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದಡೆ, ಪೃಥ್ವಿ ದೇವರಾದಡೆ ಅಪ್ಪುವಿನ ಪ್ರಳಯದಲ್ಲಿ ಕರಗುವದೇ? ಅಪ್ಪು ದೇವರಾದಡೆ ಅಗ್ನಿಯ ಪ್ರಳಯದಲ್ಲಿ ಅರತು ಹೋಗುವದೇ? ಅಗ್ನಿ ದೇವರಾದಡೆ, ವಾಯುವಿನ ಪ್ರಳಯದಲ್ಲಿ ಹಾರಿಹೋಗುವದೇ? ವಾಯು ದೇವರಾದಡೆ ಆಕಾಶದ ಪ್ರಳಯದಲ್ಲಿ ಲಯವಪ್ಪುದೇ? ಆಕಾಶ ದೇವರಾದಡೆ ಆತ್ಮನಲ್ಲಿ ಅಡಗಿಹೋಗುವದೆ? ಆತ್ಮ ದೇವರಾದಡೆ, ದ್ವಂದ್ವ ಕರ್ಮಂಗಳಲ್ಲಿ ಜನನ ಮರಣಂಗಳಲ್ಲಿ ಬಂಧನ ಪಡುವನೇ? ಚಂದ್ರ ಸೂರ್ಯರು ದೇವರಾದಡೆ, ಭವ ಬಂಧನದಲ್ಲಿ ಸಿಲ್ಕಿ ತೊಳಲಿ ಬಳಲುವರೇ? ಇದುಕಾರಣ ಅಷ್ಟತನುಗಳೆಂತು ದೇವರೆಂಬೆನು? ದೇವ, ದೇವ ಮಹಾಮಹಿಮ ಎನ್ನೊಡೆಯ ಅಖಂಡೇಶ್ವರನೊಬ್ಬನೇ ದೇವರಲ್ಲದೆ ಉಳಿದವರೆಲ್ಲ ಪುಸಿ ಎಂಬೆ.

೨. ಅಷ್ಟತನು ಮೂರ್ತಿಗಳ ಲಿಂಗವೆಂದೆಂಬಿರಿ. ಇವರಾರೆಂದು ನಾವರಿಯೆವಯ್ಯ. ಆದಿಯ ಮಗನತೀತ, ಅತೀತನ ಮಗನಾಕಾಶ, ಆಕಾಶನ ಮಗ ವಾಯು, ವಾಯುವಿನ ಮಗ ಅಗ್ನಿ, ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯ ಮಗ ಸೂರ್ಯ, ಸೂರ್ಯನ ಮಗ ಚಂದ್ರ, ಚಂದ್ರನ ಮಗ ದೇಹ, ದೇಹನ ಮಗ

ನಾತ್ಮ, ಇಂತೀ ಅಷ್ಟತನುವೆಲ್ಲಕ್ಕೆಯೂ ಉತ್ಪತ್ತಿಯುಂಟು. ಅಜಾತ ಜನಿತ ನಮ್ಮ ಕೂಡಲ ಸಂಗಮದೇವಂಗೆ ಮಾತಾ ಪಿತರಿಲ್ಲ.

೩. ಅಷ್ಟತನು ಮೂರ್ತಿ ಲಿಂಗವೆಂದೆಂಬ ಕಷ್ಟದ ಮಾತು ಕೇಳಲಾಗದು. ಪೃಥ್ವಿಯಂತೆ ಕಠಿಣವುಳ್ಳಾತನೇ? ಅಪ್ಪುವಿನಂತೆ ಓಟ ಛರಿತವುಳ್ಳಾತನೇ? ಅಗ್ನಿಯಂತೆ ತೃಣ ಕಾಷ್ಠವಿಲ್ಲದಿರ್ದಡೆ, ನಂದುವಾತನೇ? ವಾಯುವಿನಂತೆ ಚಲನೆಯುಳ್ಳಾತನೇ? ಆಕಾಶದಂತೆ ಒಚ್ಚಬರಿಯ ಬಯಲಾದಾತನೇ? ಚಂದ್ರಸೂರ್ಯರಂತೆ, ದಿವಾರಾತ್ರಿಗಳ ನಡಿಸುವಾತನೇ? ಜೀವಾತ್ಮನಂತೆ ಜನನ ಮರಣವುಳ್ಳಾತನೇ? ಇದು ಕಾರಣ ಕೂಡಲ ಚನ್ನಸಂಗಯ್ಯ ನೀನು ನಿನ್ನಂತೆ, ಇವರೆಲ್ಲರು ನೀನಿರಿಸಿದಂತೆ.

೪. ಅಷ್ಟತನು ಮೂರ್ತಿ ಶಿವನೆಂಬ ಕಷ್ಟ ಜೀವಿಗಳ ಮಾತು ಕೇಳಲಾಗದು. ನಾನೇನೆಂಬೆನಯ್ಯ? ಯುಗ ಜುಗ ಪ್ರಳಯವಾಹಲ್ಲಿ, ಧರೆ ಜಲದಲ್ಲಿ ಅಡಗಿತ್ತು. ಜಲ ಅಗ್ನಿಯಲ್ಲಿ ಅಡಗಿತ್ತು. ಅಗ್ನಿ ವಾಯುವಿನಲ್ಲಿ ಅಡಗಿತ್ತು. ವಾಯು ಆಕಾಶದಲ್ಲಿ ಅಡಗಿತ್ತು. ಆಕಾಶ ಅತೀತದಲ್ಲಿ ಅಡಗಿತ್ತು. ಅತೀತ ಆದಿಯೊಳಡಗಿತ್ತು. ಆದಿ ಅನಾದಿಯೊಳಗಡಗಿತ್ತು. ಅನಾದಿ ನಿಜವೊಳಗಡಗಿತ್ತು. ಇಂತೀ ಅಷ್ಟತನುಗಳು ಒಂದರೊಳಗೊಂದು ಅಡಗುವಲ್ಲಿ ಒಂದರಿಂದೊಂದು ಹುಟ್ಟುವಲ್ಲಿ ಎಂದಳಿದರೆಂಬುದ ಬಲ್ಲರೆ ನೀವು ಹೇಳಿರೇ. ಎಂದು ಹುಟ್ಟಿದರೆಂಬುದು ನೀವು ಬಲ್ಲರೆ ಹೇಳಿರೆ. ಹುಟ್ಟಿದನಳಿದನೆಂಬ ಕಷ್ಟವಚನವ ನುಡಿಯಲಾಗದು. ಇಂತೀಯಷ್ಟ ತನುವೆಲ್ಲವು ನಮ್ಮ ಮಹಾಘನಲಿಂಗ ಹುಲಿಗೆರಿಯ ಸೋಮೇಶ್ವರ ಆಗೆಂದಡಾದವು, ಬೇಡೆಂದಡೆ ಮಾದವು.

೫. ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮನೆಂಬ ಅಷ್ಟತನುಗಳು ಶಿವನ ಅಧಿಷ್ಠಾತೃವಾದವೆಂದಡೆ ಅಷ್ಟತನುಗಳು ಶಿವನಾಗಲರಿಯವು. ಮತ್ತೆ ಶಿವನ ಬಿಟ್ಟು ಬೇರೆ ತೋರಲರಿ



ಯವು. ಅಷ್ಟತನುಗಳೆಲ್ಲ ಸೋಪಾಧಿಕವಲ್ಲದೆ ನಿಜತನುವಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಂಗೆ ಅಷ್ಟತನು ಮೂರ್ತಿ ಎಂಬವು ಉಪಚಾರವು.

## ಕಿರುಕುಳ ದೈವಗಳು ದೇವರಲ್ಲ.

### ಭಾಗ ೧

೧. ಅರಗು ತಿಂದು ಕರಗುವ ದೈವ, ಉರಿಯ ಕಂಡರೆ, ಮುರುಟುವ ದೈವ, ಎಂತು ಸರಿ ಎಂಬೆನಯ್ಯ? ಅವಸರ ಬಂದರೆ, ಮಾರುವ ದೈವವನೆಂತು ಸರಿ ಎಂಬೆನಯ್ಯ? ಅಂಜಿಕೆ ಬಂದರೆ, ಹೂಳುವ ದೈವವನೆಂತು ಸರಿ ಎಂಬೆನಯ್ಯ? ಸಹಜ ಭಾವ, ನಿಜೈಕ್ಯ, ಸ್ಥಿರರೂಪ, ನಿರ್ವಿಕಾರ, ನಿರಂಜನ ಕೂಡಲ ಸಂಗಮದೇವನೊರ್ವನೇ ದೇವ ಕಾಣಿರೋ.

೨. ಮಾರಿಕವ್ವೆಯನೆಂತು ಕೊರಳಲ್ಲಿ ಕಟ್ಟಿಕೊಂಬರು? ಸಾಲ ಬಂದರೆ ಮಾರಿಕೊಂಡು ತಿಂಬರು. ಸಾಲ ಬಂದರೆ ಒತ್ತೆಯ ನಿಟ್ಟುಕೊಂಬರಯ್ಯ. ಮಾರುವೋಗನೊತ್ತೆವೋಗ ನಮ್ಮ ಕೂಡಲಸಂಗಮದೇವ.

೩. ಉಣಲುಡಲು ಮಾರಿಕವ್ವೆಯಲ್ಲದೆ, ಕೊಲ್ಲಲು ಕಾಯಲು ಮಾರಿಯೇ? ತನ್ನ ಮಗನ ಜವನೊಯ್ವಲ್ಲಿ, ಅದೆತ್ತ ಹೋದಳೋ ಮಾರಿಕವ್ವೆ? ಇವ ಕಾವರೇ? ನಮ್ಮ ಕೂಡಲ ಸಂಗಯ್ಯನಲ್ಲದೆ, ಮತ್ತೊಂದು ದೈವವಿಲ್ಲ ದೈವವಿಲ್ಲ.

೪. ಆವಾಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು. ಹೋಗೆಂದರೆ ಹೋಗವು. ನಾಯಿಂಗೆ ಕರಕಷ್ಟ. ಲೋಗರ ಬೇಡಿಕೊಂಡುಂಬ ದೈವಂಗಳು ಕೆಲವು ತಾವೇನ ಕೊಡುವವೋ? ಏನಬೇಡಿದ್ದನೀವ ನಮ್ಮ ಕೂಡಲಸಂಗಮದೇವಾ.

 (ಲೋಗರು = ಜನರು)

೫. ಹಾಳು ಮೊರಡಿಗಳಲ್ಲಿ, ಊರದಾರಿಗಳಲ್ಲಿ ಕೆರೆ ಬಾವಿ ಹೂ ಗಿಡ ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಚೌಪಥ ಪಟ್ಟಣ ಪ್ರವೇಶ ದಲ್ಲಿ, ಹಿರಿಯಾಲದ ಮರದಲ್ಲಿ ಮನೆ ಮಾಡಿ, ಕರೆವೆಮ್ಮೆಯು, ಹಸು ಗೂಸು, ಬಸುರಿ, ಬಾಣತಿ, ಕುಮಾರಿತಿ, ಕೊಡಗೂಸೆಂಬವರ ಹಿಡಿ ದುಂಬ, ತಿರಿಮುಂಬ, ಬೀರಯ್ಯ ಖೇಚರ ಗಾವಿಲ ಅಂತರ ಬೆಂತ ಕಾಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲಸಂಗಮದೇವರಿಗೆ ಶರಣೆಂಬುದೊಂದು ಡೊಣ್ಣೆ ಸಾಲದೇ?

೬. ಮಡಿಕೆಯೇ ದೈವವು, ಮರದಲ್ಲಿಯು ದೈವವು, ಬೀದಿಯ ಕಲ್ಲೇ ದೈವವು, ಹಣತೆ ದೈವವು, ಬಿಲ್ಲುನಾರಿ ದೈವವು ಕಾಣಿರಯ್ಯಾ. ಕೊಳಗನೇ ದೈವವು, ಗಿಣಿಲು ದೈವವು ಕಾಣಿರಯ್ಯಾ. ದೈವ ದೈವ ವೆಂದು ಕಾಲಿಡಲಿಂಬಿಲ್ಲವು. ದೇವನೊಬ್ಬನೇ ಕೂಡಲಸಂಗಮದೇವಾ

೭. ಅರಳಿಯ ಮರ, ವಿಷ್ಣುಕಾಂತಿ, ಬನ್ನಿ, ಮುತ್ತ್ರಕ, ತುಳ 'ಹರ' 'ಹರಿ' ಎಂದು ಹೊಡೆಹೊಮ್ಮುವಿರಿ. ಎಲ್ಲಿ ಭೋ, ಎಲ್ಲಿ ಭೋ ನಿಮ್ಮ ಹೊಡೆವಡುವ ದೈವಂಗಳೆಲ್ಲ ಗಿಡುಮರನಾಗಿ ಹೋದವಲ್ಲ ನಿಮ್ಮ ನಡೆ ಎಲ್ಲ ಅನಾಚಾರ. ನಿಮ್ಮ ನುಡಿ ಎಲ್ಲ ಶಿವದ್ರೋಹ. ಇವಂದಿ ಗಡಣ ಬೇಡೆಂದ ನಮ್ಮ ಅಂಬಿಗರ ಚೌಡಯ್ಯ.

## ದೇವರು ಒಬ್ಬನೇ ಇದ್ದಾನೆ.

### ಭಾಗ ೧

೧. ಭಾವದಲೊಬ್ಬ ದೇವರ ಮಾಡಿ, ಮನದಲೊಂದು ಭಕ್ತಿಂ ಮಾಡಿ ಕಾಯದ ಕಯ್ಯಲ್ಲಿ ಮತ್ತೊಂದು ಭಕ್ತಿಯ ಮಾಡಿ, ವಾಯು ಬಳಲುವರು ನೋಡಾ ಎತ್ತನೇರಿ ಎತ್ತನರಸುವರು, ಎತ್ತ ಹೋದಿ ಗುಹೇಶ್ವರಾ?



೨. ಜೀವವಿಲ್ಲದ ಹೆಣವ ಹಿಡಿದಾಡುವರಯ್ಯಾ. ಪ್ರತಿ ಇಲ್ಲದ ಪ್ರತಿಗೆ ಪ್ರತಿ ಮಾಡುವರಯ್ಯಾ. ಶಿರವಿಲ್ಲದ ಮುಂಡಕ್ಕೆ ಸೆರೆಯನಿಕ್ಕುವರಯ್ಯ ಗುಹೇಶ್ವರಾ.

೩. ಒಡಲು ಹಿಡಿದು ವಾಯುಕ್ಕೆ ಹಂಗಿಗರಾದಿರಲ್ಲಾ. ಅಂಗಸಂಗಿಗಳೆಲ್ಲ ಮಹಾ ಘನವನರಿಯದೆ ಹೋದಿರೋ. ಹುಸಿಯನೆ ಕೊಯ್ದು, ಹುಸಿಯನೆ ಪೂಜಿಸಿ, ಗಸಣಿಗೊಳಗಾದರು ಗುಹೇಶ್ವರಾ.

೪. ಕಲ್ಲು ಲಿಂಗವಲ್ಲ. ಉಳಿಯ ಮೊನೆಯಲ್ಲಿ ಒಡೆಯಿತ್ತು. ಮರ ದೇವರಲ್ಲ. ಉರಿಯಲ್ಲಿ ಬೆಂದಿತ್ತು. ಮಣ್ಣು ದೇವರಲ್ಲ. ನೀರಿನ ಕೊನೆಯಲ್ಲಿ ಕದಡಿತ್ತು. ಇಂತಿವನೆಲ್ಲವನರಿವ ಚಿತ್ತ ದೇವರಲ್ಲ. ಕರಣಂಗಳ ಮೊತ್ತದೊಳಗಾಗಿ, ಸತ್ವಗೆಟ್ಟಿತ್ತು. ಇಂತಿವ ಕಳೆದುಳಿದು ವಸ್ತುವಿಪ್ಪೆಡೆ ಯಾವುದೆಂದಡೆ, ಕಂಡವರೊಳಗೆ ಕೈಕೊಂಡಾಡದೆ, ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಜರೆಯದೆ, ವಿಶ್ವಾಸ ಗ್ರಹಿಸಿ ನಿಂದಲ್ಲಿ, ಆ ನಿಜಲಿಂಗವಲ್ಲದೆ, ಮತ್ತೊಂದ ಪೆಂತನರಿಯದೆ ನಿಂದಾತನೇ ಸರ್ವಾಂಗ ಲಿಂಗಿ, ವೀರಬೀರೇಶ್ವರ ಲಿಂಗದೊಳಗಾದ ಶರಣ.

೫. ಹಲವು ಕೊಂಬೆಗೆ ಹಾಯಲು ಬೇಡ. ಬರು ಕಾಯಕೆ ನೀಡಬೇಡ. ಲೋಗರಿಗೆ ಕೊಟ್ಟು, ಭ್ರಮಿತನಾಗಬೇಡ. ಆಚಾರವೆಂಬುದೊಂದು ಹಾವಸಿಗಲ್ಲು. ಭಾವ ತಪ್ಪಿದ ಬಳಿಕ ಏಗೈದಡಾಗದು. ಅಂಜದಿರು, ಅಳುಕದಿರು, ಪರದೈವಕ್ಕೆರಗದಿರು. ಕೂಡಲಸಂಗಮದೇವರ ಕಯ್ಯಲ್ಲಿ ಇರಿಸುವದೆನ್ನ ಭಾರ.

೬. ಸೋಮವಾರ ಉಪವಾಸವಿದ್ದು, ಶಿವಂಗೆ ಅರ್ಪಿತವೆಂಬರು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವಳಿಯದೆ, ಗ್ರಾಮದ ಅನ್ಯ ಹೊಲ್ಲ ದೈವವನಾರಾಧಿಸಿ, ಅವಕಿಕ್ಕಿ, ಮಿಕ್ಕ ಕೂಳ ಸೋಮಧರಗೆ ಅರ್ಪಿತವೆಂಬರು. ಅದೆಂತೆಂದೊಡೆ, ಗ್ರಾಮದ ಶುನಕ ಗಂಗೆಯ ನೀಸಾಡ ಹೋಗಿ, ಶುದ್ಧಾಗಬಲ್ಲುದೇ? ಆ ಶುನಕನ ಮುಖವ ನೋಡಲಾಗದೆಂದಾತ ನಮ್ಮ ಕಲಿದೇವರ ದೇವಯ್ಯನು.

೭. ಕೆರೆದೇಗುಲಂಗಳೆಲ್ಲವು ಹಿಂದಣ ಆದಿ. ವಜೆಗೊಳಿಸು. ಕರ್ಮ ಕಾಂಡಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದನಳಿಮ ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧ ರಾಮಯ್ಯ.

೮. ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ. ಆಶೆ ಮಾಡ ನೋಡಾ, ಅನ್ಯ ದೈವಂಗಳಿಗೆ. ದೇಶದ ಪಿಶಾಚಂಗಳಿಗೆ ಆಶೆಮಾಡ ನೋಡಾ. ಆಶೆಮಾಡಿದನಾದಡೆ, ಆವ ದಾಸನ ಕುಲವಲ್ಲ. ಆವ ಅನ್ಯ ಕುಲ, ಕಾಣಾ ರಾಮನಾಥಾ.

೯. ಈಶ, ನಿಮ್ಮ ಪೂಜಿಸಿದ ಬಳಿಕ. ಅನ್ಯದೈವಂಗಳಿಗೆ ಹೇಸಿರಬೇಕು. ಹೇಸದೆ, ಅನ್ಯದೈವಕ್ಕಾಶೆ ಮಾಡಿದರೆ, ಆವ ನಮ್ಮ ಈಶ್ವರಂಗೆ ಹೊರಗು. ದೋಷರಹಿತ ಭಕ್ತರು ಆವಂಗೆ ಕುಲವೆಂದು ಕೂಸ ಕೊಟ್ಟು ಕೂಡುಂಡರೆ ಮೀಸಲ ಬೋನ ನಾಯಿ ಮುಟ್ಟಿದಂತೆ ಕಾಣಾ ರಾಮನಾಥಾ.

೧೦. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆವಡೆ, ತಲೆದಂಡ, ತಲೆದಂಡ. ಹುಸಿದೆನಾದಡೆ, ದೇವಾ, ತಲೆದಂಡ, ತಲೆದಂಡ, ಕೂಡಲಸಂಗಮದೇವಾ, ನೀನಲ್ಲದೆ ಅನ್ಯವ ನೆನೆದಡೆ, ತಲೆದಂಡ ತಲೆದಂಡ.

೧೧. ದೇವನೊಬ್ಬ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದಡೆ, ಕಿವಿ ಮೂಗ ಕೊಯ್ವುವನು. ಹಲವು ದೇವರ ಎಂಜಲ ತಿಂಬವರ ನೇನೆಂಬೆನಯ್ಯ, ಕೂಡಲಸಂಗಮದೇವಾ?

೧೨. ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ. ನಂಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ. ಬೇಡ, ಬೇಡ. ಅನ್ಯದೈವದ ಸಂಗ ಹೊಲ್ಲ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವರು ಕಂಡಡೆ, ಮೂಗ ಕೊಯ್ವುವ ಕಾಣಿರೋ.



೧೩. ಕಂಡಕಂಡವರೆಲ್ಲರ ಗಂಡರೆಂದೆಂಬ ದಿಂಡೆಯನವಳ ಸಜ್ಜನೆ ಎಂದೆನ್ನಬಹುದೇ? ಲಿಂಗಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ ನಮ್ಮ ಕೂಡಲಸಂಗಮದೇವರು ಆ ಭಂಡರಿಗೆ ಮಾಡಿದ ಹುಳುಗೊಂಡವನು.

## ಕಿರುಕುಳ ದೈವಗಳನ್ನು ನಂಬಬೇಡ.
### ಭಾಗ ೩

೧. ಕರ್ತನ ಪೂಜಿಸಿ, ಕುತ್ಸಿತ ದೈವಕ್ಕೆರಗುವದು, ಕತ್ತೆಗೆ ಕುದುರೆಗೆ ಹುಟ್ಟಿದ ಹೇಸರನಂತೆ. ಅವರ ಭಕ್ತರೆಂತೆಂಬೆ? ಭೃತ್ಯರೆಂತೆಂಬೆ? ಶರಣರೆಂತೆಂಬೆನವರ? ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮದೇವಾ.

೨. ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೇ? ಚಂದನವಿದ್ದಂತೆ ದುರ್ಗಂಧವ ಮೈಯ್ಯಲ್ಲಿ ಪೂಸುವರೇ? ಸುರಭಿ ಮನೆಯಲ್ಲಿ ಕರೆವುತ್ತಿರೆ, ಹರಿವರೇ ಸೊಣಗನ ಹಾಲಿಂಗೆ? ಬಯಸಿದಮೃತವಿದ್ದಂತೆ, ಅಂಬಲವನೆರೆದುಂಬ ಭ್ರಮಿತಮಾನವ, ನೀ ಕೇಳಾ, ಪರಮ ಪದವಿಯು ನೀವ ಚನ್ನ ಸೊಡ್ಡಳನಿದ್ದಂತೆ ಸಾವ ದೈವವ ನೋಂತರೆ, ಕಾವುದೇ ನಿನ್ನಾ?

೩. ಅಯ್ಯಾ, ನಿರಾಳ ನಿಶ್ಶೂನ್ಯ ಪರಮ ಭಕ್ತ ಜಂಗಮ ತಾನಾಗಲರಿಯದೆ, ಬರಿದೆ ಅಹಂಕರಿಸಿ, ಮೂರು ಮಲವ ಸ್ವೀಕರಿಸಿ, ನಾವೇ ಭಕ್ತ ಜಂಗಮವೆಂದು ನುಡಿವ ಕರ್ಮ ಕಾಂಡಿಗಳು, ಕಾಶಿ, ಕೇದಾರ, ಶ್ರೀಶೈಲ, ಗಯಾ, ಕಲ್ಲಣ್ಣ, ಮಲ್ಲಣ್ಣ, ಕಂಥೆ, ಕಮಂಡಲು, ಗದ್ದುಗೆ, ಪಾವುಗೆ, ಭಸ್ಮ ಘುಟಿಕೆ, ಪುರಾಣ, ದಂಡಾಗ್ರ, ಗಿಳಿಲು, ಶಂಖ, ತಿಥಿ,

ವಾರ, ನಕ್ಷತ್ರ, ಹುಣ್ಣಿವೆ, ಅಮಾವಾಸ್ಯೆ, ಸೂರ್ಯ, ಚಂದ್ರ, ಅಗ್ನಿ, ದೀಪಾರತಿ, ಗಂಗೆ, ಗೌರಿ, ವಿಘ್ನೇಶ್ವರ, ಮೊದಲಾದ ಇವು ದೈವಂಗಳೆಂದು, ಕಲ್ಲು ಮಣ್ಣು ಲೋಹ ಮರದಿಂದ ರಚಿಸಿ, ಸಂದಿ ಹಾದಿ ಮಾಡ ಜಗುಲಿಯ ಮೇಲಿಟ್ಟು, ಅದರ ಬಳಿ ನೀರು ಎಂಜಲು ತಿಂಬುವರ ಭಕ್ತರೆನ್ನಬಹುದೆ? ಇಂತಪ್ಪ ಅನಾಚಾರಿ ಶ್ವಪಚರ ಭಕ್ತ ಜಂಗಮ ದೇವರೆಂದು ಪೂಜಿಸಲಾಗದು. ನಿರಾಭಾರಿ ವೀರಶೈವಾಚಾರ ಕ್ರಿಯಾ ಜ್ಞಾನ ವೈರಾಗ್ಯ ಸದ್ಭಕ್ತ ಶಿವಶರಣನ ಪೂಜಿಸಿ ಪಾದೋದಕ ಪ್ರಸಾದವ ಕೊಂಡವಗೆ ಭವಪಾಶ ಕರ್ಮಂಗಳು ಮಾಣ್ಬವು ಕಾಣಾ ಗುಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣ.

೪. ಒಬ್ಬ ತಂದೆಯ ಬಸಿರಲ್ಲಿ ಒಂಭತ್ತು ಮಕ್ಕಳು ಹುಟ್ಟಿದರೇನಯ್ಯ? ಅವರೊಳಗೆ ಶರಗವ ಒಬ್ಬಗೆ ಕಟ್ಟಿ ಮದುವೆಯ ಮಾಡಿದ ಬಳಿಕ, ಆತಂಗೆ ತನ್ನ ಅಂಗದ ಸುಖವನ್ನು ಒಪ್ಪಿಸಬೇಕಲ್ಲದೆ, ಉಳಿದಾದ ಭಾವ ಮೈದುನರಿಗೆ ಅವನ ಮಕ್ಕಳೆಂದು ಅವರಿಗೆ ತನ್ನ ಶರಗು ಹಾಕಿದವನ್ನು ಒಪ್ಪುವರೇ ಲೋಕದೊಳಗೆ? ಪರಮೇಶ್ವರನೆಂಬ ಶಿವಂಗೆ ಹುಟ್ಟಿದಾತ ವಿನಾಯಕ, ಆತಂಗೆ ಸಾಕಾರವಾಗಿ ಹುಟ್ಟಿದಾತ ವೀರಭದ್ರ. ಇವರೆಲ್ಲರು ಶಿವನ ಮಕ್ಕಳು. ಆದರೆ ತನಗೊಂದು ಪ್ರಾಣಲಿಂಗವೆಂದು ಕಂಕಣವ ಕಟ್ಟಿ ಕರಸ್ಥಲದಲ್ಲಿ ಪಡೆದ ಬಳಿಕ, ಅನ್ಯದೈವಕ್ಕೆರಗಿದಾತಂಗೆ ನಾಯಕ ನರಕ ತಪ್ಪದು ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

೫. ವೀರಭದ್ರ, ಬಸವಣ್ಣ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ ನಮ್ಮ ಕುಲದೈವಂಗಳೆಂದು ಹೇಳುವವರಿಗೆ, ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲ, ಕೂಡಲಚನ್ನ ಸಂಗಮದೇವಾ.

೬. ಪರ್ವತ ಮಲ್ಲಯ್ಯನ ಯಾತ್ರೆಗೆ ಹೋಗಬೇಕೆಂಬರಯ್ಯ! ಅದೇನು ಕಾರಣವೆಂದಡೆ, ಗ್ರಂಥ ॥ ಶ್ರೀಶೈಲಂ ಶಿಖರಂ ದೃಷ್ಟ್ವಾ ಪುನರ್ಜನ್ಮನ ವಿದ್ಯತೆ ॥ ಎಂದುದಾಗಿ. ಅಂತಪ್ಪ ಪರ್ವತ ಮಲ್ಲಯ್ಯನ ಶಿಖರವ ಕಂಡಾಕ್ಷಣದಲ್ಲಿ ಮೋಕ್ಷವಹುದೆಂದು ಶೃತಿ ಪುರಾಣ ವಾಕ್ಯಂಗಳ ಕೇಳಬಲ್ಲಂಥ ಭಕ್ತಜನಂಗಳು ಉಳಿವಂಥ ಕೆಲ ಗಣಂಗಳು ಇಂತೀ ಸರ್ವರು ಕೂಡಿ ಸಾಲಕಡ ಮಾಡಿ ಹೊನ್ನ ತಂದು, ಒಂದೊತ್ತು ಬರಿಗಾಲಿಲಿ ನಡೆವುತ್ತ, ಆಸತ್ತು ಬೇಸತ್ತು, ಅಳಲಿ ಬಳಲಿ, "ಶಿವ ಶಿವಾ," "ಹರಹರಾ" ಎಂದು ಮಲ್ಲಯ್ಯನ ನೆನೆವುತ್ತ ಎಡೆವುತ್ತ ಮುಗ್ಗುತ್ತ ನಿನ್ನ ಪಾದವ ಎಂದು ಕಂಡೇವು ಎನ್ನುತ್ತ ಸಕಲ ಲೋಕಾದಿ ಲೋಕಂಗಳೆಲ್ಲ ಇತೀ ಪರಿಯಲ್ಲಿ ಹೋಹರಯ್ಯಾ! ಇವರಿಗೆ ಮಲ್ಲಯ್ಯನ ದರುಶನವಿಲ್ಲ, ಅವನ ಶಿಖರವ ಕಾಣಬಾರದು ನೋಡೆಂದ ನಮ್ಮ ಶರಣ ಕಾಡಿನೊಳಗಾದ ಶಂಕರ ಪ್ರಿಯ ಚನ್ನ ಕದಂಬ ಲಿಂಗ ನಿರ್ಮಾಯ ಪ್ರಭುವೇ.



೭ ಬೆನಕನ ಹರನ ಮಗನೆಂಬ ಪಾತಕರು ನೀವು ಕೇಳಿರೋ, ಪಾರ್ವತಿ ಹರನ ಸತಿ ಎಂಬ ಶಿವದ್ರೋಹಿಗಳು ನೀವು ಕೇಳಿರೋ, ಅಜಾತ ಪವಿತ್ರ ಪೂರ್ವಾಚಾರಿ ಸಂಗನಬಸವಣ್ಣನೊಬ್ಬನೇ.

೮. ಸತ್ತವರ ಸಮಾಧಿಯಲ್ಲಿ ತಡಿಯ ಕಟ್ಟಿಸಿ, ಹಿರಿಯರ ಗದ್ದುಗೆ ಎಂದು ಪೂಜಿಸುವವರು ಮಹೇಶ್ವರರಲ್ಲ. ಕಟ್ಟಿಗೆ ಹಾವಿಗೆ, ಬೆಳ್ಳಿಯ ಕಟ್ಟಿಗೆ, ಜಡೆಗಟ್ಟಿದ ಕೂದಲು ಹಿರಿಯರು ಎಂದು ಪೂಜಿಸುವವರು ಮಹೇಶ್ವರರಲ್ಲ. ಸತ್ತ ತಾಯಿತಂದೆಗಳ ಪೆಸರು ತಮ್ಮ ಪುತ್ರರಿಗೆ ಇಟ್ಟು ಪರರಿಗೆ ನಮ್ಮ ಹಿರಿಯರ ಹೆಸರೆಂದು ಪೇಳುವವರು ಮಹೇಶ್ವರರಲ್ಲ. ನಮ್ಮ ಹಿರಿಯರು ಗಳಿಸಿದ ಮಠಮಾನ್ಯವೆಂದು ಹೋರಾಡಿ, ತಳ್ಳಿ ತಗಾದಿ ಮಾಡಿ ಸರಕಾರಕ್ಕೆ ಹೊನ್ನು ಕೊಟ್ಟವರು ಮಹೇಶ್ವರರಲ್ಲ. ಇಂತವರು ಮಹೇಶ್ವರರೆಂದೊಡೆ ನಮ್ಮ ಶರಣರು ತಮ್ಮ ಪಾದರಕ್ಷೆಯಿಂದ ಹೊಡೆಯದೆ ಮಾಣ್ಬರೇ ಕಾಡಿನೊಳಗಾದ ಶಂಕರ ಪ್ರಿಯ ಚನ್ನ ಕದಂಬ ಲಿಂಗ ನಿರ್ಮಾಯ ಪ್ರಭುವೇ.

೯. ಅಯ್ಯಾ, ಸದಾಚಾರವೆಂದಡೆ ಗುರುಲಿಂಗ ಜಂಗಮದರ್ಚನೆ, ಪಾದೋದಕ ಪ್ರಸಾದ ಸೇವನೆ, ಪಂಚಾಕ್ಷರ ಷಡಕ್ಷರ ಸ್ತೋತ್ರ,

ಚಿದ್ಘನ ಮಹಾಲಿಂಗ ಧ್ಯಾನ, ಪರದ್ರವ್ಯ ನಿರಸನ ಇಂತಿದು ಸತ್ಯ ವೆಂದು ಸದ್ಗುರು ಮುಖದಿಂ ತಿಳಿದು ಭಿನ್ನವಿಲ್ಲದೆ ಆಚರಿಸುವದ ಲ್ಲದೆ, ಶುದ್ಧ ಶೈವರ ಹಾಗೆ ನಂದಿ, ವೀರಭದ್ರ, ದುರ್ಗೆ, ಮಾವುಗೆ, ಕಂಥೆ, ಕಮಂಡಲು, ಮತ್ತೆ ಲಿಂಗಗಳೆಂದು ಇದಿರಿಟ್ಟು ಪೂಜಿಸು ವನ ಮನೆಯ ಪಾಕ ಅಮೇಧ್ಯ ಮಾಂಸ ಕಾಣಾ, ಕಲಿದೇವ ದೇವಾ

೧೦. ಕಾಳಿಕಾ, ಚಾಮುಂಡಿ, ಗಂಗೆ, ಗೌರಿ, ಬನಶಂಕರಿ, ಎಲ್ಲಿ, ಎಕ್ಕನಾದಿ, ಹುಲಿಗೆ, ಹೊಸೂರಿ, ಸತ್ತವರು, ಹೆತ್ತವರು, ಇಂತೀ ಹಲವು ಪಿಶಾಚಿಗಳ ಹೆಸರಿನಿಂದ ಇದಿರಿಟ್ಟು ಆರಾಧಿಸಿ, ಅವರ ನೈವೇ ದ್ಯವೆಂದು ಶ್ರೀಗುರು ವಿತ್ತ ಲಿಂಗಕ್ಕೆ ತೋರಿ ಭುಂಜಿಸುವ ಶಿವದ್ರೋ ಹಿಗಳಿಗೆ, ಗುರುವಿಲ್ಲ, ಲಿಂಗವಿಲ್ಲ, ಜಂಗಮ ಪಾದೋದಕ ಪ್ರಸಾ ದವಿಲ್ಲ, ಕಾಣಾ ಸಂಗನಬಸವೇಶ್ವರಾ.

೧೧. ಸತ್ಯ ಸದ್ಗುರು ಕರುಣಿಸಿ ಕೊಟ್ಟ ನಿತ್ಯ ನಿಃಕಳ ಲಿಂಗವ ಕರಮನ ಭಾವದೊಳಗಿರಿಸಿ ಅರ್ಚಿಸಿ ನಿತ್ಯ ಭೋಗವ ಪಡೆಯಲ ಯದೆ, ಗುರುಮಾರ್ಗಾಚಾರಕ್ಕೆ ಹೊರಗಾಗಿ, ಜಗದ ಜಡಕಲ್ಲು ಮಣ್ಣು ಮರ ಕಂಡು ಕಾಷ್ಠ ಒರಳು ಒನಕೆ ಪಶು ತಿಥಿ ವಾರ ನಕ್ಷತ್ರ ಹುಣ್ಣಿ ಅಮಾವಾಸ್ಯೆ ತಂದೆ ತಾಯಿಗಳ ತಿಥಿ ಎಂದು ಪೂಜೆ ಮಾಡುವ ಹಸ್ತ ಭವಿ. ಆ ಹಸ್ತದಿಂದ ಮಾಡಿದ ಪಾಕ ಭವಿ. ಆ ಪಾಕವ ಪ ಶಿವ ಲಿಂಗಕ್ಕೆ ಅರ್ಪಿಸಲಾಗದು. ಅದೆಂತೆಂದೊಡೆ, ಭವಿ ಹಸ್ತ ಕೃತಂ ಪಾಕಂ ಲಿಂಗ ನೈವೇದ್ಯ ಕಿಲ್ಬಿಷಂ ॥ ಎಂದರಿದು ನಮ್ಮ ಕೂಡಲ ಸಂಗನ ಶರಣರು ಭವಿ ಪಾಕವ ಮುಟ್ಟದೆ, ಸನು ಮತದಿಂದ ಪದಾ ರ್ಥವ ಕೊಂಡು, ಪಾದೋದಕದಿಂದ ಪವಿತ್ರತೆಯಿಂದ ಸ್ವಪಾಕವ ಮಾಡಿ, ಪರಮ ಇಷ್ಟ ಮಹಾಲಿಂಗವೇ ತಾವೆಂದರಿದು ಸುಖಿಸಿ ನಿಜೈಕ್ಯರಾದರು ನೋಡಾ, ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ.



೧೨. ಭವಿತನಕ್ಕೆ ಹೇಸಿ ಭಕ್ತನಾದಬಳಿಕ, ಕೊರಳಿಗೆ ಕವ ಡೆಯ ಕಟ್ಟಿ ನಾಯಾಗಿ ಬೊಗಳುವದು ಅದಾವ ವಿಚಾರವಯ್ಯಾ? ಭವಿ ತನಕ್ಕೆ ಹೇಸಿ ಭಕ್ತ ಹುರಿ ಬೆನ್ನ ಸಿಡಿಬಾಯ ಬೀಗದಲ್ಲಿ ಹೋಗು ವದು, ಅದಾವ ವಿಚಾರವಯ್ಯಾ? ಜೀವಿನ ಉಡುಗೆಯನುಟ್ಟು ಹಡ ಲಿಗೆಯ ಹೊತ್ತು, 'ಉದೋ' ಎಂಬುವದು ಅದಾವ ವಿಚಾರವಯ್ಯಾ? ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ ಲಿಂಗಧಾ ರಣ ಮಾಡುವನೊಬ್ಬ ಗುರುದ್ರೋಹಿ. ಅವರಿಗೆ ಚರಣೋದಕವ ಧರಿ ಸುವ, ವಿಭೂತಿ ರುದ್ರಾಕ್ಷಿಯ ಕೊಡುವನೊಬ್ಬ ಲಿಂಗದ್ರೋಹಿ. ಅವನು ಭಕ್ತನೆಂದು ಅವನ ಮನೆಯ ಹೊಕ್ಕು ಮಂತ್ರವ ಹೇಳಿ ಅನ್ನವ ತಿಂಬುವನೊಬ್ಬ ಜಂಗಮ ದ್ರೋಹಿ. ಇಂತೀ ನಾಲ್ವರಿಗೆ ಸೂರ್ಯ ಚಂದ್ರರುಳ್ಳನ್ನಕ್ಕರ, ಎಕ್ಕಲ ಕುಂಡದಲ್ಲಿ ಇಕ್ಕದೇ ಮಾಣ್ಬನೇ ನಮ್ಮ ಅಂಬಿಗರ ಚೌಡಯ್ಯ?

೧೩. ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆ ಯಲ್ಲಿ ಕಿಚ್ಚೆದ್ದು ಸುಡುವಾಗ ಬಚ್ಚಲ ನೀರು ಬೀದಿಯ ಧೂಳವ ಹೊಯ್ದು, ಬೊಬ್ಬಿಟ್ಟು ಎಲ್ಲರ ಕರೆವರಯ್ಯಾ! ಕೂಡಲಸಂಗಮದೇವಾ ವಂದನೆಯ ಮರೆದು ನಿಂದಿಸುತಲಿಪ್ಪರಯ್ಯಾ!

೧೪. ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ, ಗೋರಿಗೊಳಿಸಿ ಕುರಿಯ ಕೊರಳನೇ ಕೊಯ್ದುಂಬ, ಕ್ರೂರ ಕರ್ಮಿಗಳನವರ ಶಿವಭಕ್ತ ರೆನ್ನಬಹುದೇ? ಅರಯ್ಯದೆ ಅವರ ಮನೆಯಲುಂಡ ಭಕ್ತ ಅಘೋರ ನರಕಕ್ಕೀವ ಕಾಣಾ ರಾಮನಾಥಾ.

೧೫. ಗಂಡನೆಂಜಲಿಗೆ ಹೇಸುವಳು ಮಿಂಡನೆಂಜಲ ತಿಂಬ ತೆರ ನೆಂತೆಂದರೆ, ಗುರುವಿನಲ್ಲಿ ಉಪದೇಶವಡೆದು, ಪ್ರಸಾದಕ್ಕೆ ಸೂತಕವ ಮಾಡುವ ಪಂಚಮಹಾ ಪಾತಕರು ನೀವು ಕೇಳಿ, ಭೋ. ಅಂಡದೊ ಳಗೆ ಹುಟ್ಟಿದ ಉತ್ಪತ್ತಿ ಎಲ್ಲವು ಗುರುವಿಂದಲಾಯಿತ್ತು. ಮತ್ತೆ ಮರಳಿ ಮಿಂಡ, ಮೈಲಾರ, ಬೀರ, ಭೈರವ, ಎಕ್ಕನಾದಿ, ಕುಕ್ಕನೂರ ಬಸದಿ.

ಕೇತ, ಧೂರ್ತನೆಂಬ ಕಾಳು ದೈವಕ್ಕೆರಗಿ, ನಾನು ಶಿವಭಕ್ತನೆನಿಸಿಕೊಂಬ ಚಂಡಿ ನಾಯಿಗಳ ಕಂಡು, ಎನ್ನ ಮನ ಹೇಸಿತ್ತು ಕಾಣಾ ಕಲಿದೇವರ ದೇವಾ.

೧೩. ಶದ್ದು, ತುರಿ, ತಲೆಬೇನೆ, ವೈಕಟ್ಟು, ಶೀತ, ವಾತ, ಬಹು ಜ್ವರ, ಹೊಟ್ಟೆಬೇನೆ, ಕೆಟ್ಟಹುಣ್ಣು ಮೊದಲಾದ ಇಂತೀ ಮುನ್ನೂರ ರುವತ್ತು ವ್ಯಾಧಿಯನು ಶಿವನು ಹರಿಯ ಬಿಟ್ಟು ನೋಡುವ. ಇವೆಲ್ಲವು ಶಿವನ ಕರುಣವಾದಲ್ಲದೆ ಪೋಗವು. ಲೋಕದ ಬುದ್ಧಿಗೇಡಿ ಮನುಜ ರೆಲ್ಲರು, ಶುದ್ಧ ಚಿತ್ತವುಳ್ಳ ಜಂಗಮ ಲಿಂಗದ ಮಾತ ಕೇಳದೆ, ಅದ್ದನ ಜೋಳ, ಅರಿವಾನ ಎಣ್ಣೆಯ ಕೊಂಡು, ನೋಟಗಾರತಿಯ ಮನೆಗೆ ಹೋಗಿ, ಅವಳು ಹೇಳಿದ ತಾಳಿಭೂತದ ಕೋಟಲೆಗೊಳಗಾಗಿ ಕೈಕೊಂಡು ಬಂದು, ಅವಕ್ಕೆ ಊಟವನಿಕ್ಕಿ ಮಿಕ್ಕಕೂಳ ತಮ್ಮ ಲಿಂಗಕ್ಕೆ ತೋರುವ ಲಿಂಗದ್ರೋಹಿಯ ಮಾತ ಕೇಳಲಾಗದು ಕಲಿದೇವರ ದೇವಯ್ಯ.

೧೪. ನಿಜಗಂಡನ ಸಂಗವನೊಲ್ಲದೆ ಭುಜಗರ ಸಂಗವಮಾಡುವ ದಾಡಾರಿ ತೊತ್ತಿಗೆಲ್ಲಿಯದೋ ನಿಜ ಮುತ್ತೈದಿತನ? ತ್ರಿಜಗ ವಂದಿತ ಲಿಂಗವ ಕರಕಮಲದಲ್ಲಿ ಪಿಡಿಕೊಂಡಿರ್ದ ಬಳಿಕ, ಅಲ್ಲಿ ನಂಬಿ ಪೂಜಿಸಿ ಫಲಪದವಿಯು ಮುಕ್ತಿಯ ಪಡೆಯಲರಿಯದೆ, ಲೋಕದ ಗಜಿಬಜಿ ದೈವಂಗಳಿಗೆರಗುವ ಕುನ್ನಿ ಮಾನವರ ಕಂಡರೆ, ಯಮನು ಜಗಿವೆಳೆ ದೊಯ್ದು ಕೊಲ್ಲದಿಪ್ಪನೇ? ಹಾಗೇ ಸಾಯುತೆಂಪಾತ, ನಮ್ಮ ಅಂಬಿ ಗರ ಚೌಡಯ್ಯನು.

೧೫. ಒಂದು ಜನ್ಮದಲ್ಲಿ ನಿನ್ನ ಕಲ್ಲದೇವರ ಮಾಡಿ ಪೂಜಿಸಿ, ಜೋಗಿಜಂಗಮ ಗೊರವನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಕಟ್ಟಿಗೆ ದೇವರ ಮಾಡಿ ಪೂಜಿಸಿ, ಬಡಿಗ ಕಂಬರನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಮಣ್ಣದೇವರ ಮಾಡಿ ಪೂಜಿಸಿ, ತಳವಾರನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ನೀರದೇವರ ಮಾಡಿ ಪೂಜಿಸಿ, ವಿಪ್ರ



ನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಬೆಂಕಿದೇವರ ಮಾಡಿ ಪೂಜಿಸಿ ವಿಪ್ರಾಚಾರ್ಯನಾಗಿ ಹುಟ್ಟಿದೆ. ಇಂತಿವೆಲ್ಲವನು ನೀನೆಂದು ಭಾವಿಸಿ ಪೂಜಿಸಿದಲ್ಲಿ ಇಂತೀ ಭುವನದಲ್ಲಿ ನಾನು ಹುಟ್ಟಿದೆ. ಇಂತೀ ಜಡ ಸ್ವರೂಪ ನೀನಲ್ಲ. ನೀನು ನಿರಾಳ ನಿಃಶೂನ್ಯ ನಿರಾಕಾರನೆಂದು ಎನ್ನ ಕರಸ್ಥಲದಲ್ಲಿ ಅರಿದು ಪೂಜಿಸಿ ಸಕಲ ಕುಲದವರಿಗೆ ಹೊರಗಾಗಿ ಕುಲ ಗೆಟ್ಟು ನಾನಾವ ಜನ್ಮಕ್ಕೆ ಹೋದೆನೆಂದರಿಯೆನಯ್ಯ ಕಾಡಿನೊಳಗಾದ ಶಂಕರ ಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

## ಮೂರ್ತಿ ಪೂಜೆ.

೧. ಕಲ್ಲದೇವರ ಮಾಡಿ, ಕಲ್ಲ ಮನೆಯ ಮಾಡಿ, ಆ ಕಲ್ಲ ಕಲ್ಲ ಮೇಲೆ ಕೆಡೆದರೆ, ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡುವಗೆ ನಾಯಕನರಕ ತಪ್ಪದು ಗುಹೇಶ್ವರಾ.

೨. ದೇಹವೇ ದೇಗುಲವಾಗಿರಲು, ಬೇರೆ ಮತ್ತೆ ದೇಗುಲವೇ ಕಯ್ಯ? ಪ್ರಾಣವೇ ಲಿಂಗವಾಗಿರಲು, ಬೇರೆ ಮತ್ತೆ ಲಿಂಗವೇಕಯ್ಯ? ಹೇಳಲಿಲ್ಲ ಕೇಳಲಿಲ್ಲ. ಗುಹೇಶ್ವರಾ ನೀನು ಕಲ್ಲಾದರೆ, ನಾನೇನ ಪ್ಪೆನಯ್ಯ?

೩. ಶೈವ ಕಟ್ಟಿದ ಗುಡಿಯ ಹೊಗಲೇಕೆ? ಶೈವರು ನೆಟ್ಟಲಿಂಗವ ಮುಟ್ಟಿ ಪೂಜಿಸಲೇಕೆ? ಅದೇಕೆ, ಉಪವಾಸವ ಮಾಡಲೇಕೆ? ನೆಟ್ಟಿರ್ದ ಕಟ್ಟಿರ್ದ ಕಲ್ಲಿನ ಕಷ್ಟವ ನೋಡಿರೇ. ಕಟ್ಟಿರ್ದ ಕಲ್ಲಿಗೆ ನೀಡಿ ಕೆಡೆದರೆ, ಕಟ್ಟಿರ್ದ ಕಲ್ಲಿನ ಕಷ್ಟವ ನೋಡಿರೇ. ನಮಿಸುವ ಭ್ರಷ್ಟರಿರ, ತನ್ನ ಕಲ್ಲ ಕಳೆದಿಟ್ಟು ಬಿಟ್ಟು, ನಟ್ಟಿರ್ದ ಕಲ್ಲಿಗೆ ನಮಿಸುವ ಭ್ರಷ್ಟರಿರ, ತನ್ನ ಗುರು ಕೊಟ್ಟ ಇಷ್ಟಲಿಂಗವು ಕೊಡಲರಿಯದೆಂದು, ನೆಟ್ಟಿರ್ದ ಲಿಂಗ ಕೊಟ್ಟಿಹಿತೆಂದು, ಪೊಟ್ಟಿಗಳ ನೋಡಿ, ಹೊಟ್ಟೆ ಹುಣ್ಣಾದಂತೆ ನಗು

ಶಿರ್ದೆನಯ್ಯ. ಅದೇನು ಕಾರಣವೆಂದಡೆ, ಏಕಲಿಂಗ ನಿಷ್ಠಾಚಾರವಿಲ್ಲದ ಕಾರಣ. ಪ್ರಾಣಲಿಂಗಿಗೆ ಈ ಪಾಷಾಣದ ಹಂಗುಂಟೇ? ಆತ್ಮನೊಳಗೆ ಹುಟ್ಟಿದ ಅನುಭಾವಲಿಂಗವ ಶ್ರೀಗುರು ತಂದು ಕರಸ್ಥಲದಲ್ಲಿ ಇಷ್ಟಲಿಂಗವ ಮಾಡಿ ಇರಿಸಿದನಾಗಿ, ಇಷ್ಟ ಪ್ರಾಣ ಒಂದೇ ಎಂದು ಆರಾಧಿಸಿ, ಸುಖಿಯಾಗಿರ್ದೆನು ಕಾಣಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೪. ಶೈವ ಸಿದ್ಧಾಂತಿಗಳ ಬದ್ಧ ಭವಿಗಳ ಮುಖವ ನೋಡಲಾಗದು. ಅದೇನು ಕಾರಣವೆಂದಡೆ, ಸಾಂಗೋಪಾಂಗ ಶುದ್ಧ ಶರೀರಿಯಾಗಿ ಉನ್ನತಾಸನದ ಗದ್ದುಗೆಯಲ್ಲಿ ಕುಳ್ಳಿರ್ದು, ಕಣ್ಣು ಮುಚ್ಚಿ ಅಂತರಂಗದಲ್ಲಿ ಪರಮಾತ್ಮನ ಕಳೆಯ ಧ್ಯಾನಿಸಿ, ಮನಸ್ಸಿನಲ್ಲಿ ಕಟ್ಟಿ, ದೃಷ್ಟಿಗೆ ತಂದು, ಆ ದೃಷ್ಟಿಯಿಂದ ಪುಷ್ಪದಲ್ಲಿ ತುಂಬಿ, ಮೃತ್ತಿಕೆ ಪಾಷಾಣಾದಿ ನಾನಾತರದ ಲಿಂಗಾಕಾರ ಮೂರ್ತಿಯಲ್ಲಿ ಸ್ಥಾಪಿಸುವರೆಂದು ಭಾವಿಸಿ, ಜಲ, ಗಂಧಾಕ್ಷತೆ, ಪುಷ್ಪ, ದೀಪ, ಧೂಪ, ತಾಂಬೂಲಾದಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳನೆ ಮಾಡಿ, ಆ ಪೂಜಾನಂತರದಲ್ಲಿ ಎನ್ನ ಮಲಿನವಾದ ದೇಹದಲ್ಲಿ ನೀನು ನಿರ್ಮಲವಾದ ವಸ್ತು ಇರಬೇಡ ಹೋಗೆಂದು, ತನ್ನ ದೇವರ ಭಾವಿ ಕೆರೆ ಹೊಳೆ ಹಳ್ಳಗಳಲ್ಲಿ ಹಾಕಿ, ಬಿಸಾಡುವ ಶಿವದ್ರೋಹಿಗೆ ಕುಂಭಿನೀ ಪಾತಕ ನಾಯಕನರಕ ತಪ್ಪದಯ್ಯ ಅಖಂಡೇಶ್ವರಾ.

೫. ಕಯ್ಯಲ್ಲಿ ಹಣ್ಣಿದ್ದು, ಮರನನೇರಿ, ಕೊಂಬೆಯ ಬಾಗಿಸಿ, ಕಾಯಿಕೊಯ್ವ ಅರಿಮರುಳನಂತೆ, ಅನಾದಿ ಮೂಲವೊಡೆಯ ತನ್ನ ಕರಸ್ಥಲ ಮನಸ್ಥಲದಲ್ಲಿಪ್ಪುದ ತಾನರಿಯದೆ, ಬೇರೆ ಲಿಂಗವುಂಟು. ಬೇರೆ ಕ್ಷೇತ್ರ ಉಂಟು, ಎಂದು ಹಲವು ಲಿಂಗಕ್ಕೆ ಹರಿದು ಹಂಬಲಿಸುವ ಈ ಸೂಳೆಗೆ ಹುಟ್ಟಿದವರಿಗೆ ಗುರುವಿಲ್ಲವಾಗಿ ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ, ಮುಕ್ತಿ ಎಂಬುದು ಎಂದಿಗೂ ಇಲ್ಲ, ಕಾಣಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.



೬. ಕಟ್ಟಿದ ಲಿಂಗವ ಬಿಟ್ಟು, ಬೆಟ್ಟದ ಲಿಂಗಕ್ಕೆ ಹೋಗಿ, ಹೊಟ್ಟೆಡಿಯಾಗಿ ಬೀಳುವ ಲೊಟ್ಟೆ ಮೂಳನ ಕಂಡಡೆ ಮೆಟ್ಟಿದ್ದ ಎಡ ಪಾದರಕ್ಷೆಯ ತೆಗೆದುಕೊಂಡು, ಲಟ ಲಟನೆ ಹೊಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯನು.

## ತೀರ್ಥಯಾತ್ರೆಗಳು.

೧. ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ, ಗಂಗೆಯ ಮುಳುಗಿದರೆ ಆಗುವದೇನಯ್ಯ? ಚಂದ್ರನು ಗಂಗೆಯ ತಡೆಯಲ್ಲಿದ್ದರೇನು? ಕಲಂಕ ಬಿಡದಾಯಿತಯ್ಯ. ಅದು ಕಾರಣ, ಮನವ ನೋಯಿಸದವನೇ ಘಾತವ ಮಾಡದವನೇ ಪರಮ ಪಾವನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨. ಗಂಗೆಯಲ್ಲಿ ಮುಳುಗಿ ಬಂದವರೆಲ್ಲ ಪಾಪವ ಮಾಡಿ ಸತ್ತರೆ, ಅವರಿಗೆ ಪುಣ್ಯದ ಪದವಿ ಉಂಟಾದರೆ, ಗಂಗೆ ಘನನೆಂಬೆನು. ಅಲ್ಲದೆ, ಮುಳುಗಿ ಪಾಪವ ಮಾಡದೆ ಸತ್ತು ಹೋದರೆ ಪುಣ್ಯದ ಪದವಿ ಅವರಿಗುಂಟಾದರೆ, ಘನನೆಂಬೆನು ಕಪಿಲಸಿದ್ಧ ಮಲ್ಲಿಕಾರ್ಜುನಾ.

೩. ಗಂಗೆಯೋ ಘನ, ಮುಟ್ಟಿದ ಪ್ರಾಣಿಗಳೆಲ್ಲ ದೇವತೆಗಳೆಂದರೆ, ಸ್ವರ್ಗದಲ್ಲಿ ಗಂಗೆಯು ಸಂಚಾರ ಸಾವಿರಾರು ಗಾವುದ. ಅವುಗಳಲ್ಲಿಯು ಪ್ರಾಣಿಗಳು ಅನಂತನಂತ. ಇಷ್ಟು ಜೀವಿಗಳೆಲ್ಲ ದೇವರಾದರೆ, ಸ್ವರ್ಗದಲ್ಲಿ ನಿಯಮಿತ ದೇವತೆಗಳೆಂಬುದು ಅಪ್ರಸಿದ್ಧ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ.

೪. ಶರಣರ ಸದಾಚರಣೆಗೆ ನದಿ ಕೂಪಂಗಳಿಲ್ಲವೋ. ಹಳ್ಳ ಹೊಂಡಂಗಳಿಲ್ಲವೋ. ಕೆರೆ ವರತೆಗಳಿಲ್ಲವೋ. ನಾ ಮಾಡಿದೆನೆಂಬುದು ಮನದ ತಾಮಸ. ಇಂತಪ್ಪ ಮನದ ತಾಮಸ, ಕಪಿಲಸಿದ್ಧ ಮಲ್ಲಿಕಾರ್ಜುನಾ, ಚನ್ನಬಸವಣ್ಣನಿಂದಲೇ ಕಳೆದೆನು, ಕೇಳಾ.

೫. ನೀರ ಕಂಡಲ್ಲಿ ಮುಳುಗುವರಯ್ಯ! ಮರನ ಕಂಡಲ್ಲಿ ಸುತ್ತುವರಯ್ಯ! ಬತ್ತುವ ಜಲವ ಒಣಗುವ ಮರನ ನೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

೬. ನಿಮ್ಮನರಿಯದ ಕಾರಣ, ಕಯ್ಯಲ್ಲಿ ಹುಲ್ಲು. ನಿಮಗೆರಗದ ಕಾರಣ ಕೊರಳಲ್ಲಿ ನೇಣು. ಹಿಂಡಲೇಕೋ? ತೊಳೆಯಲೇಕೋ? ಮುಳುಗಿ ಮಾಗ ಹಿಡಿಯಲೇಕೋ? ಕೂಡಲಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?

೭. ಅಷ್ಟು ಷಷ್ಟಿಕೋಟಿ ತೀರ್ಥವ ಮಿಂದರಿಲ್ಲ, ಕಾಣಿರಣ್ಣಾ. ಲಕ್ಷಲಕ್ಷ ಕೋಟಿ ಜಪವನೆಣಿಸಿ, ಧ್ಯಾನ, ಮೌನ, ಹೋಮ, ನೇಮ, ಅನುಷ್ಠಾನವ ಮಾಡಿದರಿಲ್ಲ, ಕಾಣಿರಣ್ಣಾ. ನೂರಿಪ್ಪತ್ತು ವೇಳೆ ಭೂಪ್ರದಕ್ಷಿಣೆಯ ಮಾಡಿದರಿಲ್ಲ, ಕಾಣಿರಣ್ಣಾ. ಕಾಶೀ ಕೇದಾರ, ಶ್ರೀಶೈಲ ಶಿವಗಂಗೆಗೆ ಹೋದರಿಲ್ಲ, ಕಾಣಿರಣ್ಣಾ. ಇವು ಎಲ್ಲ ಬರಿಯ ಭ್ರಾಂತಿ, ಕೇಳಿರಣ್ಣಾ. ಇಷ್ಟನಾವು ಹೇಳಿಹೆ, ಕೇಳಿರಣ್ಣಾ. ಶ್ರೀಗುರು ಕರುಣದಿಂದೆ, ಬಿಜಯಂಗೈಸಿ ಕೊಟ್ಟ ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯಾ. ಹಲವು ಕಡೆಗೆ ಹೋಹ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು, ಆ ಲಿಂಗದ ಗೊತ್ತಿನಲ್ಲಿ ಕಟ್ಟಿ, ನೆರೆಯಬಲ್ಲರೆ ಅಲ್ಲಿಪ್ಪನು ಶಂಭು ಪರಮೇಶ್ವರನು. ಇದೇ ನಿಶ್ಚಯ, ಉಳಿದುದೆಲ್ಲ ಹುಸಿ, ಕಂಡೆಯಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೮. ಜಂಬೂದ್ವೀಪವನೆಲ್ಲ ತಿರುಗಿದಡೇನು? ಜಂಬುಕ ಶಂಭು ಧ್ಯಾನದಲ್ಲಿ ಸೈವೆರಗಪ್ಪುದೇ? ಕುಂಭಿನಿಯ ತಿರುಗಿ, ಕೋಟಿ ತೀರ್ಥವ ಮಿಂದಡೇನು? ಶಂಭು, ನಿಮ್ಮಲ್ಲಿ ಸ್ವಯವಾಗದವನು ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ, ರಾಮನಾಥಾ.

೯. ಸುತ್ತಿ ಸುತ್ತಿ ಬಂದಡಿಲ್ಲ. ಲಕ್ಷ ಗಂಗೆಯ ಮಿಂದಡಿಲ್ಲ. ತುಟ್ಟತುದಿಯ ಮೇರುಗಿರಿಯ ಮುಟ್ಟಿ ಕೂಗಿದಡಿಲ್ಲ. ನಿತ್ಯ ನೇಮ



ದಿಂದ ತನು ಮುಟ್ಟಿ ಕೊಂಡಡಿಲ್ಲ. ನಿಚ್ಚಕ್ಕೆ ಮನವನಂದಂದಿಂಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ ಧರಿಸಬಲ್ಲಡೆ, ಬಚ್ಚ ಬರಿಯ ಬೆಳಗು ಗುಹೇಶ್ವರ ಲಿಂಗವು.

೧೦. ಕಾಶೀ, ರಾಮೇಶ್ವರ, ಕೇದಾರ, ಗೋಕರ್ಣ, ಶ್ರೀಶೈಲ, ಹಂಪೆ, ಅಮುತ ಗುಂತ, ಕಲ್ಯಾಣ, ಸೊನ್ನಲಾಪುರ, ಗಯಾ, ಪ್ರಯಾಗ, ಕೊಲ್ಲಿಪಾಕಿ, ಗಂಗಾಕ್ಷೇತ್ರ, ಶಿವಗಂಗೆ, ನಂಜನಗೂಡು, ಉಳುವೆ, ಶಂಭುಲಿಂಗ ಪರ್ವತ, ಕುಂಭ ಕೋಣ, ಕಂಚಿ, ಕಾಳಹಸ್ತಿ, ನವನಂದಿಮಂಡಲ, ಕುಮಾರ ಪರ್ವತ ಮೊದಲಾದ ಕ್ಷೇತ್ರಗಳಲ್ಲಿ, ಕುಂತಳ ದೇಶ ಮೊದಲಾದ ಐವತ್ತಾರು ದೇಶಗಳಲಿ ಭ್ರಾಂತಿಯಿಂದ ಕಲ್ಲು ಮುಳ್ಳು ಮಣ್ಣಿನಲ್ಲಿ ತಿರುತಿರುಗಿ ಸದ್ಭಕ್ತಿಯ ಮಾಡದೆ ಕೆಟ್ಟಿತಯ್ಯಾ, ಮದಿಂದ್ರಿಯ. ಇಂತು ಕೆಡೆಗುಡದೆ ನಿಮ್ಮ ಸದ್ಭಕ್ತ ಹರಳಯ್ಯಗಳ ಮನೆಯ ಬಾಗಿಲವ ಕಾಯ್ವಂತೆ ಮಾಡಯ್ಯ ಶ್ರೀಗುರುಲಿಂಗಜಂಗವೇ.

೧೧. ಕಾಶೀಯಾತ್ರೆಗೆ ಹೋದೆನೆಂಬ ವೇಶಿಗಳ ಮಾತ ಕೇಳಲಾಗದು. ಕೇದಾರಕ್ಕೆ ಹೋದೆನೆಂಬ ಹೇಸಿ ಹೀನರ ನುಡಿಯ ಲಾಲಿಸಲಾಗದು. ಸೇತು ಬಂಧ ರಾಮೇಶ್ವರಕ್ಕೆ ಹೋದೆನೆಂಬ ಸರ್ವಹೀನರ ಮುಖವ ನೋಡಲಾಗದು. ಪರ್ವತಕ್ಕೆ ಹೋದೆನೆಂಬ ಪಂಚಮಹಾ ಪಾತಕರ ಮುಖವ ನೋಡಲಾಗದು. ಅದೆಂತೆಂದೊಡೆ, ಕಾಯವೇ ಕಾಶಿ, ಒಡಲೇ ಕೇದಾರ, ಮಾಡಿ ನೀಡುವ ಹಸ್ತವೇ ಸೇತು ಬಂಧ ರಾಮೇಶ್ವರ, ಮಹಾಲಿಂಗವ ಹೊತ್ತಿರುವ ಶಿರಸ್ಸೇ ಶ್ರೀಶೈಲ ಪರ್ವತ ನೋಡಾ. ಇಂತಿವನರಿಯದೆ ಪರ್ವತಕ್ಕೆ ಹೋಗಿ ಪಾತಾಳಗಂಗೆಯಲ್ಲಿ ಮುಳು ಮುಳುಗಿ, ತಲೆಯ ಬೋಳಿಸಿಕೊಂಡು ಗಂಗೆಯೊಳು ಕೋಣನಹಾಗೆ ವೈಗೆಟ್ಟು ಫಕ್ಕನೇ ಮುಳುಗಿ ಅಲ್ಲಿಂದ ಬಂದು ಅನ್ನ ವಸ್ತ್ರ ಕುಸುಮವಂ ಕೊಟ್ಟು ಪಾಪ ಹೋಯಿತ್ತೆಂದು ಅಲ್ಲಿಂದ ಬಂದು ಲಿಂಗವಡಿಗಡಿಗೆ ಹೊಯ್ದು, ಜಾರದ ಪಾಪವ ತಾವಾಗ ಬರಿಸಿಕೊಂಡು, ತಗರ ಜನ್ಮದಲ್ಲಿ ಹುಟ್ಟುವರಯ್ಯ. ಕೋಲು

ಬುಟ್ಟಿಯಂ ಕೊಟ್ಟು, ಅಟ್ಟಿಸಿ ಬಿಟ್ಟಬಳಿಕ, ಅಲ್ಲಿಂದ ಬಂದವರಿಗೆ ಇಲ್ಲಿದ್ದವರು ಹೋಗಿ ಇದಿರುಗೊಂಡು, ಕರೆತರುವವಕ್ಕೆ ಹೋಗುವ ಮೂಳ ಹೊಲೆಯರಿರಾ. ನೀವು ಕೇಳಿರೋ, ಅದೆಂತೆಂದೊಡೆ, ಶ್ರೀಮಹಾ ಪರ್ವತಕ್ಕೆ ಹೋದವರು ತಿರುಗಿ ಬಪ್ಪರೇ? ಮೇರು ಪರ್ವತಕ್ಕೆ ಹೋದವರು ಮರಳಿ ಬಪ್ಪರೇ? ಛೀ ಛೀ ಮೂಳ ದಿಂಡೆಯರಿರಾ, ನೀವು ನೀಳ ಹೊಲೆಯರೆಂದಾತ ನಮ್ಮ ದಿಟ್ಟ ಪೀರಾದಿ ವೀರ ಅಂಬಿಗರ ಚೌಡಯ್ಯ.

೧೨. ಭಕ್ತರ ಮನೆಯ ಅಂಗಣ ವಾರಣಾಸಿ ಎಂಬುದು ಹುಸಿಯೇ? ಭಕ್ತರ ಮನೆಯ ಅಂಗಣವಲ್ಲಿ ಅಷ್ಟಷಷ್ಟಿ ತೀರ್ಥಂಗಳು ನೆಲಸಿಪ್ಪವಾಗಿ. ಸುತ್ತಿದಡೆ ಶ್ರೀಶೈಲ. ಕೆಲಬಲದಲ್ಲಿ ಕೇದಾರ. ಅಲ್ಲಿಂದ ಹೊರಗೆ ಶ್ರೀವಾರಣಾಸಿ. ವಿರಕ್ತಿ ಬೀಡಾಗಿ, ಭಕ್ತಿ ಮೊಳೆಯಾಗಿ, ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಭಕ್ತರ ಮನೆಯ ಅಂಗಣ ವಾರಣಾಸಿಗಿಂದಲಧಿಕ.

೧೩. ಅಡಿಗಡಿಗೆ ಸ್ನಾನ ನಿಧಿ. ಅಡಿಗಡಿಗೆ ದಿವ್ಯ ಕ್ಷೇತ್ರ. ಅಡಿಗಡಿಗೆ ನಿಧಿ ನಿಧಾನ ನೋಡಯ್ಯಾ. ಸುತ್ತಿ ಬರೆ ವಾರಣಾಸಿ. ಆತನಿರುವೇ ಅವಿಮುಕ್ತ ಕ್ಷೇತ್ರ ಕೂಡಲಸಂಗನ ಶರಣ ಸ್ವತಂತ್ರನಾಗಿ.

೧೪. ನಿಷ್ಕಲ ಶರಣನ ಅಂಗಣದಲ್ಲಿ ಅಷ್ಟಷಷ್ಟಿ ತೀರ್ಥಂಗಳು ನೆಲಸಿರ್ಪವಯ್ಯಾ! ನೀನು ಇನಿಸುವೆಂಸಿ ಒಲಿದಲ್ಲಿ ನೆಲಸಿರ್ಪವಯ್ಯಾ, ಕಪಿಲ ಸಿದ್ಧ ಮಲ್ಲಿನಾಥಯ್ಯಾ.

೧೫. ವಾರಣಾಸಿ ಅವಿಮುಕ್ತ ಇಲ್ಲಿ ಇದ್ದಾನೆ. ಹಿಮದ ಕೇದಾರ ವಿರೂಪಾಕ್ಷ ಇಲ್ಲಿ ಇದ್ದಾನೆ. ಗೋಕರ್ಣ, ಸೇತುರಾಮೇಶ್ವರ ಇಲ್ಲಿ ಇದ್ದಾನೆ. ಶ್ರೀಶೈಲ ಮಲ್ಲಿನಾಥ ಇಲ್ಲಿ ಇದ್ದಾನೆ. ಸಕಲ ಲೋಕ ಪುಣ್ಯ ಕ್ಷೇತ್ರ ಇಲ್ಲಿಯೇ ಇದ್ದಿವೆ. ಸಕಳ ಲಿಂಗ ಉಳಿಯುಮೇಶ್ವರನಿಲ್ಲಿಯೇ ಇದ್ದಾನೆ.

# ಲಿಂಗ ಸ್ವರೂಪು

## ಭಾಗ ೨

# ಲಿಂಗ ಸ್ವರೂಪು.

## ಲಿಂಗಧಾರಣ.

೧. ಬಯಲ ಮೂರ್ತಿಯ ಮಾಡಿ, ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು. ಬಯಲ ಮೂರ್ತಿಯ ಅಮೂರ್ತಿಯ ಮಾಡಿ, ಎನ್ನ ಪ್ರಾಣದೊಳಗೆ ಇರಿಸಿದನಯ್ಯ ಶ್ರೀಗುರು. ಬಯಲು ಬಯಲನೇ ಬಯಸಿ, ಬಯಲೆಂದೆನಿಸಿ, ಎನ್ನ ಭಾವದಲಿರಿಸಿದನಯ್ಯ ಶ್ರೀಗುರು. ಇದು ಕಾರಣ ಎನ್ನ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ, ನಾನು ಅಂಗ ಲಿಂಗ ಸಂಬಂಧಿಯಾದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೨. ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ, ಎಂಬ ದೀಕ್ಷಾತ್ರಯಂಗಳಿಂದ ತನುತ್ರಯಂಗಳ ಕಳೆದು ಲಿಂಗತ್ರಯಂಗಳ ಸಂಬಂಧಿಸಿದನೆಂತೆಂದೊಡೆ, ವೇಧಾದೀಕ್ಷೆ ಎಂದು ಶ್ರೀಗುರು ತನ್ನ ಹಸ್ತ ಶಿಷ್ಯ ಮಸ್ತಕದಲ್ಲಿ ಸಂಯೋಗ ಮಾಡಿದನು. ಮಂತ್ರದೀಕ್ಷೆ ಎಂದು ಶ್ರೀಗುರು ಪ್ರಣವ ಪಂಚಾಕ್ಷರಿಯ ಮಂತ್ರವ ಕರ್ಣದಲ್ಲಿ ಉಪದೇಶಿಸಿದನು. ಕ್ರಿಯಾದೀಕ್ಷೆ ಎಂದು ಆ ಮಂತ್ರ ಸ್ವರೂಪವನೇ ಇಷ್ಟಲಿಂಗ ಸ್ವರೂಪವನೆ ಮಾಡಿ ಕರಸ್ಥಲದಲ್ಲಿ ಸಂಬಂಧಿಸಿದನು. ಇದು ಕಾರಣ ವೇಧಾದೀಕ್ಷೆಯಿಂದ ಕಾರಣ ತನುವಿನ ಪೂರ್ವಾಶ್ರಯವ ಕಳೆದು ಭಾವಲಿಂಗ ಸಂಬಂಧವಾಯಿತು. ಮಂತ್ರದೀಕ್ಷೆಯಿಂದ ಸೂಕ್ಷ್ಮ ತನುವಿನ ಪೂರ್ವಾಶ್ರಯವಳಿದು ಪ್ರಾಣಲಿಂಗ ಸಂಬಂಧವಾಯಿತು. ಕ್ರಿಯಾದೀಕ್ಷೆಯಿಂದ ಸ್ಥೂಲ ತನುವಿನ ಪೂರ್ವಾಶ್ರಯವಳಿದು ಇಷ್ಟಲಿಂಗ

ಸಂಬಂಧವಾಯಿತು. ಅಂಗತ್ರಯದಲ್ಲಿ ಲಿಂಗತ್ರಯ ಧರಿಸಿದೆನಯ್ಯ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೩. ಅಯ್ಯಾ ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿನ್ಬೆ
ಳಗೇ ಹಸ್ತ ಮಸ್ತಕ ಸಂಯೋಗದಿಂದ ಒಂದುಗೂಡಿ ಮಹಾ ಬೆಳಗ
ಮಾಡಿದಿರಲ್ಲಾ. ಅಯ್ಯಾ, ಎನ್ನ ಮಸ್ತಕದೊಳಗೊಂದು ಗೂಡಿದ
ಮಹಾ ಬೆಳಗ ತಂದು ಭಾವದೊಳಗೆ ಇಂಬಿಟ್ಟಿರಲ್ಲಾ. ಅಯ್ಯಾ,
ಭಾವದೊಳಗೆ ಕೂಡಿದ ಮಹಾ ಬೆಳಗ ತಂದು ಮನಸ್ಸಿನೊಳಗೆ
ಇಂಬಿಟ್ಟಿರಲ್ಲಾ. ಅಯ್ಯಾ, ಎನ್ನ ಮನಸ್ಸಿನೊಳಗೆ ಕೂಡಿದ ಮಹಾ
ಬೆಳಗ ತಂದು ಕಂಗಳೊಳಗಿಂಬಿಟ್ಟಿರಲ್ಲಾ. ಅಯ್ಯಾ ಎನ್ನ ಕಂಗ
ಳೊಳಗೆ ಕೂಡಿದ ಮಹಾ ಬೆಳಗ ತಂದು ಕರಸ್ಥಲದೊಳಗೆ ಇಂಬಿ
ಟ್ಟಿರಲ್ಲಾ. ಅಯ್ಯಾ ಎನ್ನ ಕರಸ್ಥಲದಿ ಥಳಥಳಸಿ ಬೆಳಗಿ ಹೊಳೆವು
ತ್ತಿಪ್ಪ ಅಖಂಡ ತೇಜವನೇ ಇಷ್ಟಲಿಂಗವೆಂಬ ದೃಷ್ಟವ ತೋರಿ, ನಿಷ್ಟೆ
ಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ. ಅಯ್ಯಾ, ಎನ್ನ ಶ್ರೋತ್ರದಲ್ಲಿ
ಸೃಜಿಸಿದ ಮಂತ್ರದೊಳಗೆ ನೀವು ನಿಂದು ಮಹತ್ವವ ಹುದುಗಿದಿರಲ್ಲಾ.
ಅಯ್ಯಾ ಎನ್ನ ಆರಾಧ್ಯ ಕೂಡಲಸಂಗಮದೇವ ಎನ್ನೊಳಗೆ ನಿವಿತ್ರ
ರವ ಈ ಪರಿಯಲ್ಲಿ ಕಾಣಿಸುತಿರ್ದಿರಲ್ಲಾ.

೪. ಭವ ಬಂಧನದ ಕುಣಿಕೆಯ ಕಳೆಯಲರಿಯದ ಮಲಿನ
ಜೀವಿಗಳ ಮಲಿನವ ತೊಳೆವ ಶ್ರೀಗುರುವಿನ ಉಪದೇಶದ ಪರಿ
ಎಂತೆಂದೊಡೆ, ಸ್ಥೂಲ ಪಂಚಭೂತಕಾಯದ ಪಂಚತತ್ವಗಳ ವಿವರಿಸಿ
ಬೋಧಿಸಿ ಕಳೆದು, ಸೂಕ್ಷ್ಮ ಪಂಚಭೂತ ಕಾಯದ ತನ್ಮಾತ್ರ ಗುಣಂಗಳ
ವಿವರದ ಭೇದವ ಭೇದಿಸಿ ತೋರಿ ಕಳೆದು, ಕಾರಣ ಪಂಚಭೂತ
ಕಾಯದ ಕರಣ ವೃತ್ತಿಗಳ ಮಹಾ ವಿಚಾರದಿಂತಿಳಿಸಿ ವಿವರಿಸಿ
ಕಳೆದು, ಸ್ಥೂಲ ಪಂಚಭೂತ ಕಾಯದಲ್ಲಿ ಇಷ್ಟಲಿಂಗವ ಪ್ರತಿ
ಷ್ಠೆಯ ಮಾಡಿ ಸದಾಚಾರ ಕುಳಸ್ಥಲವ ನೆಲೆಗೊಳಿಸಿ, ಸೂಕ್ಷ್ಮ ಪಂಚ
ಭೂತ ಕಾಯದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯ ಮಾಡಿ ಮಹಾ ವಿಚಾ



ರದ ಅನುಭಾವದ ನೆಲೆಗೊಳಿಸಿ, ಕಾರಣ ಪಂಚಭೂತ ಕಾಯದಲ್ಲಿ
ತೃಪ್ತಿಲಿಂಗವ ಪ್ರತಿಷ್ಠೆಯ ಮಾಡಿ ಪರಮಾನಂದ ಸುಜ್ಞಾನವ ನೆಲೆ
ಗೊಳಿಸಿ, ಇಂತೀ, ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯಂಗ
ಳನು ಏಕೀ ಭವಿಸಿ ತೋರಿ, ಪೂರ್ವ ಜನ್ಮದ ನಿವೃತ್ತಿಯ ಮಾಡಿ
ಲಿಂಗ ಜನ್ಮದ ಪ್ರತಿಷ್ಠೆಯಂ ಮಾಡಿ ಎನ್ನ ಕೃತಾರ್ಥನ ಮಾಡಿದ
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ
ಕೂಡಲಸಂಗಮದೇವಾ.

೫. ಗುರುವು ಮನದಲ್ಲಿ ಮಂತ್ರವನ್ನು ತನುವಿನಲ್ಲಿ ಲಿಂಗವನ್ನು
ಸ್ಥಾಪಿಸಿ ಕರುಣಾರಸವ ನೆರೆಯಲು, ಆ ಮಂತ್ರವು ಜಿಹ್ವೆಯಲ್ಲಂಕು
ರಿಸಿ ಶರೀರವ ನಾವರಿಸಲು, ಆ ಭೂತತತ್ವವಳಿದು ಮಂತ್ರವೇ ಶರೀರ
ವಾಯಿತ್ತು. ಲಿಂಗವು ನೇತ್ರದಲ್ಲಂಕುರಿಸಿ ಮನವನಾವರಿಸಿ, ಮನದ
ಹಂಕಾರವ ತೊಲಗಿಸಿ, ಆ ಮನವೇ ಲಿಂಗವಾಯಿತ್ತು. ಮಂತ್ರವೇ
ತನುವಾಗಿ, ಮನವೇ ಲಿಂಗವಾದಲ್ಲಿ ನಾಮ ಮಧ್ಯದಲ್ಲಿ ಲಿಂಗ
ವಿರ್ಪುದು ಸಹಜವಾಯಿತ್ತು. ತನುಮನೋ ಮಧ್ಯದಲ್ಲಿರ್ಪ ಪ್ರಾಣ
ಲಿಂಗವು ಮಂತ್ರದಲ್ಲಿ ಲೀನವಾಯಿತ್ತು. ಮಂತ್ರದ ಲಿಂಗದಲ್ಲಿ ಸುಷುಪ್ತಿ
ನೆಲೆಗೊಂಡು, ಪ್ರಪಂಚವೆಲ್ಲ ಸ್ವಪ್ನ ಸ್ವರೂಪ ವಾಗಿ, ಮಂತ್ರದಲ್ಲಿ
ಜ್ಞಾನವು ಲಿಂಗದಲ್ಲಿ ಆನಂದವು ಈ ಎರಡರ ಸಂಗವೇ ನಿಜವು
ನಿಜವೇ ತಾನಾಗಿ ತನ್ನಿಂದನ್ಯವೇನೂ ಇಲ್ಲದುದೇ ಕೇವಲ ಕೈವಲ್ಯ
ವೆನಿಸುವದು ಕಾಣಾ ಮಹಾ ಘನ ದೊಡ್ಡ ದೇಶಿ ಕಾರ್ಯ ಗುರು
ಪ್ರಭುವೇ.

೬. ಶ್ರೀಗುರು ಶಿಷ್ಯನ ಮಸ್ತಕದಲ್ಲಿ ತನ್ನ ಹಸ್ತಕಮಲವನಿರಿಸಿ
ಈ ಪ್ರಕಾರವಪ್ಪ ಲಿಂಗಕಳೆಯ ಪ್ರತಿಷ್ಠೆಯ ಮಾಡಿದನಾಗಿ ಗುರುವಿನ
ಹಸ್ತದಿಂದ ಆ ಕಳೆ ಹುಟ್ಟಿ, ಆದೇ ಕರಸ್ಥಲಕ್ಕೆ ಇಷ್ಟ ಲಿಂಗವಾಯಿತ್ತು.
ಮನಸ್ಥಲಕ್ಕೆ ಪ್ರಾಣಲಿಂಗವಾಯಿತ್ತು. ಭಾವ ಭರಿತವಾಗಿ ಭಾವಲಿಂಗ
ವಾಯಿತ್ತು. ಇಷ್ಟ ಪ್ರಾಣ ಭಾವವೆಂಬ ಲಿಂಗವು ತಾನೇ ಆಚಾರಲಿಂಗ
ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ

ಲಿಂಗ ಪಂಚಕವು ಆಚಾರ ಲಿಂಗದಲ್ಲಿ ಗರ್ಭೀಕೃತವಾಗಿ,
ಇಂತೀ ಲಿಂಗ ಪಂಚಕವು ಆಚಾರ ಲಿಂಗದಲ್ಲಿ ಗರ್ಭೀಕೃತವಾಗಿ ಒಂದೇ ಪರಿಯಾಯವಾಗಿ
ಆಚಾರಲಿಂಗವೆಂದು ಕ್ರಿಯಾಲಿಂಗವೆಂದು ಒಂದೇ ಪರಿಯಾಯವಾಗಿ,
ಕ್ರಿಯಾಲಿಂಗವೆಂದು ಇಷ್ಟಲಿಂಗವೆಂದು ಒಂದೇ ಪರಿಯಾಯವಾಗಿ, ಈ
ಇಂತಿ ವೆಲ್ಲವನೊಳಕೊಂಡು ನಿನ್ನ ಕರಸ್ಥಲಕ್ಕೆ ಬಂದಿತ್ತು ವಸ್ತು. ಈ
ಕರಸ್ಥಲದ ಮಹಾಘನದ ನಿಲವನು ಹೀಗೆಂದರಿವುದೆಂದೆನಯ್ಯ ಮಹಾ
ಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.
ಶ್ರೀಗುರು ಶಿವನ ಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿ

೭. ಶ್ರೀಗುರು ಶಿವನ ಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿ
ಸುವಲ್ಲಿ ಪರಮೇಶ್ವರನ ಪಂಚಮುಖವನೇ ಪಂಚಕಲಶವಾಗಿ ಮೂರ್ತಿ
ಗೊಳಿಸಿ ಗಣಂಗಳ ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟು
ಈ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ ಲಲಾಟದಲ್ಲಿ
ವಿಭೂತಿಯ ಪಟ್ಟವಂ ಕಟ್ಟಿ ಹಸ್ತದಲ್ಲಿ ಕಂಕಣವ ಕಟ್ಟಿ, ಪಾದೋ
ದಕ ಪ್ರಸಾದವ ನಿತ್ತು ಎಂದೆಂದಿಗೂ ಸತಿಪತಿ ಭಾವ ತಪ್ಪದೆ ಇರಲಿ
ಎಂದು ನಿರೂಪಿಸಿದನಯ್ಯ ಶ್ರೀಗುರು. ಆ ನಿರೂಪವ ಮಹಾಪ್ರಸಾದ
ವೆಂದು ಕೈಕೊಂಡೆನಯ್ಯ. ಇದು ಕಾರಣ ಪತಿಯಲ್ಲದೆ ಅನ್ಯವನರಿಯೆ
ನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ,

---



## ಸದಾಚಾರಿಯೇ ದೀಕ್ಷೆಗೆ ಯೋಗ್ಯನು.

ಎಲ್ಲರ ದೀಕ್ಷೆಯ ಪರಿಯಂತಲ್ಲ ಎಮ್ಮಯ್ಯನ ದೀಕ್ಷೆ. ನಡೆ
೧. ಎಲ್ಲರ ದೀಕ್ಷೆಯ ಪರಿಯಂತಲ್ಲ ಎಮ್ಮಯ್ಯನ ದೀಕ್ಷೆ. ಪರಮಾರ್ಥಕ್ಕೆ
ನುಡಿ ಶುದ್ಧವಾದವರಿಗಲ್ಲದೆ ಅನುಗ್ರಹಿಸ ನೋಡಾ. ಭವಭಾರಿಗಳ
ಲ್ಲದ ಜಡ ನರರನೊಲ್ಲನೊಲ್ಲ. ದೀಕ್ಷೆಯ ಕೊಡನು ಭವಭಾರಿಗಳ ಜ್ಞಾನ
ಮುಖದತ್ತ ನೋಡನಯ್ಯ ನಮ್ಮ ಕೂಡಲಸಂಗಯ್ಯನೆಂಬ ಜ್ಞಾನ
ಗುರು.

ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ, ಕೊಳೆವು
೨. ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ, ಶಿವದೀಕ್ಷೆಯ
ದಲ್ಲದೆ, ಬಲುಹಾಗಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆಯ
ಕೊಟ್ಟರೆ ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯ
ಮಾನಹೀನನ ಮೀಸಲ ಕಾಯ್ದಿರಿಸಿದಂತೆ.

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜ
೩. ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜ
ನೆಯಹುದಲ್ಲದೆ, ಅದರ ಗಂಜಳ ಬಿಡದಣ್ಣಾ. ಮಣ್ಣ ಪುತ್ಥಳಿಯ
ಮಾಣದೆ ಜಲದಲ್ಲಿ ತೊಳೆದರೆ, ನಿಚ್ಚ ನಿಚ್ಚ ಕೆಸರಹುದಲ್ಲದೆ, ಅದರ
ಚಿತ್ತಗ ಬಿಡದಣ್ಣಾ. ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ,
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ?

ಕಬ್ಬುನದ ಕೋಡಗವ ಪರುಷ ಮುಟ್ಟಲು, ಹೊನ್ನಾದ
೪. ಕಬ್ಬುನದ ಕೋಡಗವ ಪರುಷ ಮುಟ್ಟಲು, ಹೊನ್ನಾದ
ರೇನು, ಮತ್ತೇನಾದರೇನು, ತನ್ನ ಮುನ್ನಿನ ರೂಪ ಬಿಡದನ್ನಕ್ಕರ
ಕೂಡಲಸಂಗಮದೇವಯ್ಯ, ನಿಮ್ಮ ನಂಬಿಯೂ, ನಂಬದ ಡಂಭಕರಿ
ಗಯ್ಯ?

೫. ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು
ಹಸಿವು ಹೋಗಬಹುದೇ? ಅಂಗದ ಮೇಲೆ ಲಿಂಗಸ್ವಾಯತವಾದ
ರೇನು? ಭಕ್ತನಾಗಬಲ್ಲನೇ? ಇಟ್ಟಿಕಲ್ಲು ಮೆಳೆಯ ಮೇಲೆ ಸಿಕ್ಕಿದರೆ,
ಆ ಕಲ್ಲು ಲಿಂಗವೇ ಆ ಮೆಳೆ ಭಕ್ತನೇ ಇಟ್ಟಾತ ಗುರುವೇ? ಇಂತಪ್ಪ
ವರ ಕಂಡರೆ, ನಾನು ನಾಚುವೆನಯ್ಯ ಗುಹೇಶ್ವರಾ.

## ಲಿಂಗದ ಸ್ವರೂಪು.

೧. ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ನಿರ ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ಪರಮಜ್ಞಾನ. ಶಿಶಯಾನಂದ ಸುಖವು. ಲಿಂಗವೆಂಬುದು ಪಡಧ್ವಮಯ ಜಗಜ್ಜನ್ಮಭೂಮಿ. ಲಿಂಗವೆಂಬುದು ಲಿಂಗವೆಂಬುದು ಪಡಧ್ವಮಯ ಜಗಜ್ಜನ್ಮಭೂಮಿ. ಲಿಂಗವೆಂಬುದು ತಾ ಹರಿಬ್ರಹ್ಮರ ನಡು ಅಖಂಡಿತವೇದ, ಪಂಚಸಂಜ್ಞೆ. ಲಿಂಗವೆಂಬುದು ತಾ ಹರಿಬ್ರಹ್ಮರ ನಡು ಅಖಂಡಿತವೇದ, ಪಂಚಸಂಜ್ಞೆ. ಎಂದಿದು ಲಿಂಗದಮರ್ಮ ಉರಿಲಿಂಗ ಮನೆಗಳ ಜ್ಯೋತಿರ್ಲಿಂಗ. ಎಂದಿದು ಲಿಂಗದಮರ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ, ಲಿಂಗದೊಳಿದ ತಿಳಿಯ ಬಲ್ಲವನೇ ಬಲ್ಲವನು.

೨. ಲಿಂಗವೆಂಬುದು ಸರ್ವಕಾರಣ ನಿರ್ಮಲ. ಲಿಂಗವೆಂಬುದು ಲಿಂಗವೆಂಬುದು ಸರ್ವಲೋಕೋತ್ಪ ಸಚ್ಚಿದಾನಂದ ನಿತ್ಯಪರಿಪೂರ್ಣ. ಲಿಂಗವೆಂಬುದು ಸರ್ವ ತತ್ವಪೂರಣ ನಿಜಚೈತನ್ಯವು. ತ್ತಿಗೆ ಕಾರಣ. ಲಿಂಗವೆಂಬುದು ಸರ್ವ ತತ್ವಪೂರಣ ನಿಜಚೈತನ್ಯವು. ಲಿಂಗವೆಂ ಲಿಂಗವೆಂಬುದು ಜನ್ಮವಾರುಧಿಯ ದಾಂಟಿಸುವ ಛತ್ರವು. ಲಿಂಗವೆಂ ಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯ ಲಿಂಗವು. ಇಂತೀ ಲಿಂಗದ ಮರ್ಮವನರಿದವನೇ ಅರಿದವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---



## ಇಷ್ಟಲಿಂಗದ ಸ್ವರೂಪು.

೧. ಜಗವನೊಳಕೊಂಡ ಲಿಂಗವು ಸೊಗಸಿದ್ದೆನ್ನ ಕರಸ್ಥಲಕ್ಕೆ ಬಂದಿರಲು ಕಂಡು ಹಗರಣವಾಯಿತ್ತೆನಗೆ. ಆಹಾ ಎನ್ನ ಪುಣ್ಯವೇ! ಅಹಾ ಎನ್ನ ಭಾಗ್ಯವೇ! ಅಹಾ ಅಖಂಡೇಶ್ವರಾ, ನಿಮ್ಮ ಘನವ ಕಂಡು ಎನ್ನ ಮನಕ್ಕೆ ಮಂಗಳವಾಯಿತ್ತು ನೋಡಾ.

೨. ಅಣುವಿಗೆ ಅಣುವು, ಮಹತ್ತಿಗೆ ಮಹತ್ತು ಎನಿಸುವ ಲಿಂಗ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಉಪಮಾತೀತ ವಾಙ್ಮನಕ್ಕ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಶೃತಿತತಿ ಗೋಚರನೆನಿಸುವ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಶೃತಿತತಿ ಗೋಚರನೆನಿಸುವ ದೇವನ ಕಂಡೆನಯ್ಯ ನಾ ನನ್ನ ಕರ ಶಿರವನೇಲೆ ದಶಾಂಗುಲನೆನಿಸುವ ದೇವನ ಕಂಡೆನಯ್ಯ ನಾ ನನ್ನ ಕರ ಸ್ಥಲದಲ್ಲಿ. ಭಾವಭರಿತ ಜ್ಞಾನಗಮ್ಯನೆನಿಸುವ ದೇವನ ಕಂಡೆನಯ್ಯ ಸ್ಥಲದಲ್ಲಿ. ಅಖಂಡೇಶ್ವರನೆಂಬ ಅನಾದಿ ಪರಶಿವನ ಕಂಡೆ ಎನ್ನ ಕರಸ್ಥಲದಲ್ಲಿ. ಅಖಂಡೇಶ್ವರನೆಂಬ ಅನಾದಿ ಪರಶಿವನ ಕಂಡೆ ನಯ್ಯ ಎನ್ನಕರಸ್ಥಲದಲ್ಲಿ.

೩. ವಟಬೀಜ ವಟವೃಕ್ಷ ಕೋಟಿಯ ನುಂಗಿಪ್ಪಂತೆ, ಸಟಿ ಯಿಂದಾದ ಅಜಾಂಡ ಕೋಟಿಗಳ ನುಂಗಿಪ್ಪ ಲಿಂಗವೇ. ದಿಟಪುಟ ಯಿಂದಾದ ಅಜಾಂಡ ಕೋಟಿಗಳ ನುಂಗಿಪ್ಪ ಲಿಂಗವೇ. ಮರುಭಾವು, ಕಣ್ಣು ಮನ ಕರಸ್ಥಲಕ್ಕೆ ಬಂದು ಪ್ರಕಟವಾದೆ. ಮರುಭಾವು ಲಿಂಗವೇ. ನ ಚ ರೇಣಾ ನ ಚಕ್ಷುವೆನಿಸುವ ಲಿಂಗವೇ, ಮರುಭಾವು ಲಿಂಗವೇ. ನ ಚ ರೇಣಾ ನ ಚಕ್ಷುವೆನಿಸುವ ಲಿಂಗವೇ, ಉತ್ಪತ್ತಿಸ್ಥಿತಿ ಲಯಕ್ಕೆ ಹೊರಗಾದೆನಯ್ಯ, ನಿನ್ನ ಮುಟ್ಟಿದ ಕಾರಣ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

೪. ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ಎಂದೆನಿಸುವ ಲಿಂಗವು, ಅತ್ಯತಿಷ್ಠದ್ದಶಾಂಗುಲ ಎಂದೆನಿಸುವ ಲಿಂಗವು, ಎಂದೆನಿಸುವ ಲಿಂಗವು, ಅತ್ಯತಿಷ್ಠದ್ದಶಾಂಗುಲ ಎಂದೆನಿಸುವ ಲಿಂಗವು, ಅಣೋರಣೀಯಾನ್ ಚಕಿತಮಭಿಧತ್ತೇ ಎಂದೆನಿಸುವ ಲಿಂಗವು, ಅಯಂ ಮೇ ಭಗ ಮಹತೋಮಹೀಯಾನ್ ಎಂದೆನಿಸುವ ಲಿಂಗವು, ಅಯಂ ಮೇ ಭಗ ಮಹತೋಮಹೀಯಾನ್ ಎಂದೆನಿಸುವ ಲಿಂಗವು, ಏಕ ವಾನ್ ಅಯಂ ಮೇ ಭಗವತ್ತರಂ ಎಂದೆನಿಸುವ ಲಿಂಗವು, ಏಕ ವಾನ್ ಅಯಂ ಮೇ ಭಗವತ್ತರಂ ಎಂದೆನಿಸುವ ಲಿಂಗವು, ಶ್ರೀಗುರುಲಿಂಗ ಜಂಗಮರೂಪಾಗಿ, ಮೂರ್ತಿ ತ್ರಿಧಾಭೇದವೆಂದೆನಿಸಿ ಶ್ರೀಗುರುಲಿಂಗ ಜಂಗಮರೂಪಾಗಿ,

ತ್ರಿಧಾವೈಕ್ಯವೆಂದು ತ್ರಿವಿಧವೇಕೀ ಭವಿಸಿ
ಇಷ್ಟಪ್ರಾಣಸ್ತಥಾ ಭಾವಂ ಕರತಳಾಮಳಕದಂತೆ
ಲಿಂಗರೂಪಾಗಿ ಎನ್ನ ಕರಸ್ಥಲಕ್ಕೆ ಬಂದು
ತೋರುತ್ತಿದ್ದಾನೆ. ಅಹಾ ಎನ್ನ ಪುಣ್ಯವೇ, ಅಹಾ ಎನ್ನ ಭಾಗ್ಯವೇ,
ಅಹಾ ಎನ್ನ ಸತ್ಯವೇ, ಅಹಾ ಎನ್ನ ನಿತ್ಯವೇ, ಶಿವಶಿವಾ ಮಹಾದೇವ
ನೀನೇ ಬಲ್ಲೆ ಉರಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

೫. ಪಾತಾಳವಿತ್ತಿತ್ತ, ಪಾದಂಗಳತ್ತತ್ತ. ದಶದಿಕ್ಕು ಇತ್ತಿತ್ತ
ದಶಭುಜಗಳತ್ತತ್ತ. ಬ್ರಹ್ಮಾಂಡವಿತ್ತಿತ್ತ. ಮಣಿಮುಕುಟವತ್ತತ್ತ. ಚೆನ್ನ
ಮಲ್ಲಿಕಾರ್ಜುನಯ್ಯ ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ
ಲಿಂಗವೇ.

೬. ತನುವಿಂಗೆ ಕುರುಹ ಕೊಟ್ಟು, ಮನಕ್ಕೆ ಅರಿವ ಕೊಟ್ಟು,
ಘನಕ್ಕೆ ವಿಶ್ರಾಂತಿಯ ಕೊಟ್ಟು, ಸುಳಿದಾಡುವ ಪರಿಪೂರ್ಣಂಗೆ ನಮೋ
ನಮೋ ಎಂಬೆ ನಿಷ್ಕಳಂಕ ಮಲ್ಲಿಕಾರ್ಜುನಾ.

೭. ಕರಸ್ಥಲ ಜ್ಯೋತಿಯದು. ಕುರುಹದು, ಎರಕವದು, ಅದರ
ನೆಲೆಯ ತಿಳಿದರೆ ನಿಜಾನಂದವು. ಹೊಲಬು ದೋರದಿಹ ನಿಸ್ಸೀಮನ
ಹೊಲಬನರಿದು ಕೂಡಿದಾತನೇ ಮೃಡನು ಕಾಣಾ ರಾಮನಾಥಾ.

೮. ಪೃಥ್ವಿ ಅಪ್ಪುವಿನ ಆಧಾರದಿಂದ ಬೀಜ ಒಡೆದು ಬೆಳೆ
ವಂತೆ, ಅರುಹು ಅರುಹಿಸಿಕೊಂಬ ಈ ಉಭಯದ ಮಧ್ಯದಲ್ಲಿ ಜ್ಞಾನ
ಕುರುಹಾಗಿ ಚಿದ್ಘನವಸ್ತುವಾಗಿ, ಉಭಯ ಒಂದುಗೂಡಿ ಮೇಲನರಿ
ದಲ್ಲಿ ಸದಾಶಿವ ಮೂರ್ತಿಲಿಂಗವು ಬಚ್ಚಬಯಲು.

೯. ಜ್ಯೋತಿಯ ಬೆಳಗಿನಲ್ಲಿ ಜ್ಯೋತಿಯ ಕಪಟವ ಕಾಂಬಂತೆ,
ಕಣ್ಣಿನಿಂದ ಕನ್ನಡಿಯ ನೋಡಿ ಕಣ್ಣಾಕಲೆಯ ಕಾಂಬಂತೆ, ತನ್ನಿಂದ
ತಾ ನೋಡಿ ತನ್ನನರಿಯಬೇಕು. ತನ್ನನರಿಯದವ ನಿಮ್ಮನೆತ್ತ
ಬಲ್ಲನೋ? ತನ್ನನರಿವುದಕ್ಕೆ ದೃಷ್ಟವ ಕೈಯ್ಯಲ್ಲಿ ಕೊಟ್ಟ. ಕಾಣದುದಕ್ಕೆ
ಚಿತ್ತವ ನೆನಹಿಂಗೆ ಇತ್ತ. ಚಿತ್ತ ಇಷ್ಟದಲ್ಲಿ ಅಜ್ಞ್ಯೊತ್ತಿದ. ಮತ್ತೆ ದೃಷ್ಟವ
ಕಾಂಬುದಿನ್ನೇನೋ? ಉರಿಯೊಳಗಣ ಕರ್ಪುರ, ಅನಲನೊಳಗಣ



ಪಾವಕ, ಸಿಲೆಯುಂಡ ಎಣ್ಣೆ, ಅಳತೆಯುಂಟೇ ಅಯ್ಯಾ? ಲಿಂಗವ
ಮೆಚ್ಚಿದ ಅಂಗಕ್ಕೆ ಜಗದ ಹಂಗಿಲ್ಲ ಅನಂಗ ಅತೀತ ನಿಷ್ಕಳಂಕ ಮಲ್ಲಿ
ಕಾರ್ಜುನ ಲಿಂಗವೇ ತಾನಾದ ಶರಣಂಗೆ.

೧೦. ಮೃತ್ಕಾಷ್ಠ ಪಾಷಾಣಂಗಳಿಂದಾದವೆಲ್ಲ ಲಿಂಗವೇ? ಲೋಹ
ಬೆಳ್ಳಿ ತಾಮ್ರ ಸುವರ್ಣದಿಂದಾದವೆಲ್ಲ ಲಿಂಗವೇ? ಅಲ್ಲ. ಅಲ್ಲಿ ಭಾವಿ
ಸುವ ಮನದ ಕೊನೆಯ ಮೊನೆಯ ಮೇಲೆ ಬೆಳಗುವ ನಿಜಬೋಧಾ
ರೂಪು ಲಿಂಗವಲ್ಲದೆ, ಇವೆಲ್ಲ ಲಿಂಗವೇ? ತಿಳಿದು ನೋಡಲು ನಿಜಗುರು
ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ ಲಿಂಗವು.

೧೧. ಶ್ರೀಗುರು ಸದ್ಭಾವ ಜಾತಲಿಂಗವು ಶಿವಕಲೆ ಸಂಪೂರ್ಣ
ವಾಗಿ ಕರಸ್ಥಲದಲ್ಲಿ ಮೂರ್ತಿ ಗೊಂಡಿರಲು, ಕಂಗಳಲ್ಲಿದ್ದಡೆ ತನ್ನ
ಳವೇ? ಪರಿಪೂರ್ಣ ಪರಶಿವನು ಆರಾರ ಭಾವ ಕಲ್ಪನೆ ಹೇಗೆ ಹಾಗೆ
ತೋರಿತ್ತೆಂದಡೆ, ತೋರಿದಂತೆ ಖಂಡಿತನೇ? ಆಗಲರಿಯನು ನಿಜ
ಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

೧೨. ಆಚಾರ ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ.
ಆ ಇಷ್ಟಲಿಂಗವಿಡಿದಿಹುದೇ ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ
ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬ
ಲ್ಲಡೆ ಕೂಡಲಚನ್ನ ಸಂಗಯ್ಯನಲ್ಲಿ ಲಿಂಗೈಕ್ಯ ಕಾಣಾ ಪ್ರಭುವೇ.

೧೩. ಅಂತರಂಗದಲ್ಲಿರ್ದ ನಿರವಯ ಲಿಂಗವನು ಸಾವಯ
ಲಿಂಗವ ಮಾಡಿ ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದು ಕೊಟ್ಟ
ಲಿಂಗವು ಅಂತರಂಗವನಾವರಿಸಿ ಅಂತಃಕರಣ ಕರಣಂಗಳೇ ಕಿರ
ಣಂಗಳಾಗಿ, ಆ ಬೆಳಗುವ ಚಿದಂಶವೇ ಪ್ರಾಣಲಿಂಗವು. ಆ ಮೂಲ
ಚೈತನ್ಯವೇ ಭಾವಲಿಂಗವು. ಇದನರಿದು ನೋಡುವ ನೋಟ ಭಾವ
ಪರಿಪೂರ್ಣವಾಗಿ ತಾನು ತಾನಹನಲ್ಲದೆ ಇದಿರಿಟ್ಟು ತೋರುವದಿಲ್ಲ.
ಅಖಂಡ ಪರಿಪೂರ್ಣವಪ್ಪ ನಿಲವು ತಾನೇ ಕೂಡಲಸಂಗಮದೇವಾ.

೧೪. ಲಿಂಗವ ಸ್ಥೂಲವೆಂಬರು ಕೆಲವರು, ಲಿಂಗಸ್ಥೂಲವಲ್ಲ.
ಲಿಂಗವ ಸೂಕ್ಷ್ಮವೆಂಬರು ಕೆಲರು, ಲಿಂಗಸೂಕ್ಷ್ಮವಲ್ಲ. ಸ್ಥೂಲ ಸೂಕ್ಷ್ಮದ

ಮೇಲಣ ಜ್ಞಾನರೂಪು ಪರನಾದ ಪರಬ್ರಹ್ಮವೇ ಲಿಂಗವೆಂದರಿದ ಅರಿವು ಅಖಂಡರೂಪು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೇ ಬೇರಿಲ್ಲ.

೧೫. ಅನುಕಾಮಿಸುತ್ತಿಪ್ಪ ಸಾಲೋಕ್ಯವಿದೆ, ಸಾಮೀಪ್ಯವಿದೆ, ಸಾರೂಪ್ಯವಿದೆ, ಸಾಯುಜ್ಯವಿದೆ, ಧರ್ಮವಿದೆ, ಅರ್ಥವಿದೆ, ಕಾಮವಿದೆ, ಮೋಕ್ಷವಿದೆ, ಎನ್ನ ಧ್ಯಾನ ಜಪತಪದಿಂದವೇ ಸಿದ್ಧಿಯಪ್ಪ ಮಹಾಸಿದ್ಧಿ ಇದೆ. ಆನೇನು ಇಚ್ಛೈಸುವ ಇಚ್ಛೆ ಎಲ್ಲವೂ ಇದೇ ನೋಡಾ. ಶ್ರೀಗುರು ಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆ ಬಂದಬಳಿಕ ಸರ್ವ ಸುಖವಿದೆ ನೋಡಾ. ಇನ್ನು ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯಾ. ನಿಮ್ಮ ಬೇಡಿಕೊಂಬೆನು, ನಿಮಗೆ ಎನ್ನಾಣೆ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

---

## ಇಷ್ಟಲಿಂಗವು ಮಹಾಲಿಂಗವೆಂದರಿವುದು.

೧. ಏತದ ತುದಿಯಲ್ಲಿ ಕಟ್ಟಿದ ಮಡಿಕೆಯಂತೆ, ಅದ ನೀತಿವಂತರು ಮೆಟ್ಟಿದರೆ ಪಾತಾಳದ ಉದಕವ ತಂದು ಪಾತೆಗೆ ಹರಹಿದ ತೆರನಂತೆ, ಸರ್ವಮಯದಲ್ಲಿ ಒಪ್ಪಿಪ್ಪ, ವಸ್ತುವನರಿದು ನಿಜಾರ್ತನಾಗಬಲ್ಲರೆ ಆತನೇ ಜೀವನ್ಮುಕ್ತ ನಿಷ್ಕಳಂಕ ಮಲ್ಲಿಕಾರ್ಜುನಾ.

ಅರ್ಥ:—ಏತದ ಗಣೆಯಲ್ಲಿ ಬಂಧಿಸಿದ ಬೊಕ್ಕಣದಹಾಗೆ, ಅದ ಬಲ್ಲವರು ತಿಳಿದರೆ, ಭಾವಿಯ ನೀರ ಮೇಲಕ್ಕೆ ತಂದು ಮಡಿಗಳಿಗಯ್ದಿಸಿ, ಸಸಿಗಳ ವರ್ಧನವ ಮಾಡುವಹಾಗೆ, ಚರಾಚರ ಪ್ರಾಣಿಗಳಲ್ಲಿ ಪೂರ್ಣವಾಗಿ ತುಂಬಿಕೊಂಡಿಪ್ಪ ಮಹಾಲಿಂಗವೇ ಇಷ್ಟಲಿಂಗವಾಗಿಪ್ಪುದೆಂದು ಅರಿದು ಆ ಅಜಾತ ಸ್ವಯಂಭುವಾದ ಲಿಂಗದಲ್ಲಿ ಕೂಡಿ ಲಿಂಗವೇ ತಾನಾಗಿರಬಲ್ಲಡೆ, ಆ ಶರಣನು ಬಾಳುತ್ತಲೇ ನಿಜಮೋಕ್ಷ ಸ್ವರೂಪನೆಂಬುದರ್ಥ.

---



## ಇಷ್ಟಲಿಂಗದ ಅವಶ್ಯಕತೆಯು.

೧. ಆಕಾರವಿಡಿದು ಅರ್ಚನೆ ಪೂಜೆಯ ಮಾಡುವದಲ್ಲದೆ, ನಿರಾಕಾರವ ನಂಬಲಾಗದು. ಶ್ರೀಗುರುಲಿಂಗವು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿ ಕೊಟ್ಟಬಳಿಕ, ಬಯಲನರಸಲುಂಟೇ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ?

೨. ಮೊನೆ ಇರಿವರೆ, ಕರದಲ್ಲಿ ಪಿಡಿದಲ್ಲದಾಗದು. ಮನವರಿವರೆ, ಕುರುಹಿನ ನಿರಿಗೆಯಲ್ಲಿ ಸಲೆಸಂದು ನಿಂದಲ್ಲದಾಗದು. ಕ್ರಿಯಾಸುಭಾವ ಶುದ್ಧವಾದಲ್ಲದೆ, ಐಘಟ ದೂರ ರಾಮೇಶ್ವರಲಿಂಗವ ಕೂಡಬಾರದು.

೩. ಭಾವಮನಕ್ಕೆ ಲಿಂಗವ ಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುದೇ? ಎರಡಂಗ ಭಕ್ತರಾಗಿ, ಒಂದಂಗಭವಿಯಾಗಿಪ್ಪರ ಭ್ರಾಂತರ ಮುಖವ ನೋಡಲಾಗದು. ತನುಮನ ಭಾವದಲ್ಲಿ ಲಿಂಗವ ಧರಿಸಿ, ಲಿಂಗತ್ರಯಕ್ಕೆ ಅಂಗತ್ರಯಕ್ಕೆ ಅಗಲಿಕೆ ಇಲ್ಲದ ಅಚಲನಾಗಿರ್ದೆನಯ್ಯಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೪. ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ, ಪ್ರಾಣದಲ್ಲಿ ಲಿಂಗ ಪರಿಣಾಮವನೈದುವ ಪರಿ ಎಂತಯ್ಯಾ? ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು. ಒಂದಂಗ ವಿರಹಿತವಾಗಿಪ್ಪವರುಂಟೇ? ಒಂದಂಗವ ಬಿಟ್ಟು, ಒಂದಂಗ ತೋರದಾಗಿ, ಸಂದು ಭೇದವಿಲ್ಲದಿಪ್ಪ ಮಡಿವಾಳನ ನಿಲವು ಕೂಡಲಚನ್ನಸಂಗನಲ್ಲಿ ನಿನಗೆಂತು ಸಾಧ್ಯವಾಯಿತ್ತು ಹೇಳಾ?

೫. ಆಕಾಶದಲ್ಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು. ಕಲಿಯಾದಡೂ ಸುರಗೆಯಿಲ್ಲದಾಗದು. ಭೂಮಿಯಿಲ್ಲದೆ, ಬಂಡಿ ನಡೆವುದೇ? ಅಂಗಕ್ಕೆ ಲಿಂಗವಿಲ್ಲದೆ, ನಿಸ್ಸಂಗವಾಗಬಾರದು. ಕೂಡಲಚನ್ನಸಂಗಮದೇವರಲ್ಲಿ, ಸಂಗವಿಲ್ಲದೆ ನಿಸ್ಸಂಗಿ ಎಂದು ನುಡಿಯಬಹುದೇ?

೬. ಪಟವಾಕಾಶವಡರಿತ್ತು ಎಂದರೆ, ಪಟಸೂತ್ರದ ಸಂಚ ಕೆಳಗಿಪ್ಪುದು ನೋಡಾ. ವ್ಯೋಮವಲ್ಲಿ ಚರಿಸುವ ಸೋಮ ಸೂರ್ಯರಿಂದಡೆ ಹೇಮಗಿರಿಯ ಸಂಚ ತಪ್ಪದು ನೋಡಾ. ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ, ಆ ವ್ಯೋಮದಲ್ಲಿ ನಿಲುವುದಕ್ಕೆ ಒಂದೆಡೆಯುಂಟೇ? ಮಣ್ಣ ಮರನನುಳಿದು ತೋರುವ ಹಣ್ಣ ರುಚಿಯುಂಟೇ? ನಮ್ಮ ಕೂಡಲಸಂಗನ ಶರಣರೊಳಗಿರ್ದು, ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮನೆಂಬ ಮಾತು ಅಂತಿರಲಯ್ಯ ಪ್ರಭುವೇ.

೭. ಶಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೇ? ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ? ಆತ್ಮಕ್ಕೆಯೂ ದೇಹಕ್ಕೆಯೂ ಹಂಗುಂಟೇ? ಮಣ್ಣ ಮರನನುಳಿದು, ತೋರುವ ಹಣ್ಣ ರುಚಿಯುಂಟೇ? ನಮ್ಮ ಕೂಡಲಸಂಗನ ಶರಣರೊಳಗಿರ್ದು, ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮನೆಂಬ ಮಾತು ಅಂತಿರಲಯ್ಯ ಪ್ರಭುವೇ.

೮. ಸತಿಯ ಸಂಗವತಿ ಸುಖವೆಂದರಿಡಡೇನು, ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ? ಕಣ್ಣ ಕಾಂಬುವೆಂದಡೆ. ಕತ್ತಲೆಯಲ್ಲಿ ಕಾಂಬುವದೆ ದೀಪವಿಲ್ಲದನ್ನಕ್ಕರ? ಸೂರ್ಯನ ಪ್ರಕಾಶದಿಂದ ಕಂಡು, ತಾನೇ ಕಾಡೆನೆಂಬ ಜಗದ ನಾಣ್ನುಡಿಯಂತಾಯಿತ್ತು. ಅಂಗವ ಬಿಟ್ಟು ಆತ್ಮನುಂಟೇ? ಶಕ್ತಿಯ ಬಿಟ್ಟು ಶಿವನುಂಟೇ? ಇದು ಕಾರಣ, ಸ್ಥೂಲ, ಸೂಕ್ಷ್ಮ, ಕಾರಣ ತನುತ್ರಯವಿರಲು, ಇಷ್ಟ ಪ್ರಾಣ, ಭಾವವೆಂಬ ತ್ರಿವಿಧಲಿಂಗ ಸಂಬಂಧ ಬೇಡವೆಂದಡೆ, ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೇ? ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯ ಪ್ರಭುವೇ.

೯. ಉಂಬರೆ ಬಂದು, ಬಾಯ ಮರೆದೆನೆಂದು, ಮೊರೆ ಇಡುತಿಪ್ಪ ಅರಿಕೆಹೀನನ ತೆರನಂತಾಯಿತ್ತು. ಅರಿಕೆಯನರಿ ಎಂದು ಕುರುಹು ಕೊಟ್ಟೊಡೆ, ಆ ಕುರುಹ ಮರೆದು ಅರಿದೆನೆಂಬ ಕುರುಬನ ನೋಡಾ ಜಾಂಬೇಶ್ವರಾ.



೧೦. ಎಳ್ಳಿಂಗೆ ಪರಿಮಳ ಕಟ್ಟಿದಲ್ಲದೆ, ಎಣ್ಣೆಗೆ ಪರಿಮಳ ವೇಧಿಸದು. ದೇಹವಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ, ಪ್ರಾಣಲಿಂಗ ಸಂಬಂಧವಾಗದು. ಇದು ಕಾರಣ ಗುಹೇಶ್ವರ ಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಲ್ಲದೆ, ಪ್ರಾಣಲಿಂಗ ಸಂಬಂಧಿಯಾಗಬಾರದು, ಕಾಣಾ ಸಿದ್ಧರಾಮಯ್ಯ.

೧೧. ರತ್ನದೀಪ್ತಿಯಾವಡೇನು? ಬಂಧಿಸಿ ಕುಂದಣದಲ್ಲಿ ಸಂಧಿಸಬೇಕು. ಸ್ವಾದರಸ ರುಚಿಯನೀವ ಫಲವೆಂಸಡೇನು, ವೃಕ್ಷವಿಲ್ಲದನ್ನಕ್ಕರ? ಚಿತ್ರಸೌಂದರ್ಯ ನೋಟಕ್ಕೆ ಸುಖವೆಂದಡೇನು, ಭಿತ್ತಿಯ ಪಟ ಮುಖ್ಯ ಸ್ಥಾನವಿಲ್ಲದನ್ನಕ್ಕರ? ಅಂಜನ ಸಿದ್ಧಿಯ ನಿಧಾನವ ಕಂಡಡೇನು, ಸಾಧನ ಕ್ರಿಯಿಂದ ಸಾಧ್ಯವ ಮಾಡಿಕೊಳ್ಳದನ್ನಕ್ಕರ? ಇದು ಕಾರಣ ಕಾಯದ ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವಿಲ್ಲದಿದ್ದರೆ, ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು. ಇದು ಕಾರಣ ಕ್ರಿಯಾಲಿಂಗ ಸಂಬಂಧವೇ ಭಕ್ತಂಗೆ ಮತವು. ಇದೇ ಮಹಾಶೌಚವು. ನಮ್ಮ ಗುಹೇಶ್ವರನ ಶರಣರ ಮನ ಒಪ್ಪುವಂತೆ ಸಿದ್ಧರಾಮಂಗೆ ಲಿಂಗ ಸಾಹಿತ್ಯವ ಮಾಡಾ, ಚನ್ನಬಸವಣ್ಣಾ.

೧೨. ಗರಳವಿಲ್ಲದುರುಗಂಗೆ ಹಲಬರಂಜಿದವರುಂಟೇ? ಕೈದುವಿಲ್ಲದ ಬಂಟ ಗರ್ಜಿಸಿದಡೆ ಅಂಜಿದವರುಂಟೇ? ಬಾಹ್ಯದೃಷ್ಟದ ಮಾತನಾಡಿದಡೆ ನೆಟ್ಟನೇ ಪ್ರಾಣಲಿಂಗಿಯಪ್ಪನೇ? ಇದು ನಿಶ್ಚಯವಲ್ಲ ನಿಃಕಳಂಕ ಮಲ್ಲಿಕಾರ್ಜುನಾ.

೧೩. ಶಿಲವ ಮರೆಯ ತೈಲವನರೆದು ಕಾಂಬ ತೆರನಂತೆ, ಫಲದ ಮರೆಯ ರಸವ ಹಿಳಿದು ಕಾಂಬಸವಿಯ ರುಚಿಯಂತೆ, ತೆರೆಯ ಮರೆಯ ರೂಪ ತೆಗೆದು ಕಾಂಬಂತೆ, ಇಷ್ಟದ ಮರೆಯಲ್ಲಿರ್ದ ದೃಷ್ಟವ ಉಭಯ ನಿಶ್ಚಯಿಸಿದಲ್ಲಿ ಪ್ರಾಣಲಿಂಗ ಸಂಬಂಧಿ ನಿಃಕಳಂಕ ಮಲ್ಲಿಕಾರ್ಜುನಾ.

೧೪. ಇಷ್ಟಲಿಂಗ ಪ್ರಾಣಲಿಂಗವೆಂಬುದನಾರುಬಲ್ಲರು? ಇಷ್ಟಲಿಂಗವೀಗ ದರ್ಪಣ, ಪ್ರಾಣಲಿಂಗವೀಗ ಪ್ರತಿಬಿಂಬ. ದರ್ಪಣ ಮಸುಳಿ

ಸಿವರೆ ಪ್ರತಿಬಿಂಬವ ಕಾಣಬಹುದೇ? ಇಷ್ಟಪ್ರಾಣ ತೃಪ್ತಿ ಎಂಬರು ನೋಡಾ. ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರ ಮಸುಳಿಸಿದರೆ, ಪ್ರಾಣಲಿಂಗವ. ಕಾಣಬಹುದೇ? "ಇಷ್ಟಲಿಂಗವು ವಿಶ್ವಸ್ಯ ಪ್ರಾಣಲಿಂಗಂತು ವರ್ಜಯೇತ್। ದರ್ಪಣಂ ಪ್ರತಿಬಿಂಬಾನಾಂ ಯಥಾ ರೂಪಂ ತಥಾ ಭವೇತ್" ಎಂದುದಾಗ, ಇದು ಕಾರಣ ಕೂಡಲಚನ್ನಸಂಗಮದೇವ ಇಷ್ಟದಲ್ಲಿ ಪ್ರಾಣತೃಪ್ತಿಯಾದವನ ತೋರಿ ಬದುಕಿಸಯ್ಯಾ.

## ಲಿಂಗದೇಹಿಯು ಪರಿಶುದ್ಧನು.

೧. ತನುವನು ಶ್ರೀಗುರು ಕ್ರಿಯಾದೀಕ್ಷೆಯಿಂದ ತನು ಗುಣವನು ಭಸ್ಮೀಕೃತವ ಮಾಡಿದ ಬಳಿಕ ದೃಶ್ಯ ಜಡ ತನುವಲ್ಲ. ಶಿವ ಸತ್ಕ್ರಿಯಾ ಚಾರದ ಮೂಲ ತನುತ್ರಯವೇ ತನ್ನ ತನುವೆಂದರಿವುದು. ಶ್ರೀಗುರು ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯವ ಕಳೆದು ಮನಕ್ಕೆ ಘನ ನೆನಹು ಸಂಬಂಧಿಸಿದನಾಗಿ, ಮನ ನಿರ್ಮಲನಾಗಿ ಲಿಂಗಕ್ಕಾಶ್ರಯ ವೆಂದರಿವುದು. ಶ್ರೀಗುರು ಜ್ಞಾನದೀಕ್ಷೆಯಿಂದ ಪ್ರಾಣ ಪ್ರಪಂಚದ ಪಶುಭಾವವ ಕಳೆದು ಅಖಂಡಿತ ಜ್ಞಾನಲಿಂಗ ಕಳೆಯು ತನ್ನ ಪ್ರಾಣ ನಾಥನೆಂದು ತಿಳುಹಿದನಾಗಿ ಪ್ರಾಣ ಮಲಿನವೆಂಬುದು ಪಶುಭಾವವ ಲ್ಲದೆ, ಲಿಂಗಭಾವವಲ್ಲ. ಈ ಸಂದೇಹ ಭ್ರಾಂತಿಯುಳ್ಳ ಕಾರಣ ಶೈವ ಹೊಲ್ಲ ಎನುತಿದ್ದೆನಯ್ಯಾ. ತಮ್ಮ ತಾವರಿದು ನಿಶ್ಚಯಿಸದಿದ್ದರೆ, ಮಾಣಲಿ. ಗುರು ಉಪದೇಶದಿಂದ ನಿಶ್ಚಯಿಸುವದು ಸಂದೇಹವಿಲ್ಲ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೨. ಹಸ್ತಾಬ್ಜ ಮಥನದಿಂದೊತ್ತಿ, ಭಸ್ಮವ ಮಾಡಿ, ಮತ್ತೆ ಪಂಚಾಕ್ಷರಿ ಮರು ಜೀವಣಿಯ ಚಿತ್ತ ಶ್ರೋತ್ರದೊಳು ಧಾರೆಯ ನೆರೆ ಯಲು, ಆತ ನಿನ್ನಂತೆ ಕಾಣಾ ರಾಮನಾಥಾ.



೩. ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ, ಆ ತೃಣ ವನಾಕಿಚ್ಚು ನುಂಗಿದಂತೆ, ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ, ಆತನ ಸರ್ವಾಂಗವೆಲ್ಲವು ಲಿಂಗಕಾಣಾ ರಾಮನಾಥಾ.

೪. ಜಾತವೇದಿಯಲ್ಲಿ ಶೋಧಿಸಿ ಪುಟವಿಟ್ಟ ಬೂದಿಯಂತಾದೆ ನಯ್ಯ ನಿಮ್ಮನಾರಾಧಿಸಿ. ಅದೆಂತೆಂದೊಡೆ, "ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೆ ಯಥಾ" ಎಂದುದಾಗಿ ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇ ಶ್ವರಾ.

೫. ತನು ಶುದ್ಧವಿಲ್ಲ ಎಂಬಾತ ಅಂಗದ ಮೇಲೆ ಲಿಂಗವ ಧರಿಸ ಲಾಗದು. ಮನ ಶುದ್ಧವಿಲ್ಲ ಎಂಬಾತ ಲಿಂಗವ ಹಿಡಿದು ಪೂಜೆಯ ಮಾಡಲಾಗದು ಪ್ರಾಣ ಮಲಿನವು ಎಂಬ ಪಶುಗಳಿಗೆ ಪ್ರಾಣಲಿಂಗವೆ ಲ್ಲಿಯದೊ? ಇದು ಕಾರಣ ಆರು ಶೈವರಲ್ಲಿ ನಡೆವುತ್ತಿಪ್ಪರೆಲ್ಲ ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಾ ನೀನು ಸಾಕ್ಷಿಯಾಗಿ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

# ಲಿಂಗವೇ ಪತಿ ಎಂದು ಭಾವಿಸತಕ್ಕದ್ದು.

## ಸತಿಪತಿ ಭಾವದ ವಚನಗಳು

ಹರನೇ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ
೧. ಹರನೇ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ
ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ,
ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೇ ಹೂಸಿ, ಕಂಕ
ಣವನೇ ಕಟ್ಟಿದರು, ಚನ್ನ ಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು.

೨. ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಬ,
ಪವಳದ ಚಪ್ಪರವನಿಕ್ಕಿ, ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ,
ಮದುವೆಯ ಮಾಡಿದರು. ನಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ, ಕೈದಾರ, ಸ್ಥಿರ ಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ
ಗಂಡಗೆನ್ನ ಮದುವೆಯ ಮಾಡಿದರು.

೩. ಬಸವ ಬಂದಿಗಟ್ಟಿ, ಸಂಗಯ್ಯ ಮದುವಳಿಗ, ನಾನು ಮದು
ವಳಿಗೆ, ವಸುಧೆಯ ಭಕ್ತರೆಲ್ಲರೂ ನಿಬ್ಬಣಿಗರು. ಶುದ್ಧ ಶಿವಾಚಾರ
ವೆಂಬ ಮನೆಯಲ್ಲಿ ಮದುವೆಯಾಯಿತ್ತಾಗಿ, ಕೂಡಲ ಚನ್ನಸಂಗಮ
ನೊಬ್ಬ ಅಚಳ, ನಾನು ನಿತ್ಯ ಮುತ್ತೈದೆ.

೪. ಜಗವೆಲ್ಲರಿಯಲು ಎನಗೊಬ್ಬ ಗಂಡನುಂಟು. ಆನು
ಮುತ್ತೈದೆ, ಅನು ನಿಪ್ಪೆ. ಕೂಡಲಸಂಗಮದೇವಯ್ಯಂತಪ್ಪ ಎನಗೊಬ್ಬ
ಗಂಡನುಂಟು.

೫. ಹುಟ್ಟಿದೆನು ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾ
ತರ ಕರುಣದಲ್ಲಿ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರ
ಮಾರ್ಥವೆಂಬ ಸಕ್ಕರೆಯ ನಿಕ್ಕಿದರು ನೋಡಾ. ಇಂತಪ್ಪ ತ್ರಿವಿಧಾಮೃ
ತವನು ದಣಿಯೆರೆದು ಸಲಹಿದಿರೆನ್ನ. ವಿವಾಹವ ಮಾಡಿದಿರಿ. ಸಯ
ವಪ್ಪ ಗಂಡಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತ
ರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗತನವ ಮಾಡುವೆ



ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮುಂಡೆಗೆ ಹೂವತಾಹೆನ
ಲ್ಲದೆ, ಹುಲ್ಲ ತಾರೆನು. ಅವಧರಿಸಿ. ನಿಮ್ಮಡಿಗಳೆಲ್ಲರು ಮರಳಿ ಬಿಜ
ಯಂಗೈವುದು ಶರಣಾರ್ಥಿ.

೬. ಎನ್ನ ನಲ್ಲನು ಒಲ್ಲೆನೆಂದು ಕಳುಹಿದಡೆ, ಇಲ್ಲಿಯೇ ಅರಸು
ವೆನವನ. ಗಂಗೆಯ ನೋನೆನು. ಗೌರಿಯ ನೋನೆನು. ಇಲ್ಲಿಯೇ
ಅರಸುವೆನವ್ವಾ. ಎನ್ನಂತರಂಗದ ಆತ್ಮ ಜ್ಯೋತಿಯೇ ಉರಿಲಿಂಗ
ದೇವ ಎಂದು ಇಲ್ಲಿಯೇ ಅರಸುವೆನವ್ವಾ.

೭. ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚಲುವನವ್ವಾ. ಎಡೆ
ಇಲ್ಲದ, ತೆರೆಹಿಲ್ಲದ, ಕುರುಹಿಲ್ಲದ ಚಲುವಂಗಾನೊಲಿದೆ, ಎಲೆ ಅವ್ವಾ.
ನೀ ಕೇಳಾ ತಾಯೆ. ಭವವಿಲ್ಲದ, ಭಯವಿಲ್ಲದ, ನಿರ್ಭಯ ಚಲುವಂಗೆ
ಕುಲಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದುಕಾರಣ
ಚನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವ ಕೆಡುವ ಗಂಡ
ರನೊಯ್ದು ಒಲೆಯೊಳಗಿಕ್ಕು.

೮. ಒಬ್ಬನೆ ಗರುವನು, ಇವನೊಬ್ಬನೆ ಚಲುವನು, ಇವನೊ
ಬ್ಬನೆ ಧನಪತಿ, ಕೇಳಾ ಕೆಳದಿ. ಅವಗೆ ಹಿರಿಯರಿಲ್ಲ, ಅವಗೆ ಒಡೆಯರಿಲ್ಲ.
ಇಂತಪ್ಪ ನಲ್ಲನು ಲೇಸು ಕಾಣೆನಗೆ. ನೀವೆಲ್ಲ ಒಂದಾಗಿ ಹಿಡಿದು
ಬಡಿದರೆ, ಬಿಡಿಸುವ ಈ ನಲ್ಲ ಲೇಸು ಉರಿಲಿಂಗದೇವನು.

೯. ಅತ್ತೆ ಮಾಯೆ, ಮಾವ ಸಂಸಾರಿ, ಮೂವರು ಮೈದುನರು
ಹುಲಿಯಂತವರು. ನಲ್ಲನು ನೆಗೆವೆಣ್ಣ ಕೆಳೆದಿಯರ ಭಾವದಲಿರು
ವನು. ಇವದೇವನಲ್ಲ. ಅತ್ತಿಗೆಯರ ಮೀರಲಾರೆನು. ತೊತ್ತುವಿನ
ಕಾವಲು. ಹೇಳುವರೆ ಕೇಳು. ಕರ್ಮವೆಂಬ ಗಂಡನ ಬಾಯಟೊಣೆದು
ಹಾದರವನಾಡುವೆನು ಹರನ ಕೂಡೆ. ಮನವೆಂಬ ಸಖಿಯ ಪ್ರಸಾದ
ದಿಂದ ಅನುಭಾವ ಕಲಿತೆನು ಶಿವನೊಡನೆ. ಕರಚಲ್ವ ಶ್ರೀಶೈಲ ಚನ್ನ
ಮಲ್ಲಿಕಾರ್ಜುನನ ಸಜ್ಜನ ಗಂಡನ ಮಾಡಿಕೊಂಬೆ.

೧೦. ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿ
ರಯ್ಯ! ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯ! ನೀನಲ್ಲದೆ ಮತ್ತೇನು

ನಾನರಿಯೆ. ಕೆನ್ನೆಯಲ್ಲಿ ಕೈವಿಡಿವೆನು. ನಿಮ್ಮಲ್ಲಿ ನೆರೆದೆನು. ಮನ್ನಿಸು
ಕಂಡಯ್ಯಾ. ಮಹಾಲಿಂಗವೇ ಸತಿಯಾನು, ಪತಿನೀನು. ಮನೆಯೊ
ಡೆಯ ಮನೆಯನೆ ಕಾಯ್ದಿರ್ಪಂತೆ, ನೀ ಎನ್ನ ಮನವ ಕಾದಿರ್ಪ
ಗಂಡನೈ. ನಿಮಗೋತ ಮನವ ಅನ್ಯಕ್ಕೆ ಹರಿಸಿದರೆ ನಿಮ್ಮಭಿಮಾನಕ್ಕೆ
ಹಾನಿ, ಕೂಡಲಸಂಗಮದೇವ.

## ಲಿಂಗಾಂಗ ಸಾಮರಸ್ಯ ಭಾವದಿಂದ ಆಚರಿಸುವದು.

೧. ಅಂಗವು ಲಿಂಗದಲ್ಲಿ ಸಂಬಂಧವಾದವರ, ಲಿಂಗವೆಂದೇ
ಕಾಂಬುದು. "ಕೀಟೋಪಿ ಭ್ರಮರಾಯತೆ" ಎಂಬ ನ್ಯಾಯದಂತೆ ಅಂಗ
ಲಿಂಗ ಸೋಂಕಿ ಲಿಂಗವಾಯಿತ್ತಾಗಿ, ನೀವೆಂದೇ ಕಾಂಬುದು. ಲಿಂಗ
ಮುಂತಾಗಿಯೇ ನಡೆ, ಲಿಂಗಮುಂತಾಗಿಯೇ ನುಡಿ, ಲಿಂಗಮುಂತಾ
ಗಿಯೇ ನೋಡುವರಾಗಿ, ಅಂಗೇಂದ್ರಿಯಂಗಳೆಂಬುದಿಲ್ಲ, ಅವೆಲ್ಲವೂ
ಲಿಂಗೇಂದ್ರಿಯಂಗಳಾದವಾಗಿ. ಕಾರಣ ಲಿಂಗವೆಂದೇ ಕಾಂಬುದು.
ಗ್ರಂಥ॥ ಸರ್ಪದಷ್ಟಸ್ಯಯದ್ದೇಹಂ ತದ್ದೇಹಂ ವಿಷದೇಹವತ್॥ ಎಂದು
ದಾಗಿ, ಸರ್ವಾಂಗಲಿಂಗ ಕೂಡಲ ಚನ್ನಸಂಗಾ ನಿಮ್ಮ ಶರಣ.

೨. ಜ್ಯೋತಿ ಮುಟ್ಟಿದ ಬತ್ತಿ ಎಲ್ಲಾ ಜ್ಯೋತಿಯಪ್ಪವಯ್ಯಾ.
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ. ಪ್ರಸಾದ
ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ. ಲಿಂಗವ ಮುಟ್ಟಿದ
ಅಂಗವೆಲ್ಲ ಲಿಂಗವಪ್ಪವಯ್ಯಾ. ಸಕಳೇಶ್ವರದೇವಾ, ನಿಮ್ಮ ಮುಟ್ಟಿದವ
ರೆಲ್ಲ ನಿಮ್ಮಂತಪ್ಪರಯ್ಯಾ.

೩. ಘಟವನೊಡೆದು ಬಯಲ ನೋಡಲದೇಕೆ? ಘಟದೊಳಗಿ
ಪ್ಪುದೇ ಬಯಲೆಂದರಿದಡೆ ಸಾಲದೇ? ಪಟವ ಹರಿದು ತಂತುವ
ನೋಡಲದೇಕೆ? ಆ ಪಟವ ತಂತುವೆಂದರಿದಡೆ ಸಾಲದೇ? ಕಟಕವ



ಮುರಿದು ಕಾಂಚನವ ನೋಡಲದೇಕೆ? ಆ ಕಟಕವೇ ಕಾಂಚನವೆಂ
ದರಿದಡೆ ಸಾಲದೇ? ತನ್ನನಳಿದು ಘನವ ನೋಡಲದೇಕೆ? ತಾನೇ
ಘನವೆಂದರಿದಡೆ ಸಾಲದೆ ಹೇಳಾ ರಾಮನಾಥ?

೪. ತಾ ಮಿಥ್ಯನಾದ ಮತ್ತೆ ಜಗವೆಲ್ಲವೂ ತನಗೆ ಮಿಥ್ಯೆ. ತಾ
ತಥ್ಯನಾದ ಮತ್ತೆ ಜಗವೆಲ್ಲವೂ ತನಗೆ ತಥ್ಯ. ಅಂಗಯ್ಯಲ್ಲಿ ಹಿಡಿದು
ಕೊಯ್ಯುವವ ನೋಡದೆ ಅಲಗು ಕೆಟ್ಟಿತ್ತೆಂದು ಹಲುಬುವನಂತಾಗದೆ,
ತನ್ನ ತಾ ಮರೆದು ಅನ್ಯರ ದೆಶೆಯಿಂದ ತನ್ನ ಕೇಳುವನಂತಾಗದೆ,
ತನ್ನ ನಿಜವ ಅರಿವ ಮರೆಯದೆ, ಇದು ಕಾಲಕರ್ಮ ವಿರಹಿತ ಶ್ರಿಪು
ರಾಂತಕ ಲಿಂಗದೊಳಗಾದವನ ಇರವು.

## ಲಿಂಗದ ಕ್ರಮ ಪ್ರಾಪ್ತಿಯು.

೧. ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ. ಯುಕ್ತನೆನಿಸುವೆ
ನಯ್ಯಾ ಮೆಲ್ಲಮೆಲ್ಲನೆ. ಪಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ. ಎಡ
ಹುವ ಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ. ಕೂಡಲ
ಸಂಗಮದೇವಾ ನಿಮ್ಮಿಂದಧಿಕನೆನಿಸುವೆನಯ್ಯಾ.

೨. ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ. ಅನುಭಾವ
ಲಿಂಗವಿಡಿದು ಮಾರ್ಗ ಕ್ರಿಯಾಲಿಂಗಸಿದ್ಧಿ. ಮಾರ್ಗಕ್ರಿಯಾಲಿಂಗವಿ
ಡಿದು ಮೀರಿದ ಕ್ರಿಯಾ ಲಿಂಗಸಿದ್ಧಿ. ಮೀರಿದ ಕ್ರಿಯಾಲಿಂಗವಿಡಿದು
ಕ್ರಿಯಾನಿಷ್ಪತ್ತಿಲಿಂಗಸಿದ್ಧಿ. ಲಿಂಗಜಾತಃ ಲಿಂಗಬೀಜಂ ಎಂದುದಾಗಿ,
ಇದುಕಾರಣ ಕೂಡಲಚನ್ನ ಸಂಗಯ್ಯ ಲಿಂಗವಿಡಿದು ಲಿಂಗಸಿದ್ಧಿ.

೩. ಲಿಂಗವಿಡಿದು ಲಿಂಗಮಾಹೇಶ್ವರನೆನಿಸಿಕೊಂಬೆ. ಲಿಂಗವಿ
ಡಿದು ಲಿಂಗಪ್ರಾಣಿ ಎನಿಸಿಕೊಂಬೆ. ಲಿಂಗವಿಡಿದು ಲಿಂಗವೆನಿಸಿಕೊಂಬೆ
ನಯ್ಯಾ. ಅರಿವರತ ಕ್ರಿಯಾನುಭಾವವಿಡಿದು ಮೀರಿ ಕೂಡಲಚನ್ನ
ಸಂಗ ತಾನಾದ.

೪. ಸಣ್ಣ ನನೆಯೊಳಗಣ ಪರಿಮಳವ ಹೊರೂಸಸಿ ಇದಿರಿಂಗೆ ಅರುಹಿಸ ಬಲ್ಲುದೇ ವಾಯು? ಕೊಡಗೂಸಿನೊಳಗಣ ಮೊಲೆ ಮುಡಿಯ ಹಡೆದ ತಾಯಿ ತಂದೆಗಳೆಂದಡೆ ಕಾಣಿಸಿ ಕೊಡಬಲ್ಲರೇ ಕಾಂಬುವರ ಕಣ್ಣಿಗೆ? ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ ರಾಮನಾಥಾ.

---

## ಪ್ರಾಣಲಿಂಗದ ಸ್ವರೂಪು.

೧. ಲಿಂಗದಲ್ಲಿ ಪ್ರಾಣವನಿಲಿಸಿ, ಪ್ರಾಣದಲ್ಲಿ ಲಿಂಗವನಿರಿಸಿ, ನೆನೆವೃತ್ತಿದ್ದಕಾರಣ ಪ್ರಾಣಲಿಂಗವಾಯಿತ್ತು. ಆ ಲಿಂಗ ಸರ್ವ ಕರಣಂಗಳ ವೇಧಿಸಿ, ಕರಣಂಗಳು ಲಿಂಗ ಕರಣಂಗಳಾದ ಕಾರಣ, ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ ಹೊಂದೆನೆಂದು ಅರಿಯನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀವು ಪ್ರಾಣಲಿಂಗವಾಗಿ.

೨. ಎನ್ನ ಮನದ ಕೊನೆಯ ಮೇಲೆ ಅಂಗವಿಲ್ಲದ ರೂಪನ ಕಂಡು, ನಾನು ಬೆರಗಾದೆ. ಅಂತರಂಗದ ಆತ್ಮನೊಳಗೆ ಅನಿಮಿಷ ನಿಶ್ಶೈಕ್ಯ ಗುಹೇಶ್ವರಲ್ಲಯ್ಯನ ಕಂಡು ಬೆರಗಾದೆನು.

೩. ಅಂತರಂಗದಲ್ಲಿ ಆವರಿಸಿ, ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳಗುವೆ. ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ ಉರಿಲಿಂಗದೇವನವ್ವಾ.

೪. ಅಂತರಂಗದಲ್ಲಿ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನರಿಯದೆ ಬಹಿರಂಗದಲ್ಲಿ ಬಳಲುತ್ತಿದ್ದರಲ್ಲಾ! ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾಶ ಪರಬ್ರಹ್ಮ ಪ್ರಾಣಲಿಂಗವನು ಅವರೆತ್ತ ಬಲ್ಲರು? ಮಹಾನುಭಾವದಿಂದ ತಿಳಿದು ನೋಡಲು, ತನ್ನಲ್ಲಿಯೇ ತೋರುತ್ತಿದೆ! ಹೇಳಿ ಹೇಳಿಹೆನೆಂದಡೆ, ನುಡಿಗೊಳಗಾಗದು. ತಿಳಿದು ನೋಡಲು ತಾನಲ್ಲದೆ, ಮತ್ತೇನೂ ಇಲ್ಲ. ಅದೇ ಪ್ರಾಣಮಯಲಿಂಗ ತಾನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.



೫. ದೀಪದೊಳಗೆ ವ್ಯಾಪಿಸಿಕೊಂಡಿರ್ಪುದು ಒಂದೇ ಜ್ಯೋತಿ ನೋಡಾ. ಅದು ರೂಪಲ್ಲ, ನಿರೂಪಲ್ಲ. ಸರ್ವ ವ್ಯಾಪಾರವ ಹೊಂದಿದ ಸ್ವಯಂ ಜ್ಯೋತಿ ನೋಡಾ. ಅದೇ ಎನ್ನ ಪ್ರಾಣಲಿಂಗವೆಂಬ ಪರತರ ಪರಮಾನಂದ ಪರಂಜ್ಯೋತಿ ನೋಡಾ ಅಖಂಡೇಶ್ವರಾ.

೬. ಅಗ್ನಿ ದಿಟವೆಂದರೆ, ತಾ ಹುಸಿ ಕಾಷ್ಠವಿಲ್ಲದೆ. ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ, ಪ್ರಾಣಲಿಂಗ ಎಂದೆಂಬೆನೆಂದ ನಂಬಿಗ ಚೌಡಯ್ಯ.

---

## ಇಷ್ಟಲಿಂಗ ಪ್ರಾಣಲಿಂಗಗಳ ಸಂಬಂಧ.

೧. ಪಥದೊಳಗಣ ಪ್ರತಿಷ್ಠೆಯ ಪೂಜಿಸಿ, ಸ್ವಯಂಭುವನರಿದುದಿಲ್ಲ. ಆದನರಿಸಿ ಕಂಡುದಿಲ್ಲ. ಸ್ವಯಕ್ಕೂ ವಚನಕ್ಕೂ ವಿರೋಧವಿಲ್ಲದೆ, ಉಭಯವಳಿದು ನಿಂದ ನಿಜಗುಣಿ ಯೋಗಿಯ ಯೋಗೆಂಬುದಿಲ್ಲ.

ಅರ್ಥ:—ಮಾರ್ಗಕ್ರಿಯಲ್ಲಿ ನೆಲೆಗೊಂಡಿಪ್ಪ ಇಷ್ಟಲಿಂಗಕ್ಕೆ ಭಿನ್ನ ವಿಟ್ಟು ಪೂಜೆಯುಮಾಡಿ, ಪ್ರಾಣಲಿಂಗ ಸಂಬಂಧವನರಿದುದಿಲ್ಲ. ಆ ಪ್ರಾಣಲಿಂಗವನು ಕೃತ ಜ್ಞಾನದಿಂದ ಹುಡುಕಿ ಸಾಕ್ಷಾತ್ಕಾರವ ಮಾಡಿಕೊಳ್ಳಲಿಲ್ಲ. ಇಷ್ಟಲಿಂಗಕ್ಕೂ ಪ್ರಾಣಲಿಂಗಕ್ಕೂ ಭಿನ್ನವಿಲ್ಲದೆ ಅಂಗ ಲಿಂಗ, ಮನ ಪ್ರಾಣಲಿಂಗವೆಂಬ ಭಿನ್ನತೆಯಳಿದು, ಲಿಂಗವು ಇಷ್ಟಲಿಂಗದಲ್ಲಿ, ಮನವು ಪ್ರಾಣಲಿಂಗದಲ್ಲಿ ಸ್ವಸ್ಥವಾದ ಶರಣನ ಶಿವ ಯೋಗವೆಂಬುದು ಭಿನ್ನವಿಲ್ಲವೆಂಬುದರ್ಥ.

೨. ತನುವಿನಲ್ಲಿಪ್ಪುದು ಇಷ್ಟಲಿಂಗವೆಂಬರು. ಆತ್ಮನ ನೆನಹಿನಲ್ಲಿಪ್ಪುದು ಪ್ರಾಣಲಿಂಗವೆಂದೆಂಬರು. ಇಂತೀ ಘಟಾತ್ಮಕ್ಕೆ ಉಭಯಲಿಂಗ ಉಂಟೇ? ಹೊರಗಣ ಅಸ್ತಿ ಚರ್ಮಕ್ಕೆ ಬೇರೊಂದು ಅಸುವ ಕಲ್ಪಿಸಬಹುದೇ? ಒಳಗಣ ಕರುಳು ಮಜ್ಜೆ ಮಾಂಸಕ್ಕೆ ಬೇರೊಂದು ಅಸುವಿನ ಕಲೆಯುಂಟೇ? ಇದಕ್ಕೆ ದೃಷ್ಟವ ಕಂಡಡೆ, ಇಷ್ಟ ಪ್ರಾಣವೆಂಬುದಕ್ಕೆ ಕಟ್ಟೆ. ಅದು ಅಚೇತನವಪ್ಪುದೊಂದು ಸಾವಯವ, ಚೇತನವಪ್ಪುದೊಂದು ನಿರವಯವ. ಸಾವಯವ ನಿರವಯವದೊಳಡಗಿ ಕುರುಹಾದ ಭೇದ ಆ ಕಾಯದ ಒಳಹೊರಗಿನ ನೋವಿನ ಭೇದದಂತೆ. ಉಭಯವನರಿದಾತ್ಮ ಒಂದೇಯಾಗಿ, ಕಾಯದ ಇಷ್ಟಲಿಂಗವೆಂದು, ಆತ್ಮನ ಅರಿವೆಂದು ಎರಡೆನಿಸುವ ಲಿಂಗವೆಂಬುದೊಂದು ಕುರುಹಿಲ್ಲ. ಅದು ಏಕಮೇವ ಸ್ವರೂಪು, ಅದು ಚಿದ್ಘನ ಸ್ವರೂಪು. ಅದು ಘಟ ಮಠದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನ ಪರಿಯಂತೆ. ಎನ್ನಯ್ಯ ಪ್ರಿಯ ಇಮ್ಮಡಿ ನಿಷ್ಕಳಂಕ ಮಲ್ಲಿಕಾರ್ಜುನ ಲಿಂಗವು ಅತ್ಯತಿಷ್ಠದ್ದಶಾಂಗುಲನಾಗಿಪ್ಪನು.

೩. ಇಷ್ಟಲಿಂಗ ಪ್ರಾಣಲಿಂಗವೆಂದು ವಿಭೇದಿಸುವಲ್ಲಿ, ಕುಸುಮದ ಗಿಡುವಿಂಗೆ ವಾಸನೆಯುಂಟೆ, ಕುಸುಮಕಲ್ಲದೆ? ಅದು ಗಿಡುವಿಡಿದಾದ ಕುಸುಮವೆಂದರಿದು, ಗಿಡುವಿನ ಹೆಚ್ಚುಗೆ ಕುಸುಮದ ನಲಿವು, ಸುಗಂಧದ ಬೆಳೆ. ಭಕ್ತಿಗೆ ಕ್ರಿಯೆ, ಕ್ರಿಯೆಗೆ ಶ್ರದ್ಧೆ, ಶ್ರದ್ಧೆಗೆ ಪೂಜೆ, ಪೂಜೆಗೆ ವಿಶ್ವಾಸ, ವಿಶ್ವಾಸಕ್ಕೆ ವಸ್ತು ತನ್ಮಯವಾಗಿಪ್ಪುದು. ಇದು ತೂರ್ಯ ಭಕ್ತಿಯ ಇರವು, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗವ ಮೆಲ್ಲಮೆಲ್ಲನೆ ಕೂಡುವ ಕೂಟ.

೪. ಅಂಗಕ್ಕೆ ಕುರುಹೆಂಬುದೊಂದು ಲಿಂಗ, ಆತ್ಮಂಗೆ ಅರುಹೆಂಬುದೊಂದು ಲಿಂಗ, ಪರುಷ ಲೋಹದಂತೆ ಕೂಡುವನ್ನಬರ ಉಭಯನಾಮರೂಪಾಯಿತ್ತು. ಕೂಡಿದಮೇಲೆ ಪರುಷವೆಂಬ ನಾಮವಿಲ್ಲ, ಲೋಹವೆಂಬ ಕುರುಹಿಲ್ಲ, ಹೇಮವೆಂಬ ನಾಮವಾಯಿತ್ತು. ಇಷ್ಟ ಪ್ರಾಣ ಹಾಗಾದಲ್ಲಿ, ಮನ ಸಂದಿತ್ತು ಮಾರೇಶ್ವರಾ.



೫. ಇಷ್ಟಲಿಂಗ ಪ್ರಾಣಲಿಂಗವೆನುತಿರ್ದರು. ಇಷ್ಟಲಿಂಗದ ಪ್ರಾಣಲಿಂಗದ ಸಂಧಿಯ ನಾರುಬಲ್ಲರಯ್ಯಾ? ಇಷ್ಟಲಿಂಗವನರಿವಡೆ, ಅನಿಷ್ಟ ಪರಿಹರಿಸಬೇಕು ನೋಡಾ. ಪ್ರಾಣಲಿಂಗವನರಿವಡೆ, ಪ್ರಪಂಚನಾಸ್ತಿಯಾಗಿರಬೇಕು ನೋಡಾ. ಇಷ್ಟಪ್ರಾಣ ಒಂದೇ ಎಂದರಿದು ಒಡವೆರಿಸಿದಬಳಿಕ, ಜಾಗ್ರತ್ ಸ್ವಪ್ನ ಸುಷುಪ್ತಿ ಇಂತೆಂಬ ತ್ರಿವಿಧಾವಸ್ಥೆಯಲ್ಲಿ ಲಿಂಗವಲ್ಲದೆ ಮತ್ತೇನನೂ ತೋರಲಾಗದು ನೋಡಾ. ಆ ಮಹಾತ್ಮನು ಸರ್ವಾಂಗ ಪ್ರಾಣಲಿಂಗ ಮೂರ್ತಿ ಕಾಣಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೬. ಇಷ್ಟಲಿಂಗ ಒಂದು ಪ್ರಾಣಲಿಂಗ ಒಂದು ಎಂಬ ಮಿಟ್ಟೆಯ ಭಂಡರ ಮಾತ ಕೇಳಲಾಗದು. ಅಂಗಣದೊಳಗೊಬ್ಬ ಗಂಡ, ಮನೆಯೊಳಗೊಬ್ಬ ಗಂಡ, ಹಿತ್ತಿಲೊಳಗೊಬ್ಬ ಗಂಡನೆಂಬ ಸತಿಯರ ಲೋಕದ ಮಾನವರು ಮೆಟ್ಟಿ ಮೂಗ ಕೊಯ್ಯದೆ ಮಾಣ್ಬರೇ ಅಯ್ಯಾ? ಲಿಂಗತ್ರಯವೆಂದು ತೋರಿದರಾರು? 'ಲಿಂಗಮೇಕಂ ಪರಂ ನಾಸ್ತಿ' ಎಂದು ಸದ್ಗುರುಸ್ವಾಮಿ ಅರುಹಿದನಾಗಿ ಷಟ್‌ತ್ರಿಂಶತ್ ತತ್ವಕ್ಕೆ ಆಲಯವಂಥ ಮಹಾಲಿಂಗದ ಬೆಳಗು ಕರಸ್ಥಲದಲ್ಲಿ ಮನಸ್ಥಲದಲ್ಲಿ ವೇದ್ಯವಾದಬಳಿಕ ಸರ್ವಾಂಗ ಲಿಂಗ ಕೂಡಲಚನ್ನ ಸಂಗಯ್ಯಾ ನಿಮ್ಮ ಶರಣಂಗೆ.

## ಇಷ್ಟಲಿಂಗದಿಂದ ಪ್ರಾಣಲಿಂಗದ ಅರಿಕೆ.

೧. ಇಷ್ಟಲಿಂಗವೇ ಪ್ರಾಣಲಿಂಗವೆಂಬ ಮಿಟ್ಟೆಯ ಭಂಡರ ಮಾತಕೇಳಲಾಗದು. ಇಷ್ಟಲಿಂಗವನು ಕಾಯವನು ಮೆಟ್ಟಿ ಹೂಳು ವಲ್ಲಿ ಬಿಟ್ಟು ಹೋಹ ಪ್ರಾಣಕ್ಕೆ ಇನ್ನಾವುದೋ ಲಿಂಗವು? ಇಷ್ಟಲಿಂಗ ದಲ್ಲಿ ಪ್ರಾಣಲಿಂಗವನರಿಯದವರು ಕೆಟ್ಟ ಕೇಡಿಂಗೆ ಕಡೆ ಇಲ್ಲ ಗುಹೇ ಶ್ವರಾ.

೨. ಗೋವಿನ ಹೊಟ್ಟೆಯಲ್ಲಿ ಘೃತವಿದ್ದಡೇನೋ? ಆ ಗೋವು ದಿನ ದಿನಕ್ಕೆ ಪುಷ್ಟಿಯಾಗಲು ಬಲ್ಲುದೇ? ಅದು ಕಾರಣ ಆ ಗೋವ ಪೋಷಿಸಿ ಕರೆದು ಕಾಸಿ, ಘೃತವ ಮಾಡಿ, ಗೋವಿಂಗೆ ಕುಡಿಯಲೆರೆ ದಡೆ ಆ ಗೋವು ದಿನ ದಿನಕ್ಕೆ ಪುಷ್ಟಿಯಹುದಲ್ಲದೆ, ಅದು ಹೇಗೆಂದಡೆ ಹಾಗೆ ತನ್ನಲ್ಲಿ ವಸ್ತುವಿದ್ದಡೇನೋ, ವಸ್ತುವ ಗುರುಮುಖದಿಂದ ಕರ ಸ್ಥಲಕ್ಕೆ ಪಡೆದು ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿದಲ್ಲದೆ, ಪ್ರಾಣ ಲಿಂಗವಾಗದು. ಕೂಡಲ ಚನ್ನಸಂಗಯ್ಯನಲ್ಲಿ ಇಷ್ಟಲಿಂಗದ ಸತ್ಕ್ರಿಯೆ ಯಿಂದ ಪ್ರಾಣಕ್ಕೆ ವೇಧಿಸಿ, ತಾನೆಂಬ ಅನಿಷ್ಟವ ತೊಲಗಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗಬಾರದು.



## ಪ್ರಾಣಲಿಂಗಿಯ ಸ್ವರೂಪು

೧. ಹರಿವ ನದಿಗೆ ಮೈಯೆಲ್ಲ ಕಾಲು. ಉರಿವಗ್ನಿಗೆ ಮೈಯೆಲ್ಲ ನಾಲಿಗೆ. ಬೀಸುವ ಗಾಳಿಗೆ ಮೈಯೆಲ್ಲ ಕೈ. ಗುಹೇಶ್ವರಾ ನಿಮ್ಮ ಶರ ಣಂಗೆ ಸರ್ವಾಂಗ ಲಿಂಗ.

೨. ಇಹಲೋಕದಲ್ಲಿ ಲಿಂಗವ ಪೂಜಿಸಿ ಪರಲೋಕದ ಪದವ ಬಯಸುವನಲ್ಲ ನೋಡಾ! ಇಹಪರವನೊಳಕೊಂಡ ಪರಿಪೂರ್ಣ ಲಿಂಗವು ತನ್ನ ಸರ್ವಾಂಗದಲ್ಲಿ ಸನ್ನಿಹಿತವಾಗಿರಲು, ಆ ಲಿಂಗದಲ್ಲಿ ತನ್ನಂಗವ ಬೆರಸಿ, ಆ ಶುದ್ಧ ಪರಮಾತ್ಮಲಿಂಗವೇ ಗೂಡಾಗಿಪ್ಪ ಲಿಂಗನಿಷ್ಠನು ನೋಡಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೩. ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಯಿತ್ತು. ಅಂಗ ಲಿಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ ಚನ್ನಬಸವಣ್ಣ.

೪. ದೇಹವೆಂಬ ಅರಮನೆಯಲ್ಲಿ ಮಹಾಲಿಂಗವೆಂಬರಸು ಮನ ವೆಂಬ ಸಿಂಹಾಸನದ ಮೇಲೆ ಮೂರ್ತಿಗೊಂಡು ಅಂತಃಕರಣಂಗ ಳೆಂಬ ಪರಿಚಾರಕರ ಕೈಯಿಂದ ಪಂಚೇಂದ್ರಿಯಂಗಳೆಂಬ ಪರಿವಾ ಣದಿಂದ ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ಪದಾರ್ಥಂಗಳನು ಎಡೆ ಮಾಡಿಸಿಕೊಂಡು ಸವಿವುತ್ತ ಆನಂದವೇ ಮೂರ್ತಿಯಾಗಿದ್ದ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರನು.

೫. ಎನ್ನ ಪಾದವೇ ಪಾದಶಿಲೆಯಾಗಿ, ಎನ್ನ ಕಾಲೇ ಕಡಹದ ಕಂಬಗಳಾಗಿ, ಎನ್ನ ತೊಳೇ ನಾಗವೇದಿಗೆಯಾಗಿ, ಎನ್ನ ಅಸ್ತಿಯೇ ಸುತ್ತಾಳ ಜಂತೆಯಾಗಿ, ಎನ್ನ ಅಧರವೇ ಒಪ್ಪಿಹ ಬಾಗಿಲಾಗಿ, ಎನ್ನ ಗುರು ಕರುಣವೇ ಲಿಂಗವಾಗಿ, ಎನ್ನಂಗವೇ ರಂಗಮಧ್ಯವಾಗಿ, ಎನ್ನ ಹೃದಯ ಕಮಲವೇ ಪೂಜೆಜಾಗಿ, ಎನ್ನ ಕಿವಿಗಳೇ ಕೀರ್ತಿಮುಖ ವಾಗಿ, ಎನ್ನ ಶಿರವೇ ಸುವರ್ಣ ವಾಗಿ, ಎನ್ನ ನೆನೆವ ನಾಲಿಗೆಯೇ ಗಂಟೆಯಾಗಿ,

ಕಲಶವಾಗಿ, ಎನ್ನ ನಯನವೇ ಕುಂದದ ಜ್ಯೋತಿಯಾಗಿ, ಎನ್ನ ಚರ್ಮವೇ ನಿರ್ಮಲ ಹೊದಿಕೆಯಾಗಿ, ಎನ್ನ ನೆನಹೇ ನಿನಗೆ ಉಪಾಹಾರವಾಗಿ ಗುರುಪುರದ ಮಲ್ಲಯ್ಯನಿಂದನಾಗಿ.

೬. ಉಳ್ಳವರು ಶಿವಾಲಯವ ಮಾಡುವರು. ನಾನೇನು ಮಾಡುವೆನಯ್ಯಾ? ಬಡವನಯ್ಯಾ. ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರ ಹೊನ್ನ ಕಲಶವಯ್ಯ ನೋಡಯ್ಯಾ! ಕೂಡಲಸಂಗಮದೇವಯ್ಯ ಕೇಳಯ್ಯಾ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

## ಪ್ರಾಣಲಿಂಗಿಯ ಆಚರಣೆ.

೧. ಸುಗುಣವೇ ಲಿಂಗಪ್ರಾಣಿಯಯ್ಯಾ. ದುರ್ಗುಣವೇ ವಾಯುಪ್ರಾಣಿಯಯ್ಯಾ. ಸುಗುಣ ನಿರ್ಗುಣವೆಂಬುಭಯವನತಿಗಳೆದು ಸುಖದುಃಖಾದಿಗಳ ಸಮಾನಂಗಂಡು, ಹಾಸ್ಯ, ವಿಸ್ಮಯ, ವಿರಹ, ಕರಣ ಹೇಸಿಕೆ ಇಂತೀ ಪ್ರಾಣದ ವಿಷಯ ಭ್ರಾಂತಿಗಳನತಿಗಳೆದು, ಪ್ರಾಣದ ಪೂರ್ವಾಶ್ರಯವ ನೀದು, ಲಿಂಗದ ನೆನಹು ಸಂಬಂಧಿಸಿ, ಲಿಂಗವೇ ಪ್ರಾಣವಾಗಿರಬಲ್ಲಡೆ, ಪ್ರಾಣಲಿಂಗಿಸ್ಥಲವೆಂಬೆನಯ್ಯಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೨. ಸರ್ಪನ ಸಲಹಿದಲ್ಲಿ ಬೇರೆ ವಿಷವ ಸಲಹಲುಂಟೇ? ಸಸಿವೃಕ್ಷಂಗಳ ಸಲಹುವಲ್ಲಿ ಬೇರೆ ಫಲವ ಸಲಹಲುಂಟೇ? ಕ್ರಿಯೆ ನಿರ್ಧರವಾದಲ್ಲಿ, ಆಚಾರಕ್ಕೆ ಅಂಕುರ. ಆಚಾರ ಅಂಕುರವಾದಲ್ಲಿ ದಿವ್ಯಜ್ಞಾನ ಪಲ್ಲವಿಸಿತ್ತು. ಆ ಪಲ್ಲವದ ಮರೆಯಲ್ಲಿ ಪರತರವಸ್ತು ಫಲವಾಗಿ, ತೊಟ್ಟು ಹರಿದು ಬಿದ್ದ ಹಣ್ಣು ಅಭೇದ್ಯ ಲಿಂಗಕ್ಕೆ ತೃಪ್ತಿಯಾಯಿತ್ತು. ಇಂತೀ ಭಾವದ ಭ್ರಮೆಯ ಕಳೆದು, ಜೀವ ವಿಕಾರವ ಹಿಂಗಿ, ನಾ ನೀನೆಂಬ ಉಭಯದ ಗುಟ್ಟು ಏನೂ ಇಲ್ಲದೆ ನಿಂದುದು



ಪ್ರಾಣಲಿಂಗಿಯ ಸಂಬಂಧ. ಆ ಸಂಬಂಧವ ಸ್ವೀಕರಿಸಿ ನಿಂದುದು ಪ್ರಾಣಲಿಂಗಿಯ ತೃಪ್ತಿ. ಇಂತೀ ನಿಜದಲ್ಲಿ ತಾವು ತಾವಾಗಬಲ್ಲಡೆ, ಆತನೇ ಐಕ್ಯಾನುಭಾವಿ ನಿಃಕಳಂಕ ಮಲ್ಲಿಕಾರ್ಜುನಾ.

೩. ಮೂಲದ್ವಾರದ ಬೇರ ಮೆಟ್ಟಿ, ಭೂಮಂಡಲವ ನೇರಿದೆ ಆಚಾರದ ಬೇರ ಹಿಡಿದು, ಐಕ್ಯದ ತುದಿಯನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀಗಿರಿಯ ನೇರಿದೆ. ಕೈವಿಡಿದು ತೆಗೆದು ಕೊಳ್ಳಾ ಚನ್ನಮಲ್ಲಿಕಾರ್ಜುನಾ.

೪. ಲಿಂಗವೇ ಪ್ರಾಣ, ಪ್ರಾಣವೇಲಿಂಗ, ಅಮೃತ ಪಂಚಾಕ್ಷರಂಗಳ ಪಂಚಾಮೃತದಿಂ ಮಜ್ಜನಕ್ಕೆರೆವ. ಆ ಲಿಂಗಕ್ಕೆ ಮನವೇ ಪುಷ್ಪ, ಬುದ್ಧಿಯೇ ಗಂಧ, ಚಿತ್ತವೇ ನೈವೇದ್ಯ, ಅಹಂಕಾರದಿಂದ ಆರೋಗಣೆಯ ಮಾಡಿಸಿ, ಪರಿಣಾಮದ ವೀಳೆಯವನಿತ್ತು, ಸ್ನೇಹದಿಂ ವಂದನೆಯಂ ಮಾಡಿ, ಪ್ರಾಣಲಿಂಗಕ್ಕೆ ಬಹಿರಂಗದ ಪೂಜೆಯಲ್ಲಿ ಅಂತರಂಗದ ಪೂಜೆಯ ಮಾಡುವದು. ಪ್ರಾಣಲಿಂಗಕ್ಕೆ ಅಂತರಂಗದ ವಸ್ತುವನೆಲ್ಲವ ತಂದು, ಬಹಿರಂಗದ ವಸ್ತುವಿನಲ್ಲಿ ಕೂಡಿ, ಲಿಂಗಾರ್ಚನೆಯ ಮಾಡಲು, ಅಂತರಂಗ ಬಹಿರಂಗ ಭರಿತವಾಗಿಪ್ಪನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

# ಸಾಮರಸ್ಯ

## ಭಾಗ ೪

# ಸಾಮರಸ್ಯ

## ಮೋಕ್ಷ.

೧. ಆಕಾಶದಲ್ಲಿ ತೋರುವ ಇಂದ್ರಚಾಪವಡಗುವದಕ್ಕೆ ಆಕಾಶವೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇನಯ್ಯ? ಗಾಳಿಯಿಂದ ತೋರಿದ ಸುಳಿಗಾಳಿಯಡಗುವದಕ್ಕೆ ಗಾಳಿಯೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಯ್ಯ? ಅಗ್ನಿಯಲ್ಲಿ ತೋರಿದ ಕಿಡಿಗಳು ಅಡಗುವದಕ್ಕೆ ಅಗ್ನಿಯೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಯ್ಯ? ಆದಿ ಅನಾದಿಯಿಂದತ್ತತ್ತವಾದ ಪರವಸ್ತುವಿನಲ್ಲಿ ರೂಪಿಸಿ ತೋರಿದನು ನಿಜೈಕ್ಯವಡಗುವದಕ್ಕೆ ಆ ಪರವಸ್ತುವೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಖಂಡೇಶ್ವರಾ?

೨. ಏನೆಂದೆಂಬೆನೇನೆಂದೆಂಬೆನೊಂದೆರಡಾದುದ? ಏನೆಂದೆಂಬೆನೇನೆಂದೆಂಬೆನೆರಡೊಂದಾದುದ? ಅವಿರಳ ಘನ ಲಿಂಗೈಕ್ಯವ ಮಹಾದಾನಿ ಕೂಡಲಸಂಗಮದೇವ ತಾನೇ ಬಲ್ಲ.

೩. ಚಿನ್ನದಿಂದಲಾದ ಹಲವು ಬಂಗಾರವಳಿದು ಕರಗಿದರೆ, ಮುನ್ನಿನ ಚಿನ್ನವೇ ಆದಂತೆ, ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೇ ಆದಂತೆ, ಚಿನ್ಮಯ ವಸ್ತುವಿನಿಂದ ಉದಯವಾದ ಚಿತ್ ಸ್ವರೂಪನಾದ ಶರಣನು ಆ ಚಿನ್ಮಯ ಪರವಸ್ತುವನೇ ಬೆರಸಿ ಪರಮ ಶಿವಯೋಗಿಯಾದನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

ಕನ್ನಡಿಯಲ್ಲಿ ನೋಡುವಲ್ಲಿ ಪ್ರತಿಬಿಂಬ ಕಾಣಿಸುತಿರ್ಪುದು.
೪. ಕನ್ನಡಿಯ ನೋಡುವಲ್ಲಿ ಪ್ರತಿಬಿಂಬ ಕಾಣಿಸುತಿರ್ಪುದು.
ಆ ನೋಟ ಮರಳಿದಲ್ಲಿ ಪ್ರತಿರೂಪ ನಿಜರೂಪದಲ್ಲಿ ಅಡಗಿದಂತೆ, ಅನು
ಪಮ ಬ್ರಹ್ಮದಲ್ಲಿ ನೆನಹು ತೋರಿ ಚಿತ್ತೆನಿಸಿತ್ತು. ಆ ಚಿತ್ತಿನಿಂದ
ಚಿನ್ನಾದ, ಚಿದ್ಬಿಂದು, ಚಿತ್ಕಳೆಗಳು ಆ ಮೂಲ ಚಿತ್ತು ಸ್ವರೂಪವಾದ
ಶರಣಂಗೆ ದೇಹ ಪ್ರಾಣಾತ್ಮಗಳಾಗಿ ಅಂಗಕ್ಕೆ ಪದಾರ್ಥಂಗಳಾಗಿ
ರ್ಪವು. ಆ ಪದಾರ್ಥವು ಲಿಂಗ ಮುಖಕ್ಕೆ ಸಮರಸ ವೇಧಿಸಿ, ಆ ಚಿತ್ತು
ಚಿಪ್ಪಿನವ ಬೆರೆಯಲು ಮುನ್ನಿನಂತೆ ಐಕ್ಯವಾಯಿತ್ತು ಅಖಂಡೇಶ್ವರಾ.
೫. ಆಕಾಶದಲ್ಲಿ ಗುಡಿಗಿ ಅಡಗುವ ಭೇದವ, ಮಿಂಚಿನ ಹರಿತ
ಸಂಚಾರವ, ಅದರ ಸಂಚವನಂಜಿಸುವ ಭೇದವ ಮುಂಚೆ ಬಲ್ಲಡೆ,
ವಸ್ತುವಿಪ್ಪೆಡೆಯ ಸಂಚವ ಬಲ್ಲರೆಂಬೆ, ನಿಷ್ಕಳಂಕ ಮಲ್ಲಿಕಾರ್ಜುನಾ.
ಅರ್ಥ:— ಮೇಘದಲ್ಲಿ ಹುಟ್ಟಿದ ಗುಡುಗು ಆ ಮೇಘದಲ್ಲಿ ಅಡ
ಗುವ ಹಾಗೆ ಮಿಂಚಿನಲ್ಲಿ ಹುಟ್ಟುವ ಪ್ರಕಾಶವು ಆ ಮಿಂಚಿನಲ್ಲಿ ಅಡ
ಗುವ ಹಾಗೆ ಅದರ ಕೂಟವ ಕೇಳಲ್ಪಡಿಸಿ, ಭಕ್ತನಾಗಿಯಾದರೂ
ವಿರಕ್ತನಾಗಿಯಾದರೂ ಪ್ರತಸ್ಥನಾಗಿಯಾದರೂ ತಾ ನಿಂದ ಸ್ಥಳದಲ್ಲಿ
ಮೀರಿ ಆಚರಿಸ ಬಲ್ಲಡೆ, ಬ್ರಹ್ಮದ ನಿಲುಕಡೆಯನ್ನು ಆ ಬ್ರಹ್ಮದಲ್ಲಿ
ಕೂಡುವ ಕೂಟವನು ಬಲ್ಲವರೆಂಬೆನೆಂಬುದರ್ಥ.
೬. ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು. ಸ್ಫಟಿಕದ
ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು. ವಾಯುವಿನ ಸಂಚಲದ
ನಿಲವಿನಂತೆ ಲಿಂಗೈಕ್ಯನ ಸಂಬಂಧವದು ಗುಹೇಶ್ವರಾ.
ಅರ್ಥ:— ಮುತ್ತಿನ ಚಿಪ್ಪಿನ ಸಂಗದಿಂದ ಉದಕವು ಬಲಿದು
ಮುತ್ತಾಗಿ ಮರಳಿ ಉದಕವಾಗದ ಹಾಗೆ ದೇಹಿಯಾಗಿರ್ದ ಆತ್ಮನು
ಲಿಂಗಸಂಗದಿಂದ ಲಿಂಗವಾದ ಬಳಿಕ ಮರಳಿ ದೇಹಿಯಾಗನೆಂಬುದೀಗ
ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು ಎಂಬ ಶಬ್ದಕ್ಕರ್ಥ.
ಭೂಮಿಯ ಸಂಗದಿಂದ ಮಾಸಿರ್ದ ಸ್ಫಟಿಕಾಂಗವು ಒಪ್ಪವಿಟ್ಟಲ್ಲಿ ತನ್ನ
ನಿರ್ಮಲದ ಪ್ರಕಾಶವೆಯಾಗಿಪ್ಪುದು ಹೇಗೆ ಹಾಗೆ ಶಿವಾಂಶಿಕನಾದ
ಆತ್ಮನು ದೇಹ ಸಂಗದಿಂದ ತನ್ನ ನಿಜವ ಮರೆದಿರ್ದಲ್ಲಿ ಜ್ಞಾನಕ್ರಿಯೆ



ಘಟಿಸಲು ಜೀವಭಾವವಳಿದು ಆತ್ಮನೆಲ್ಲ ಚಿತ್ಪ್ರಭಾಲಿಂಗವೆಯಾಗಿರ್ಪ
ನೆಂಬುದೀಗ ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು
ಎಂಬ ಶಬ್ದಕ್ಕರ್ಥ. ಆಕಾಶದಿಂದ ಉದಯಿಸಿದ ವಾಯು ಆಕಾಶದೊ
ಳಗೆ ಚರಿಸಿ ಆಕಾಶದೊಳಗೆ ಅಡಗುವಂತೆ, ಲಿಂಗದಿಂದುದಿಸಿದ ಶರ
ಣನು ಲಿಂಗಾಂಗ ಸಂಯೋಗಿಯಾಗಿ ಲಿಂಗದೊಳಗೆ ಚರಿಸಿ ಲಿಂಗದೊ
ಳೈಕ್ಯನಪ್ಪನು. ಅಂತು ಲಿಂಗಾಂಗದ ಐಕ್ಯವೆಂಬುದು ಅಭೇದ್ಯ
ಸಂಬಂಧವೆಂಬುದೀಗ ವಾಯುವಿನ ಸಂಚಲದ ನಿಲವಿನಂತೆ ಲಿಂಗೈ
ಕ್ಯನ ಸಂಬಂಧವದು ಎಂಬ ಶಬ್ದಕ್ಕರ್ಥ.
೭. ಪೃಥ್ವಿಯಡಗುವದಕ್ಕೆ ಅಪ್ಪುವೇ ಆಶ್ರಯವಾಗಿಪ್ಪುದು.
ಅಪ್ಪು ಅಡಗುವದಕ್ಕೆ ಅಗ್ನಿಯೇ ಆಶ್ರಯವಾಗಿಪ್ಪುದು. ಆ ಅಗ್ನಿಯಡ
ಗುವದಕ್ಕೆ ವಾಯುವೇ ಆಶ್ರಯವಾಗಿಪ್ಪುದು. ವಾಯು ಅಡಗುವದಕ್ಕೆ
ಆಕಾಶವೇ ಆಶ್ರಯವಾಗಿಪ್ಪುದು. ಆಕಾಶವಡಗುವದಕ್ಕೆ ಆತ್ಮನೇ
ಆಶ್ರಯನಾಗಿಪ್ಪುದು. ಆತ್ಮ ಅಡಗುವದಕ್ಕೆ ಆದಿಯೇ ಆಶ್ರಯವಾಗಿ
ಪ್ಪುದು. ಆದಿ ಅಡಗುವದಕ್ಕೆ ಅನಾದಿಯೇ ಆಶ್ರಯವಾಗಿಪ್ಪುದು.
ಅನಾದಿ ಅಡಗುವದಕ್ಕೆ ಶೂನ್ಯವೇ ಆಶ್ರಯವಾಗಿಪ್ಪುದು. ಶೂನ್ಯವಡ
ಗುವದಕ್ಕೆ ನಿರವಯವೇ ಆಶ್ರಯವಾಗಿಪ್ಪುದು. ನಿರವಯ ಅಡಗುವ
ದಕ್ಕೆ ನಿಜವೇ ಆಶ್ರಯವಾಗಿಪ್ಪುದು. ನಿಜವು ಅಡಗುವದಕ್ಕೆ ಅಖಂಡೇ
ಶ್ವರಾ ನಿಮ್ಮ ಪರಮ ಹೃದಯಕಮಂಡಲೇ ಆಶ್ರಯವಾಗಿರ್ಪುದಯ್ಯ.
೮. ವಾಯು ಹಸಿದು ಅಪೋಷಣವ ಕೊಂಬರೆ, ಎಡೆಬಡಿಸುವ
ರಿನ್ನಾವುದು? ಆಕಾಶ ಉರಿಗಂಜಿದಡೆ, ಸೇರುವ ನೆಳಲಿನ್ನಾವುದು?
ಭೂಮಿ ಭಯಕಂಜಿ ಓಡಿದರೆ, ಸೇರುವ ಠಾವಿನ್ನಾವುದು? ಇಂತಿವೆ
ಲ್ಲವೂ ಪರಿಪೂರ್ಣ ತನ್ನಲ್ಲಿ ತೋರಿದುದು ತನ್ನಲ್ಲಿಯೇ ಲೀಯವಲ್ಲದೆ
ಭಿನ್ನಭಾವವಿಲ್ಲ. ಆ ತೆರ ಶರಣನಿರವು. ಆತನೆಲ್ಲಿದ್ದರೂ ಅಜಾತಮಯ
ನೆಂಬೆ ಗೂಡಿನ ಗುಮ್ಮಟನಾಥನೊಡೆಯ ಅಗಸ್ತ್ಯೇಶ್ವರಲಿಂಗವು
ತೋರಿಯೂ ತೋರದ ನಿಲವು.

## ಸಾಮರಸ್ಯದ ಸ್ವರೂಪು.

೧, ಕ್ಷುಪ್ಪಿತಾಂಸೆ, ಶೋಕ, ಮೋಹ, ಮದ, ಮತ್ಸರವೆಂಬ ಷಡ್ವರ್ಗಂಗಳು ಇಲ್ಲದೆ ಇರುತಿರ್ಪನು. ನಾಹಂ ಕೋಹಂ ಸೋಹಂ ಎಂಬ ಭಾವ ವಿರಹಿತನಾಗಿರ್ಪನು. ಅಷ್ಟವಿಧಾರ್ಚನೆ ಷೋಡಶೋಪಚಾರ ರಹಿತನಾಗಿರ್ಪನು. ಕರ್ಪುರ ಅಗ್ನಿಸಂಯೋಗವಾಗಿ, ಕರ್ಪುರದ ಗುಣವಳಿದು ಅಗ್ನಿಯಾದಂತೆ ಲಿಂಗವ ನೆನೆನೆನೆದು ಲಿಂಗವೇ ತಾನಾಗಿಪ್ಪುದೀಗ ನಿಜೈಕ್ಯ ಸ್ಥಲವೆಂದೆಂಬೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೨. ಘೃತಘೃತವ ಬೆರಸಿವಂತೆ. ಕ್ಷೀರ ಕ್ಷೀರ ಬೆರಸಿದಂತೆ, ತೈಲ ತೈಲವ ಬೆರಸಿದಂತೆ, ನೀರು ನೀರ ಬೆರಸಿವಂತೆ, ಜ್ಯೋತಿ ಜ್ಯೋತಿಯ ಬೆರಸಿದಂತೆ, ಬಯಲು ಬಯಲ ಬೆರಸಿವಂತೆ, ಪ್ರಾಣ ಪ್ರಾಣ ಸಂಯೋಗವಾದ ಲಿಂಗ ಸಮರಸವ ನೇನೆಂಬೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ!

೩. ಮುಗಿಲ ಮರೆಯ ಸೂರ್ಯನಂತೆ, ನೆಲದ ಮರೆಯ ನಿಧಾನವಂತೆ, ಒರೆಯ ಮರೆಯ ಅಲಗಿನಂತೆ, ಹಣ್ಣಿನೊಳಗಣ ರಸದಂತೆ ಶರಣ ಶರೀರವ ಮರೆಗೊಂಡು ಪರಮ ಪಾವನ ಮೂರ್ತಿ ಪರಾಪರ ತಾನು ತಾನಾಗಿರ್ದವನೇನೆಂಬೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ!

೪. ಆಲಿಕಲ್ಲ ತರಿದು ಪುತ್ಥಳಿಯ ಕಂಡಿರಸುವಂತೆ, ಉಪ್ಪಿನ ಒಟ್ಟಣವನು ಉದಕದಲ್ಲಿರಿಸುವಂತೆ, ಕರ್ಪುರದ ಪ್ರಣತೆಯಲ್ಲಿ ಜ್ಯೋತಿಯು ಬೆಳಗುವಂತೆ ಸಿದ್ಧ ಸೋಮನಾಥ ಲಿಂಗ ಗ್ರಾಹಿ ಅವಗ್ರಾಹಕ.

೫. ದಿನದಿನವು ಕೂಡಿದಂತೆ, ಬಯಲು ಬಯಲ ಬೆರೆದಂತೆ, ಮಾತು ಮಾತು ಕಲಿತಂತೆ, ಜ್ಯೋತಿ ಜ್ಯೋತಿ ಒಂದಾದಂತೆ, ನಿಮ್ಮೊಳೊಡವೆರೆದ ನಿಜೈಕ್ಯನ ಕುರುಹು ಇಂತುಟಯ್ಯ.



೬. ಧರೆ ಗಗನ ದಶದಿಕ್ಕು ಎಂಬುದ ನಾನರಿಯೆನಯ್ಯ. "ಲಿಂಗ ಮಧ್ಯೇ ಜಗತ್ಸರ್ವಂ" ಎಂಬುದ ನಾನರಿಯೆನಯ್ಯ. ಲಿಂಗ ಸೋಂಕಿನ ಸುಖದೊಳಗೆ ಕೂಡಲಸಂಗಮದೇವಯ್ಯ ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನ ಭಾವವನರಿಯದೆ, "ಶಿವಶಿವಾ" ಎನುತಿರ್ದೆ ನಾನು.

೭. ಬೆಳಗು ಕತ್ತಲೆಯ ನುಂಗಿ ಒಳಗೆ ನಾನೊಬ್ಬನೆ ಆವೆ. ಕಾಂಬ ಕತ್ತಲೆಯ ಕಳೆದುಳಿದು ನಿಮಗಾನು ಗುರಿಯಾದೆ ಗುಹೇಶ್ವರಾ.

೮. ಬಾಲಕಿ ಹಾಲ ಸವಿದಂತೆ, ಮರುಳನ ಮನದ ನೆನಹಿನಂತೆ, ಮೂಗ ಕಂಡ ಕನಸಿನಂತೆ, ಮೆಯ್ಯರಿಯದ ನೆಳಲಿನಂತೆ, ಬಂಜೆಯ ಮನದ ಸ್ನೇಹದಂತೆ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು.

## ಲಿಂಗೈಕ್ಯನ ಸ್ಥಿತಿ.

### ಭಾಗ ೧

೧. ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯ ಎನಗೆ. ಅದೇನು ಕಾರಣವೆಂದಡೆ, ಎನ್ನ ತನುವೇ ನೀವೆಯಾದಿರಾಗಿ. ನಿಮ್ಮ ನೆನೆಹಿದೆನೆಂದರೆ, ಅರುಹಿಲ್ಲವಯ್ಯ ಎನಗೆ. ಅದೇನು ಕಾರಣವೆಂದಡೆ, ಆ ಅರುಹೇ ನೀವೆಯಾದಿರಾಗಿ ಅಖಂಡೇಶ್ವರಾ ನಿಮ್ಮೊಳಗೆ ನಾನು ಉರಿಗೊಂಡ ಕರ್ಪುರದಂತಿರ್ದೆನಯ್ಯ.

೨. ಕಾಯವಿಲ್ಲದ ಭಕ್ತ, ಜೀವವಿಲ್ಲದ ಭಕ್ತ, ಮಾಯೆ ಇಲ್ಲದ ಭಕ್ತ, ಮರಹಿಲ್ಲದ ಭಕ್ತ, ಅರುಹಿಲ್ಲದ ಭಕ್ತ, ಒಳಗಿಲ್ಲದ ಭಕ್ತ, ಹೊರಗಿಲ್ಲದ ಭಕ್ತ, ತಾನಿಲ್ಲದ ಭಕ್ತ, ಇದಿರಿಲ್ಲದ ಭಕ್ತ, ತಾನಿದಾರೆಂಬುದೇನೂ ಇಲ್ಲದ ಪರಮನಲ್ಲಿ ಬೆರಸಿ ಬೇರಿಲ್ಲದ ಪರಮ ಭಕ್ತನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೩. ಭಾವ ಭಾವಿಸಬಲ್ಲುದೇ? ಭಾವ ಭಾವಿಸಲರಿಯದು. ಅದೇನು ಕಾರಣ? ಭಾವದಲ್ಲಿ ಭಾವಿಸುವ ಭಾವಿಕ ತಾನಾಗಿ. ನೇತ್ರ

ನೋಡಬಹುದೇ? ನೇತ್ರ ನೋಡಲರಿಯದು. ಅದೇನು ಕಾರಣ?
ನೇತ್ರದ ಬಾಗಿಲಲ್ಲಿ ನಿಂದು ನೋಡುವಾತ ತಾನಾಗಿ. ಶ್ರೋತ್ರ ಕೇಳ
ಬಲ್ಲುದೇ? ಶ್ರೋತ್ರ ಕೇಳಲರಿಯದು. ಅದೇನು ಕಾರಣ? ಶ್ರೋತ್ರದ
ಬಾಗಿಲಲ್ಲಿ ನಿಂದು ಕೇಳುವಾತ ತಾನಾಗಿ. ನಾಸಿಕ ಪರಿಮಳವ ವಾಸಿಸ
ಬಲ್ಲುದೇ? ವಾಸಿಸಲರಿಯದು. ಅದೇನು ಕಾರಣ? ನಾಸಿಕದ ಬಾಗಿ
ಲಲ್ಲಿ ನಿಂದು ವಾಸಿಸುವಾತ ತಾನಾಗಿ. ಜಿಹ್ವೆ ರುಚಿಸಬಲ್ಲುದೇ?
ಜಿಹ್ವೆ ರುಚಿಸಲರಿಯದು. ಅದೇನು ಕಾರಣ? ಜಿಹ್ವೆಯ ಕೊನೆಯಲ್ಲಿ
ನಿಂದು ರುಚಿಯ ನಿಶ್ಚೈಸುವಾತ ತಾನಾಗಿ. ಜಂತ್ರಗಳ ನಾಡಿಸುವ
ಯಂತ್ರವಾಹಕ ತಾನಾಗಿ. ಇದುಕಾರಣ ಕೂಡಲ ಚನ್ನಸಂಗಯ್ಯ
ನಿಮ್ಮ ಶರಣ ಸರ್ವಾಂಗಲಿಂಗಿ.

೪. ಅಂಗ ಲಿಂಗವ ವೇಧಿಸಿ, ಅಂಗಲಿಂಗದೊಳಗಾಯಿತ್ತು. ಮನ
ಲಿಂಗವ ವೇಧಿಸಿ, ಮನ ಲಿಂಗದೊಳಗಾಯಿತ್ತು. ಭಾವ ಲಿಂಗವ
ವೇಧಿಸಿ, ಭಾವ ಲಿಂಗದೊಳಗಾಯಿತ್ತು. ಚನ್ನಮಲ್ಲಿಕಾರ್ಜುನ ನಿನ್ನ
ಒಲುಮೆಯ ಸಂಗದಲ್ಲಿರ್ದು ಸ್ವಯಲಿಂಗವಾಯಿತ್ತು.

೫. ಕಾಯಗುಣ ಕೆಟ್ಟು, ಮತ್ತೆ ಅರ್ಚನೆ ಹಿಂಗಿತ್ತು. ಪ್ರಾಣ
ಗುಣ ಕೆಟ್ಟು ಮತ್ತೆ ಅರ್ಪಿತ ಹಿಂಗಿತ್ತು. ಭಾವಗುಣ ಕೆಟ್ಟು ಮತ್ತೆ
ಉಭಯ ಜಂಜಡ ಹಿಂಗಿತ್ತು. ಇದುಕಾರಣ ನಮ್ಮ ಗುಹೇಶ್ವರನ ಶರ
ಣರು ಲಿಂಗಭೋಗೋಪ ಭೋಗವೆಂಬ ಖಂಡಿತ ಬುದ್ಧಿಯ ಮೀರಿ,
ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯವಾದರು.

೬. ಉಪಾಧಿಕ ಮನವು, ಉಪಾಧಿರಹಿತ ಮನವು, ನಿಂದಲ್ಲಿ
ನಿವಾತವಾಯಿತ್ತು. ಲಿಂಗೋದಯ ಪ್ರಜ್ವಲಿಸುತ್ತಿದೆ, ಗುಹೇಶ್ವರ
ಲಿಂಗವು ತಾನೇಯಾಗಿ!

೭. ವಿಶ್ವತನು, ದನುಜಜಿತನು, ಸರ್ವಜಿತನು, ಸುತ್ರಾಮಜಿ
ತನು, ಸುಸಂವೇದ್ಯನು, ವೇದನಾದಾತೀತನು, ತುರೀಯ ಪರಮಾ



ನಂದ ನಿರವಯ ಕೋಟಿ ಸೂರ್ಯ ಪ್ರಭೆಯ ಬೆಳಗಿನ ಸಹಸ್ರ ಕಿರಣ
ದಗ್ರ ಪಟಲದ ಬೆಳಗು ಕೂಡಲ ಸಂಗಮದೇವಾ.

೮. ಪಶ್ಚಿಮ ಗಿರಿಯ ಚಿತ್ಸೂರ್ಯ ಉದಯವಾದುದ ಕಂಡೆ!
ಸುತ್ತು ಮುತ್ತಿನ ಕತ್ತಲೆಯೆಲ್ಲ ಅತ್ತಿತ್ತ ಹರಿದು ಹೋಹುದ ಕಂಡೆ!
ಹತ್ತು ದಿಕ್ಕಿನ ಒಳಹೊರಗೆಲ್ಲ ಬೆಳಗಿನ ಮೊತ್ತವೇ ತುಂಬಿ ತುಂಬಿದ್ದ
ಕಂಡು ಮುಚ್ಚಿದ ಕಮಲಂಗಳೆಲ್ಲ ಬಿಚ್ಚಿ ಅರಳಾಗಿ, ಅಚ್ಚ ಹೊಸ
ಗಂಧವು ದಿಶೆದಿಶೆಗೆ ಎಸೆದುದ ಕಂಡೆ! ಇಂತಿದರ ಕೌಶಲವ ಕಂಡು
ಬೆರಗಾದೆನಯ್ಯ ಅಖಂಡೇಶ್ವರಾ.

೯. ಬೆಳಗಿನೊಳಗಿನ ಬೆಳಗು ಮಹಾ ಬೆಳಗೆಂಬೆ. ಪ್ರಸಾದದಲ್ಲಿ
ಒದಗಿದ ಪ್ರಸಾದಿಯ ಪರಿಣಾಮದ ಪರಮಾನಂದವನೇನೆಂದುಪಮಿ
ಸುವೆನಯ್ಯ? ಪರಮಾಶ್ರಯವೇ ತಾನಾಗಿ, ಕೂಡಲಸಂಗಮದೇ
ವಯ್ಯ, ಚನ್ನಬಸವಣ್ಣನೆಂಬ ಮಹಾಪ್ರಸಾದಿ ಎನ್ನ ವಾಙ್ಮನಕ್ಕೆ
ಅಗೋಚರನಾಗಿರ್ದುದ ನಾನೇನೆಂದುಪಮಿಸುವೆನಯ್ಯ.

೧೦. ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು. ವಾಯು
ನುಂಗಿದ ಪರಿಮಳದಂತೆ ಲಿಂಗೈಕ್ಯವು. ಉರಿಯೊಳಡಗಿದ ಕರ್ಪೂರ
ದಂತೆ ಲಿಂಗೈಕ್ಯವು. ಭಾವವನರಿಪಿದ ಬಯಲಿನಂತೆ ಲಿಂಗೈಕ್ಯವು. ಅರಿವು
ನುಂಗಿದ ಮರಹಿನಂತೆ ಲಿಂಗೈಕ್ಯವು. "ಯತೋವಾಚೋ ನಿವರ್ತಂತೆ
ಅಪ್ರಾಪ್ಯ ಮನಸಾಸಹ" ಎಂದುದಾಗಿ ವಾಙ್ಮನಕ್ಕೆ ಅಗೋಚರವಾದ
ಮಹಾಘನ ಶರಣನ ನೊಳಕೊಂಡು ಥಳಿಥಳಿಸಿ ಬೆಳಬೆಳಗಿ ಹೊಳೆ
ವುತ್ತ ನಿಃಶಬ್ದ ಬ್ರಹ್ಮನಾಗಿರ್ಪನಯ್ಯ ನಮ್ಮ ಶಂಭು ಜಕ್ಕೇಶ್ವರನು.

೧೧. ಎಲ್ಲಿ ನೋಡಿದಡಲ್ಲಿ ನೀನೇ ದೇವಾ. ಎಲ್ಲಿ ಮುಟ್ಟಿದಡಲ್ಲಿ
ನೀನೇದೇವಾ. ಎಲ್ಲಿ ಭಾವಿಸಿದಲ್ಲಿ ನೀನೇ ದೇವಾ. ಎಲ್ಲೆಡೆಯಲ್ಲಿ ನಿಮ್ಮ
ಮಹಾಪ್ರಭೆಯೇ ಮುಸಕಿತಾಗಿ, ಅಖಂಡೇಶ ನಾನು ನೀನೆಂಬುದಕ್ಕೆ
ತೆರಹಿಲ್ಲ ದೇವಾ.

# ಲಿಂಗೈಕ್ಯನ ಸ್ಥಿತಿ.
## ಭಾಗ ೨

೧. ನಿಮ್ಮಿಂದ ಲಾನಾದೆನು. ಎನಗೆ ದೇಹೇಂದ್ರಿಯ ಮನಃ ಪ್ರಾಣಾದಿಗಳಾದವು. ಆ ದೇಹೇಂದ್ರಿಯ ಮನಃಪ್ರಾಣಾದಿಗಳಿಗೆ ಕರ್ತನು ನೀನೇ. ಅವರ ಆಗುಚಾಗು ಸುಖದುಃಖ ಎಲ್ಲವೂ ನೀನೇ. ಒಳಗು ನೀನೇ, ಹೊರಗು ನೀನೇ. ನಾನೆಂಬುದು ನಡುವಣ ಭ್ರಾಂತು. ನಿನ್ನ ವಿನೋದ ನೀನೇ ಬಲ್ಲೆ ದೇವರಾಯ ಸೊಡ್ಡಳಾ.

೨. ಎನ್ನೊಳಗೆ ನೀನು ಪ್ರವೇಶ. ನಿನ್ನೊಳಗೆ ನಾನು ಪ್ರವೇಶ. ದೇವ ನೀನಲ್ಲದಿಲ್ಲ. ಭಕ್ತ ನಾನಲ್ಲದಿಲ್ಲ. ಈ ಪರಿಯ ಮಾಡುವರಿನ್ನಾರು ಹೇಳಾ? ಎನಗೆ ನೀನೇಗತಿ. ನಿನಗೆ ನಾನೇಗತಿ. ಇನ್ನೇಕೆ ಜವನಿಕೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ?

೩. ಎನಗೆ ನೀನು ಪ್ರಾಣ. ನಿನಗೆ ನಾನು ಪ್ರಾಣ. ಇನ್ನೇನೋ? ಇನ್ನೇನೋ? ಹಂಗಿಲ್ಲ, ಹರಿ ಇಲ್ಲ. ಮತ್ತೇನೂ ಪ್ರಪಂಚಿಲ್ಲಾಗಿ, ನೀ ನಡಿಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ, ನೀ ನೋಡಿಸಿದಂತೆ ನೋಡಿದೆ, ನೀ ಮಾಡಿಸಿದಂತೆ ಮಾಡಿದೆ. ಈ ಸುಖದುಃಖ ಪುಣ್ಯ ಪಾಪಾತ್ಮಕ ನೀನೇ ಅಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

೪. ಎನ್ನ ಗತಿ ನಿನ್ನ ಗತಿ. ಎನ್ನ ಕೇಳಿಕೆ ನಿನ್ನ ಕೇಳಿಕೆ. ಎನ್ನ ನೋಟವೇ ನಿನ್ನ ನೋಟ. ಎನ್ನಂಗ ಸ್ಪರ್ಶನವೇ ನಿನ್ನಂಗ ಸ್ಪರ್ಶನ. ಎನ್ನಂಗ ಸುಖೋಪಭೋಗವೇ ನಿನ್ನಂಗ ಸುಖಭೋಗ. ಎನ್ನೊಳಗೆ ನೀನು, ನಿನ್ನೊಳಗೆ ನಾನು. ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ ಎನ್ನ ಸೋಂಕಿತೆಲ್ಲ ನಿನ್ನ ಪೂಜೆಯಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

೫. ಎನ್ನರಿವೆ ನಿನ್ನರಿವಯ್ಯ. ನಿನ್ನರಿವೇ ಎನ್ನರಿವಯ್ಯ. ಎನ್ನ ಜೀವನವೇ ನಿನ್ನ ಜೀವನವಯ್ಯ. ನಿನ್ನ ಜೀವನವೇ ಎನ್ನ ಜೀವ



ನವಯ್ಯ. ಎನ್ನ ಸುಖವೇ ನಿನ್ನ ಸುಖವಯ್ಯ. ನಿನ್ನ ಸುಖವೇ ಎನ್ನ ಸುಖವಯ್ಯ. ಎನಗೆ ನಿನಗೆ ಸಂದು ಸಂಶಯವಿಲ್ಲವಯ್ಯ. ಸಂದುಂಟೆಂದು ನುಡಿವುದೆಲ್ಲವು ಬಂಧದ ನುಡಿ ಕಾಣಿರೋ. ಆದಿಯುಲು ಸಂದಿಲ್ಲ, ಅನಾದಿಯುಲು ಸಂದಿಲ್ಲ, ಎಂದೂ ಸಂದಿಲ್ಲ ಶರಣ ಲಿಂಗಕ್ಕೆ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೬. ಎನ್ನ ಕಾಯೊಳಗೆ ನಿನ್ನ ಕಾಯವಿಪ್ಪುದು. ನಿನ್ನ ಕಾಯೊಳಗೆ ಎನ್ನ ಕಾಯವಿಪ್ಪುದು. ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು. ನಿನ್ನ ಜೀವದೊಳಗೆ ಎನ್ನ ಜೀವವಿಪ್ಪುದು. ಎನ್ನ ಪ್ರಾಣದೊಳಗೆ ನಿನ್ನ ಪ್ರಾಣವಿಪ್ಪುದು. ನಿನ್ನ ಪ್ರಾಣದೊಳಗೆ ಎನ್ನ ಪ್ರಾಣವಿಪ್ಪುದು. ಎನ್ನ ಇಂದ್ರಿಯಂಗಳೊಳಗೆ ನಿನ್ನ ಇಂದ್ರಿಯಂಗಳಿಪ್ಪವು. ನಿನ್ನ ಇಂದ್ರಿಯಂಗಳೊಳಗೆ ಎನ್ನ ಇಂದ್ರಿಯಂಗಳಿಪ್ಪವು. ಎನ್ನ ವಿಷಯಂಗಳೊಳಗೆ ನಿನ್ನ ವಿಷಯಂಗಳಿಪ್ಪವು. ನಿನ್ನ ವಿಷಯಂಗಳೊಳಗೆ ಎನ್ನ ವಿಷಂಗಳಿಪ್ಪವು. ಎನ್ನ ಕರಣಂಗಳೊಳಗೆ ನಿನ್ನ ಕರಣಂಗಳಿಪ್ಪವು. ನಿನ್ನ ಕರಣಂಗಳೊಳಗೆ ಎನ್ನ ಕರಣಂಗಳಿಪ್ಪವು. ಇಂತೀ ನಾನೇ ರೂಪು ನೀನೇ ನಿರೂಪು. ರೂಪಿಂಗೆ ಕೇಡುಂಟು. ನಿರೂಪಿಂಗೆ ಕೇಡಿಲ್ಲ. ನಾನು ಕರ್ಪುರ ನೀನೇ ಜ್ಯೋತಿ. ಆನು ನಿಮ್ಮೊಳಗಾದೆನು ಕೂಡಲಚನ್ನಸಂಗಮ ದೇವಾ.

# ನಿರವಯ.

೧. ಬಯಲು ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ. ಬಯಲು ಜೀವನ ಬಯಲು ಭಾವನೆ ಬಯಲು ಬಯಲಾಗಿ ಬಯಲಾಯಿತ್ತಯ್ಯ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರಾ.

೨ ತನು ಬಯಲು ನಿರವಯದೊಳಗಡಗಿತ್ತು. ಮನ ಬಯಲು ನಿರವಯದೊಳಡಗಿತ್ತು. ಭಾವ ಬಯಲು ನಿರವಯದೊಳಡಗಿತ್ತು. ಬಯಲು ಬಯಲು ಬೆರಸಿ ಬಯಲೇಯಾಯಿತ್ತು. ಕೂಡಲಚನ್ನಸಂಗಯ್ಯನೆಂಬ ನುಡಿಯಡಗಿತ್ತು.

೩. ತನು ನಷ್ಟ, ಮನ ನಷ್ಟ, ನೆನಹುನಷ್ಟ, ಭಾವ ನಷ್ಟ, ಜ್ಞಾನ ನಷ್ಟ, ಇಂತೀ ಪಂಚ ನಷ್ಟದೊಳಗೆ ನಷ್ಟನಾದೆನು. ಆ ನಷ್ಟದೊಳಗೆ ನೀನು ನಷ್ಟವಾದೆ. ಕಲಿದೇವರ ದೇವನೆಂಬ ನುಡಿ ನಿಶ್ಶಬ್ದ ಬ್ರಹ್ಮಮುಚ್ಯತೆ.

೪. ತನುವಳಿಯಿತ್ತು, ಮನವಳಿಯಿತ್ತು, ಭಾವವಳಿಯಿತ್ತು, ಬಯಕೆಯಳಿಯಿತ್ತು, ನಿಜವೆಂಬುದಳಿಯಿತ್ತು. ನಾನು ಸೀಮೆಯ ಬಯಲಲ್ಲಿ ಕಲಿದೇವರ ದೇವನಲ್ಲಿ ಬೆರಸಿ ಬೇರಿಲ್ಲದಿರ್ದೆನು.

೫. ಭಾವವಿಲ್ಲದ ಬಯಲು, ಜೀವವಿಲ್ಲದ ಬಯಲು, ಮೌನವಿಲ್ಲದ ಬಯಲು, ಅಖಂಡೇಶ್ವರನೆಂಬ ಬಯಲೊಳಗೆ ನಿವೃತ್ತಿಯಾಗಿದ್ದೆನು.

೬. ಎಲವ್ವೋ, ಎಲವ್ವೋ, ನಿನ್ನ ಕೂಡದನ್ನಕ್ಕರ ಮುನ್ನ ಕಾಣೆ, ಕೂಡಿದಬಳಿಕ, ಮತ್ತೆ ಕಾಣೆನಯ್ಯ. ನಿನ್ನ ಕೂಡಿದ ಸುಖದಿಂದ ನಾನೇನೆಂದರಿಯೆನವ್ವ. ಎನ್ನ ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯ ನೀನೇ ಬಲ್ಲೆ.



೭. ಹೊಳೆವ ಕೆಂಜೆಡೆಗಳು, ಮಣಿಮುಕುಟ, ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ. ನಾನು ಕಂಡೆನ್ನ ಕಂಗಳ ಬರ ಹಿಂಗಿತ್ತೆಂದು, ಕಂಡ ಕಂಡರೆಲ್ಲರ ಹೆಂಡಿರಾಗಿ ಆಳುವ ಗುರುವನ ಕಂಡೆ. ನಾನು ಜಗದಾದಿ ಶಕ್ತಿಯೊಳು ಬೆರಸಿ, ಪರಮ ಗುರು ಚನ್ನ ಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

# ಕಠಿಣ ಶಬ್ದಗಳ ಅರ್ಥ.

ಅಚ್ಚುಕ (ಅಚ್ಚುಗ) = ಸ್ವರೂಪ, ಆಕೃತಿ, (೨) ಗಟ್ಟಿಯಾಗಿರುವ ಸ್ಥಿತಿ

ಅಜಾಂಡ = ಬ್ರಹ್ಮಾಂಡ

ಅಡಗ = ಮಾಂಸ

ಅನಲ = ಬೆಂಕಿ

ಅನಿಲ = ವಾಯು

ಅನಿಮೇಷ (ಅನುಮಿಷ) = ಎವೆ ಇಕ್ಕದ, (೨) ದೇವ

ಅಮೇಧ್ಯ=ಅಶುದ್ಧ ವಸ್ತು, ಮಲ

ಅರತು ಹೋಗು = ಅಡಗು, ನಾಶ ವಾಗು

ಅರಿವು = ಜ್ಞಾನ

ಅರುಹು = ತಿಳಿಸು

ಅಲಗು = ಕತ್ತಿ

ಅಹರ್ನಿಶ = ಯಾವಾಗಲೂ

ಆಪೋಷಣ = ಸೀಪುವದು (೨) ಆಹಾರ

ಆಯತ = ಸುತ್ತುಗಟ್ಟಲ್ಪಟ್ಟ, ಬಂಧಿಸಲ್ಪಟ್ಟ, ಒಳಗಾದ

ಆರೋಗಣೆ ಮಾಡು = ಊಟ ಮಾಡು

ಆಲಿ = ಕಣ್ಣು

ಆಳಿ = ದಾಸಿ

ಇಂದ್ರಚಾಪ = ಕಾಮನಬಿಲ್ಲು

ಉತ್ತಮಾಂಗ = ತಲೆ

ಉಪಾಧಿ (ಉಪಾಧಿಕೆ) = ಮೇಲೆ ಇರುವದು, ತೋರಿಕೆ, ಸುಳ್ಳು

ಎಕ್ಕಲ = ದೊಡ್ಡ, ಘನತರವಾದ (೨) ಕಾಡಹಂದಿ

ಎಣೆ = ಸಮಾನ

ಎರಕ = ಬೆಸಿಕೆ (೨) ಪ್ರೀತಿ

ಎಲ್ಲೆಡೆ = ಎಲ್ಲಕಡೆ

ಏತ = ಮಟ್ಟಿ, ಯಾತ

ಒಕ್ಕುಡಿತೆ = ಒಂದೆ ಬೊಗಸೆ

ಒಗತನ = ಬಾಳುವೆ, ನಡತೆ

ಒಟ್ಟಣ = (ಒಟ್ಟಿಲು) ಸಮೂಹ

ಒಡವೆರೆ = ಕೂಡು

ಓಗರ = ಅನ್ನ

ಓವು = ಕಾಪಾಡು

ಕಟಕ = ಆಭರಣ

ಕಟ್ಟಣೆ (ಕಟ್ಟಳೆ) = ನಿಯಮ

ಕಡಹ = ಒಂದು ತರದ ಗಿಡ (೧)
ಕಡಿಯುವದು, ಮಂಥನ
ಮಾಡುವದು (೨) ಬಲೆ
ಕಂಥೆ = ರಗಟೆ, ದಪ್ಪಾದ ಅರಿವೆ
ಕರ = ಅತಿಶಯ, ಬಹಳ, ದೊಡ್ಡ
ಕಳಾಕುಳ = ಚಿಂತೆಯಿಂದ ತುಂ-
ಬಿದ

ಕೀಳಾಳು = ದುರ್ಬಲ ಮನುಷ್ಯ
ಕುಂಭಿನಿ = ಪೃಥ್ವಿ
ಕೋಟಲೆ = ತೊಂದರೆ
ಗರಳ = ವಿಷ
ಗರುವ = ಶ್ರೇಷ್ಠ
ಗಸಣೆ = ಚಿಂತೆ, ತೊಂದರೆ
ಗಂಜಳ = ಹೊಲಸು, ರಾಡಿ
ಗಿಣಿಲು (ಗಿಳಿಲು) = ಗಿಂಡಿ
ಗುಳಿ = ತಗ್ಗು
ಗೊತ್ತು = ಗುರುತು (೧) ನೇಮ
(೨) ಜ್ಞಾನ (೩) ಮನೆ,
ಆಶ್ರಯ,
ಗೋರಿಗೊಳಿಸು = ಮನವೊಲಿಸು,
ಎಳೆಯಲ್ಪಡು
ಚುಳುಕು = ಸೂಕ್ಷ್ಮ, ಸಣ್ಣ
ಜವ = ಯಮ
ಜವನಿಕೆ = ತೆರೆ, ಪಡದೆ
ಜಂಜಡ = ತೊಂದರೆ
ಜಾತವೇದಿ = ಅಗ್ನಿ

ಟೊಣೆ = ಸುಳ್ಳು ಹೇಳು, ತರ್ಕಿಸು
ತಗರ = ತುಡುಗ (೧) ಅಯೋಗ್ಯ
ವಾದದ್ದು (೨) ಟಗರು
ತತಿ = ಸಮೂಹ
ತನೂರುಹ = ಮೈದೊಗಲು
ತಬ್ಬಿಬ್ಬು = ಗಾಬರಿ
ತಾತಿ = ತಾಯಿತ
ತಿರ್ಯಗ್ಜಾತಿ = ಪಕ್ಷಿಗಳು
ತಿಂಥಿಣಿ = ಸಮೂಹ (೧) ದಟ್ಟ
ತೂರ್ಯ (ತುರೀಯ) = ಸಂತೋ
ಷ, ಪರಮ ಸುಖ, ಮೋಕ್ಷ
ಸುಖ

ತೆರಹು = ಸ್ಥಳ (೧) ಬರಿದಾದ ಸ್ಥಿತಿ
(೨) ವೇಳೆ
ದಿಂಡೆ = ದುಂಡಾದ ದೊಡ್ಡ ಕಲ್ಲು
(೧) ಬುದ್ಧಿ ಇಲ್ಲದವ, ಅಜ್ಞಾನಿ
ದೀಪ್ತಿ = ಪ್ರಕಾಶ
ನನೆ = ಮೊಗ್ಗು. ಹೂವು
ನಿಧಾನ = ದ್ರವ್ಯ ಸಂಚಯ
ನಿರವಯ = ನಿರಾಕಾರ, ಬಯಲು
ನಿರಾಳ = ಅಲುಗಾಡದ ಸ್ಥಿತಿ,
ಸಮಾಧಾನ ಸ್ಥಿತಿ,
(೧) ಸ್ವಚ್ಛ, ಶುದ್ಧ
ನಿಲುಗಡೆ = ಸ್ಥಿತಿ, ರೀತಿ, ಸ್ವರೂಪ
ನೀಳ = ಉದ್ದ, ದೊಡ್ಡ
ನೆರಳು (ನೆಳಲು) = ಆಶ್ರಯ



ನೇಣು = ಹಗ್ಗ
ನೋನು (ನೂನು) = ಬೇಡಿಕೊಳ್ಳು
(೧) ಹರಿಕೆ ಹೊರು
(೨) ಪೂಜೆ ಮಾಡು
ಪರಿಣಮಿಸು = ಫಲವಾಗು
(೧) ಆನಂದ ಪಡು
ಪರಿಣಾಮ = ಅಂತ್ಯ
(೧) ಸಂತೋಷ
ಪರ್ಯಾಯ = ರೀತಿ, ವಿಧ,
ರೂಪ,

ಪ್ರಣುತೆ = ಪಣತೆ
ಪಾತೆ = ಮಡಿ.
ಪಾರು = ಇಚ್ಛಿಸು (೧) ಜಿಗಿ.
ಪಿಪಾಂಸೆ = ನೀರಡಿಕೆ
ಪುದುಕುಳಿಗೊಳ್ಳು = ಆಚ್ಛಾದಿಸ
ಲ್ಪಡು (೧) ತೊಂದರೆಗೆ ಒಳ
ಗಾಗು.

ಪೆಂಪು = ಸೌಂದರ್ಯ
ಫೇನ = ಬುರುಗು
ಬರಬರ = ತೀವ್ರವಾಗಿ
ಬಂದಿಗಟ್ಟು = ಬಂಧನ ಮಾಡು
ವವ

ಬಿತ್ತು = ಬೀಜ
ಬುದ್ಬುದ = ಗುಳ್ಳೆ
ಬೂಟಕ = ಸುಳ್ಳು ಹೇಳುವವ
(೧) ವೇಷಧಾರಿ
(೨) ಬಢಾಯಿ ಹೇಳುವವ

.ಬೆನಕ = ವಿನಾಯಕ, ಗಣಪತಿ
ಭೈತ್ರ = ನಾವು, ದೋಣಿ
ಮರೀಚಿ = ಕಿರಣ
ಮರುಜೀವಣಿ = ತಿರುಗಿ ಜೀವ
ಕೊಡು

ಮಾಣು = ಬಿಡು
ಮಿಟ್ಟೆ = ಎತ್ತರವಾದ ಸ್ಥಲ, ದಿನ್ನೆ
ಮುರುಟು = ಮುರಿಗಿಯಾಗು
ಮೆಟ್ಟು = ಹೆಜ್ಜೆ
ಮೆಯ್ಗೆಡು = ಶರೀರವನ್ನು
ಉಬ್ಬಿಸು, (೧) ಉಲ್ಹಾಸ
ಬಡು

ಮೊತ್ತ = ಗುಂಪು
ರೂಹು = ರೂಪು
ಲೊಟ್ಟೆ = ಪೊಳ್ಳು. ಬರಿದಾದ
ಲೋಗರು = ಜನರು
ವಜೆಗೊಳಿಸು = ಬಿಟ್ಟುಬಿಡು
ವಾಯ = ಸುಳ್ಳು (೧) ಕಾಪಟ್ಯ
ವಾರಿಕಲ್ಲು = ಆಣೆಕಲ್ಲು
ವೇಧಿಸು = ಸಂಬಂಧಿಸು
ವ್ಯೋಮ = ಆಕಾಶ
ಶೋಣಿತ = ರಕ್ತ
ಸಯ = ಯೊಗ್ಯವಾದದ್ದು
(೧) ತಪ್ಪಿಲ್ಲದೆ ಇರುವ
ಸ್ಥಿತಿ (೨) ಸೌಂದರ್ಯ
ಸಂಚ = ಸಮೂಹ, ಕೂಟ
(೧) ಮರ್ಮ, (೨) ಗುಪ್ತ ವಸ್ತು

ಸುಪ್ಪಾಣಿ= ಹೊಳವುಳ್ಳ

ಸುರಿಗೆ = ಕತ್ತಿ

ಸೈವೆರಗು = ವಿಶೇಷ ಆಶ್ಚರ್ಯ

ಸೊಣಗ = ನಾಯಿ.

ಹಗರಣ = ಚಕ್ಯಂದ, ಡೌಲು (೨)ಆನಂದ (೩)ಡೌಲಿನ ಮಾತು

ಹಡಲಿಗೆ = ಒಂದು ತರದ ಬುಟ್ಟಿ, ಹರಿವಾಣ, ತಟ್ಟೆ,

ಹಣತೆ = ಪಣತೆ

ಹರಿವರಿದು = ಸುತ್ತಲು, ವಿಸ್ತಾರವಾಗಿ

ಹಸೆ = ಆಸನ(೨) ಶೃಂಗರಿಸಿದ ಸ್ಥಳ

ಹಳಿ = ಹಿಂಡು(೨) ಮುರಿ, ಒಡೆ.

ಹೆರಸಾರು = ಹೊರಗೆ ಹೋಗು

ಹೊರಟೆ = ಪೊಳ್ಳಾದದ್ದು (೨) ನಿರರ್ಥಕವಾದದ್ದು, ಹುರುಳಿಲ್ಲದ್ದು

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಕನ್ನಡ ಪಿ. ಎ. ಹಾಳಿಯಿಂದ ಪುರಸ್ಕೃತ ಪಡೆದ
ವಚನ ಪಿತಾಮಹ ಡಾ|| ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ
ವಿಜಾಪೂರ.

---

The Vijay College
LIBRARY,
VIJAY COLLEGE,
BIJAPUR.